ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 13 ಶುಕ್ರವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 148 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಸಿಎಂಗೆ ಟೆನ್ಷನ್






ಬೆಂಗಳೂರು, ಸೆ.12–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ನಿರ್ಧಾರ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು ಗುರುವಾರ ಪೂರ್ಣಗೊಳಿಸಿದ ಹೈಕೋರ್ಟ್, ತೀರ್ಪು ಕಾಯ್ದಿರಿಸಿದೆ.

ವಿಚಾರಣೆ ಪೂರ್ಣಗೊಳಿಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ನೇತೃತ್ವದ ಏಕಸದಸ್ಯ ಪೀಠ, ತೀರ್ಪು ಕಾಯ್ದಿರಿಸಲಾಗಿದೆ. ಜೊತೆಗೆ ಮಧ್ಯಂತರ ಆದೇಶ ಮುಂದುವರಿಯುತ್ತದೆ ಎಂದು ಹೇಳಿದೆ. ಈಗಾಗಲೇ ರಾಜ್ಯಪಾಲರ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ರಾಜ್ಯ ಸರ್ಕಾರದ ಪರವಾಗಿ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದ್ದಾರೆ. ಇಂದು ಮುಖ್ಯಮಂತ್ರಿಗಳ ಪರ ಹಿರಿಯ ವಕೀಲರಾದ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರು.

■ 6ನೇ ಪುಟಕ್ಕೆ

ಸಿಎಂ ಪರ ಸಿಂಘ್ವಿ ವಾದ



- ರಾಜ್ಯಪಾಲರು ಸಹಜ ನ್ಯಾಯ ಪ್ರಕ್ರಿಯೆಯನ್ನು ಪಾಲಿಸಿಲ್ಲ. ಪ್ರಕರಣದಲ್ಲಿ ಒಬ್ಬರ ದೂರಿನ ಅನುಸಾರ ಶೋಕಾಸ್ ನೋಟಿಸ್ ನೀಡಿದ್ದಾರೆ. ಮತ್ತಿಬ್ಬರ ದೂರಿನ ಬಗ್ಗೆ ಶೋಕಾಸ್ ನೋಟಿಸ್ ಅಗತ್ಯವಿಲ್ಲವೆಂದಿದ್ದಾರೆ.
- ರಾಜ್ಯಪಾಲರು ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ , ಹೆಚ್.ಡಿ.ಕುಮಾರಸ್ವಾಮಿ ಪ್ರಕರಣದಲ್ಲಿ ಅನುಮತಿ ನೀಡಿಲ್ಲ .
- ಮುಡಾ ಭೂಸ್ವಾಧೀನವಾಗದೇ ಜಮೀನು ಬಳಸಿಕೊಂಡಿದ್ದಕ್ಕೆ ಬದಲಿ ಜಮೀನು ನೀಡಿದೆ. ಈ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.
- ಈ ರೀತಿ ಸಂಶಯಾಸ್ಪದ ಹಿನ್ನೆಲೆಯ ವ್ಯಕ್ತಿಗಳ ದೂರು ಆಧರಿಸಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬಾರದು. ■ 50:50 ನಿವೇಶನ ಹಂಚಿಕೆ ಬಿಜೆಪಿ ಸರ್ಕಾರದ ಸಮಯ ದಲ್ಲಾಗಿದೆ. ಹೀಗಾಗಿ ಈ ಪ್ರಕರಣದಲ್ಲಿ ಸಿಎಂ ಪಾತ್ರವಿಲ್ಲ.

ನಾಗಮಂಗಲದಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಎಲ್ಲೆಡೆ ಆತಂಕ

ತೆರೆಯದ ಅಂಗಡಿ–ಮುಂಗಟ್ಟು; ಶಾಲಾ–ಕಾಲೇಜಿಗೆ ರಜೆ; ಪೊಲೀಸರ ಸರ್ಪಗಾವಲು

- ಹಲವು ಅಂಗಡಿಗಳು ಬೆಂಕಿಗಾಹುತಿ; 52 ಮಂದಿ ಬಂಧನ
- ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಪರಿಸ್ಥಿತಿ ಅವಲೋಕನ
- ಬಿಜೆಪಿ ಮುಖಂಡರಿಂದಲೂ ಪರಿಶೀಲನೆ
- ಬೀದಿಗೆ ಬಿದ್ದ ಬಟ್ಟೆ ವ್ಯಾಪಾರಿ; ಗಣೇಶನ ಕೂರಿಸಲು ಚಂದಾ ಕೊಟ್ಟವರ ಗುಜರಿ ಧ್ವಂಸ



ನಾಗಮಂಗಲದಲ್ಲಿ ಗುರುವಾರ ಪೊಲೀಸರು ಪಥಸಂಚಲನ ನಡೆಸಿದರು.

ನಾಗಮಂಗಲ, ಸೆ.12–ಗಣಪತಿ ಉತ್ಸವದ ವೇಳೆ ಬುಧವಾರ ರಾತ್ರಿ ಎರಡು ಗುಂಪುಗಳ ನಡುವೆ ಘರ್ಷಣೆ ಉಂಟಾಗಿ ಉದ್ವಿಗ್ನ ಪರಿಸ್ಥಿತಿ ತಲೆದೋರಿದ್ದ ನಾಗಮಂಗಲ ಪಟ್ಟಣದಲ್ಲಿ ಇಂದು ಪರಿಸ್ಥಿತಿ ಹತೋಟಿಗೆ ಬಂದಿದೆಯಾದರೂ, ಅಂಗಡಿ–ಮುಂಗಟ್ಟುಗಳು ಸಂಪೂರ್ಣವಾಗಿ ಬಂದ್ ಆಗಿದ್ದರೆ, ಅಂಗನವಾಡಿ, ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಪಟ್ಟಣದ ಎಲ್ಲೆಡೆ ಪೊಲೀಸರೇ ಕಂಡು ಬಂದರು.

ಘಟನೆ ಸಂಬಂಧ ನಾಗಮಂಗಲ ಟೌನ್ ಪೊಲೀಸ್ ಠಾಣೆಯಲ್ಲಿ ಎರಡು ಗುಂಪಿಗೆ ಸೇರಿದ 150ಕ್ಕೂ ಹೆಚ್ಚು ಮಂದಿ ವಿರುದ್ಧ ಪ್ರಕರಣ ದಾಖಲಾಗಿದ್ದು, 52 ಮಂದಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಅವರೆಲ್ಲರನ್ನೂ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಘಟನೆ ಸಂಬಂಧ ನಾಗಮಂಗಲ ಟೌನ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರವಿ ದೂರು ಸಲ್ಲಿಸಿದ್ದು, ಗಣಪತಿ ಉತ್ಸವ ಪಟ್ಟಣದ ಅಲ್ಲಾಹು ಮಸೀದಿ ಮುಂಭಾಗ ತೆರಳಿದಾಗ ಮೆರವಣಿಗೆಯಲ್ಲಿದ್ದವರು ಜೈ ಶ್ರೀರಾಂ ಘೋಷಣೆ ಕೂಗುತ್ತಾ, ಪಟಾಕಿ ಸಿಡಿಸಿ, ಸುಮಾರು 10 ನಿಮಿಷಗಳವರೆಗೂ ಮಸೀದಿ ಮುಂಭಾಗದಲ್ಲೇ ಡ್ಯಾನ್ಸ್ ಮಾಡುತ್ತಿದ್ದರು. ಪೊಲೀಸ್ ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್ ಸೇರಿದಂತೆ ಸಿಬ್ಬಂದಿ ಮೆರವಣಿಗೆ ಮುಂದಕ್ಕೆ ಸಾಗುವಂತೆ ಹೇಳುತ್ತಿದ್ದರೂ ಕೇಳದೇ ಅವರು ಡ್ಯಾನ್ಸ್ ಮಾಡುತ್ತಿದ್ದಾಗ ಮತ್ತೊಂದು ಗುಂಪಿನವರು ಜಮಾಯಿಸಿ ಅಲ್ಲಾಹು ಅಕ್ಬರ್ ಎಂದು ಪ್ರತಿಯಾಗಿ ಘೋಷಣೆ ಕೂಗಲಾರಂಭಿಸಿದರು. ಈ ವೇಳೆ

■ 6ನೇ ಪುಟಕ್ಕೆ



ದುರುಳರು ಯಾವುದೇ ಜಾತಿ, ಧರ್ಮದವರಾಗಿರಲಿ ನಿರ್ದಾಕ್ಷಿಣ್ಯ ಕ್ರಮ

ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಸೆ.12– ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆಯ ವೇಳೆ ನಡೆದಿರುವ ಕಲ್ಲು ತೂರಾಟವು ಸಮಾಜದ ಶಾಂತಿ, ನೆಮ್ಮದಿಗೆ ಧಕ್ಕೆ ತರುವ ಕಿಡಿಗೇಡಿಗಳ ದುಷ್ಕೃತ್ಯ ಎನ್ನುವುದು ನಿಸ್ಸಂಶಯವಾಗಿದ್ದು, ದುರುಳರು ಯಾವುದೇ ಜಾತಿ, ಧರ್ಮದವರಾಗಿರಲೀ ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಹೇಳಿದ್ದಾರೆ.

ನಾಗಮಂಗಲದಲ್ಲಿ ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟವಾಗಿರುವ ಘಟನೆ ಸಂಬಂಧ ಪ್ರತಿಕ್ರಿಯೆ ನೀಡಿರುವ ಅವರು, ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆಯ ವೇಳೆ ನಡೆದಿರುವ ಕಲ್ಲು ತೂರಾಟವು ಸಮಾಜದ ಶಾಂತಿ, ನೆಮ್ಮದಿಗೆ ಧಕ್ಕೆ ತರುವ ಕಿಡಿಗೇಡಿಗಳ ದುಷ್ಕೃತ್ಯ ಎನ್ನುವುದು ನಿಸ್ಸಂಶಯ. ಇದನ್ನು ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಈ ಸಂಬಂಧ ಈಗಾಗಲೇ 50ಕ್ಕೂ ಅಧಿಕ ಜನರನ್ನು

■ 6ನೇ ಪುಟಕ್ಕೆ

ಸರ್ಕಾರಿ, ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ

ವಾರದ ಆರು ದಿನ ಪೂರಕ ಪೌಷ್ಟಿಕ ಆಹಾರ ವಿತರಣೆ

ಮೈಸೂರು,ಸೆ.12(ಪಿಎಂ)– ಅಜೀಂ ಪ್ರೇಮ್‌ಜಿ ಫೌಂಡೇಷನ್ ಸಹಭಾಗಿತ್ವದಲ್ಲಿ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ವಾರದಲ್ಲಿ ನಾಲ್ಕು ದಿನ ಪೂರಕ ಪೌಷ್ಟಿಕ ಆಹಾರವನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಕ್ರಮ ವಹಿಸಿದೆ.



ಅಜೀಂ ಪ್ರೇಮ್‌ಜಿ


ಸದರಿ ವಿದ್ಯಾರ್ಥಿಗಳಿಗೆ ಈಗಾಗಲೇ ವಾರದಲ್ಲಿ ಎರಡು ದಿನ ಪೂರಕ ಪೌಷ್ಟಿಕ ಆಹಾರ ನೀಡುತ್ತಿದ್ದು, ಇದೀಗ ಇದರೊಂದಿಗೆ ನಾಲ್ಕು ದಿನ ಪೂರಕ ಪೌಷ್ಟಿಕ ಆಹಾರ ನೀಡಲು ಮುಂದಾಗಿದೆ. ಒಟ್ಟಾರೆ ಈಗ ವಾರದ ಆರು ದಿನ ಸದರಿ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಟಿಕ ಆಹಾರ ದೊರೆಯಲಿದೆ.

ಈ ಕಾರ್ಯಕ್ರಮ ಅನುಷ್ಠಾನಕ್ಕಾಗಿ ರಾಜ್ಯ ಹಂತದ ಬ್ಯಾಂಕ್ ಖಾತೆಯನ್ನು ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಹೆಸರಿನಲ್ಲಿ ಮತ್ತು ಜಿಲ್ಲಾ ಹಂತಗಳಲ್ಲಿ 31 ಬ್ಯಾಂಕ್ ಖಾತೆಗಳು ಹಾಗೂ ತಾಲೂಕು ಹಂತದಲ್ಲಿ 176 ಬ್ಯಾಂಕ್ ಖಾತೆಗಳನ್ನು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳ ಹೆಸರಿನಲ್ಲಿ ತೆರೆಯಲು ಷರುತ್ತುಗಳಿಗೆ ಒಳಪಟ್ಟು ಅನುಮತಿ ನೀಡಿ ಸರ್ಕಾರ ಆದೇಶಿಸಿದೆ.

ಸದರಿ ಕಾರ್ಯಕ್ರಮ ಅನುಷ್ಠಾನಕ್ಕಾಗಿ ತೆರೆಯಲಾಗುವ ಬ್ಯಾಂಕ್ ಖಾತೆಗಳಿಗೆ ಇತರೆ ಯಾವುದೇ ಕಾರ್ಯಕ್ರಮಗಳ ಮೊತ್ತವನ್ನು ಜಮೆ ಮಾಡುವಂತಿಲ್ಲ ಎಂಬುದೂ ಸೇರಿದಂತೆ ಅನೇಕ ಷರತ್ತುಗಳನ್ನು ವಿಧಿಸಲಾಗಿದೆ. ಸಂಬಂಧಪಟ್ಟ ಬ್ಯಾಂಕ್‌ನವರು ಶಾಲಾ ಶಿಕ್ಷಣ ಇಲಾಖೆ ಆಯುಕ್ತರಿಗೆ ಡ್ಯಾಶ್ ಬೋರ್ಡ್ ಒದಗಿಸಬೇಕು. ಜೊತೆಗೆ ವಾರಕ್ಕೊಮ್ಮೆ ಜಿಲ್ಲೆಗಳಿಗೆ, ಬ್ಲಾಕ್‌ಗಳಿಗೆ ಮತ್ತು ಶಾಲೆಗಳಿಗೆ ಬಿಡುಗಡೆಯಾದ ಮೊತ್ತದ ವಿವರಗಳು ಮತ್ತು ಅಂತಿಮ ಬಳಕೆದಾರರಿಂದ ಈ ಮೊತ್ತದ ಬಳಕೆಯ ವಿವರಗಳು ಶಾಲಾ ಶಿಕ್ಷಣ ಇಲಾಖೆ ಆಯುಕ್ತರಿಗೆ ಡ್ಯಾಶ್ ಬೋರ್ಡ್‌ನಲ್ಲಿ ಲಭ್ಯವಾಗುವಂತೆ ಕ್ರಮ ವಹಿಸಬೇಕು.

ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಿಂದ ಒದಗಿಸಲಾಗುವ ಅನುದಾನವು ದುರ್ಬಳಕೆಯಾಗದಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಮೇಲ್ವಿಚಾರಣೆ ನಡೆಸಬೇಕು ಎಂಬುದೂ ಸೇರಿದಂತೆ ಅನೇಕ ಷರತ್ತುಗಳನ್ನು ಸರ್ಕಾರದ ನಡಾವಳಿಯಲ್ಲಿ ಉಲ್ಲೇಖಿಸಲಾಗಿದೆ.

ಎಲ್.ನಾಗೇಂದ್ರ ಅವರಿಗೆ ಹುಟ್ಟುಹಬ್ಬದ ಶುಭಾಶಯ...



ಮೈಸೂರು ನಗರ ಬಿಜೆಪಿ ಅಧ್ಯಕ್ಷ, ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ರೇವಣ್ಣ, ಬ್ಯಾಂಕ್‌ನ ನಿರ್ದೇಶಕ ಅರವಿಂದ್, ಪಂಕಜ್ ಹುಟ್ಟುಹಬ್ಬದ ಶುಭಾಶಯ ಕೋರಿದರು.



ಶ್ರೀ ಮರುಳೇಶ್ವರ ಧರ್ಮದರ್ಶಿ ಸಮಿತಿ ಉಪಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಅವರಿಗೆ ಸಮಿತಿ ವತಿಯಿಂದ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಡಾ.ಎಂ.ಮಹದೇವಯ್ಯ, ಕಾರ್ಯದರ್ಶಿ ಪ್ರೊ.ರಂಗಯ್ಯ, ಖಜಾಂಚಿ ಪಿ.ಮಹದೇವಪ್ಪ, ಸದಸ್ಯರಾದ ಬಿ.ಸೋಮಣ್ಣ, ಕೆ.ಶಿವಲಿಂಗು, ನಿಂಗಪ್ಪ ಉಪಸ್ಥಿತರಿದ್ದರು.

ಅಧಿಕಾರ ಸ್ವೀಕಾರ...



ಮೈಸೂರು ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿಯಾಗಿ ಕೃಷ್ಣ ಅಧಿಕಾರ ವಹಿಸಿಕೊಂಡರು. ಈ ಸಂದರ್ಭದಲ್ಲಿ ನಿರ್ಗಮಿತ ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ರೇವಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ರಾಜು, ಅಕ್ಷರ ದಾಸೋಹದ ಮೈಸೂರು ಉತ್ತರ ವಲಯದ ಸಹಾಯಕ ನಿರ್ದೇಶಕ ಲಿಂಗರಾಜು, ಮೈಸೂರು ತಾಲೂಕಿನ ಸಹಾಯಕ ನಿರ್ದೇಶಕ ಮಹದೇವ ಸ್ವಾಮಿ, ಪಿರಿಯಾಪಟ್ಟಣ ತಾಲೂಕಿನ ಸಹಾಯಕ ನಿರ್ದೇಶಕ ಪ್ರಶಾಂತ್ ಇತರರಿದ್ದರು.

ಸಿಪಿಐ(ಎಂ) ನಾಯಕ ಸೀತಾರಾಮ್ ಯೆಚೂರಿ ನಿಧನ

ನವದೆಹಲಿ,ಸೆ.12–ಹಿರಿಯ ಸಿಪಿಐ (ಮಾರ್ಕ್ಸಿಸ್ಟ್) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಗುರುವಾರ ನಿಧನರಾಗಿದ್ದಾರೆ. ಅವರಿಗೆ 72 ವರ್ಷ ವಯಸ್ಸಾಗಿತ್ತು. ತೀವ್ರ ಉಸಿರಾಟದ ಸಮಸ್ಯೆಯಿಂದಾಗಿ ಏಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರಿಗೆ ಇತ್ತೀಚೆಗೆ ಆಕ್ಸಿಜನ್ ಸಪೋರ್ಟ್ ನೀಡಲಾಗಿತ್ತು ಎಂದು ಸಿಪಿಐ–ಎಂ ಪಕ್ಷ ತನ್ನ ಪ್ರಕಟಣೆಯಲ್ಲಿ ತಿಳಿಸಿತ್ತು.




ವೈದ್ಯರ ತಂಡವು ಅವರ ಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ. ಇದು ಈ ಸಮಯದಲ್ಲಿ ಗಂಭೀರವಾಗಿದೆ ಎಂದು ಎರಡು ದಿನಗಳ ಹಿಂದೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿತ್ತು. ತೀವ್ರ ಜ್ವರದಿಂದ ಬಳಲುತ್ತಿದ್ದ ಯೆಚೂರಿ ಅವರನ್ನು ಆಗಸ್ಟ್ 19 ರಂದು ಏಮ್ಸ್‌ನ ತುರ್ತು ವಿಭಾಗಕ್ಕೆ ದಾಖಲಿಸಲಾಗಿತ್ತು. ನ್ಯುಮೋನಿಯಾದ ಕಾರಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸಿಪಿಐ(ಎಂ) ನಾಯಕ ಇತ್ತೀಚೆಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು ಎನ್ನಲಾಗಿದೆ.

1974ರಲ್ಲಿ ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಸೇರಿದಾಗ ಯೆಚೂರಿಯವರ ರಾಜಕೀಯ ಪಯಣ ಆರಂಭವಾಯಿತು. ಆ ಬಳಿಕ ರಾಜಕೀಯದ ಮೆಟ್ಟಿಲುಗಳನ್ನು ಅತ್ಯಂತ ಶೀಘ್ರವಾಗಿ ಏರಿದ್ದರು. ಮೂರು ಬಾರಿ ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರಾಗಿದ್ದ ಸೀತಾರಾಮ್ ಯೆಚೂರಿ ಬಳಿಕ, ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷರಾಗಿದ್ದರು. 1984ರಲ್ಲಿ, ಸಿಪಿಐ(ಎಂ) ಕೇಂದ್ರ ಸಮಿತಿಗೆ ಆಯ್ಕೆಯಾದ ಅವರು ಬಳಿಕ ಶಾಶ್ವತ ಆಹ್ವಾನಿತರೆನಿಸಿಕೊಂಡಿದ್ದರು. 1992ರ ಹೊತ್ತಿಗೆ, ಅವರು ಪಾಲಿಟ್‌ಬ್ಯೂರೊದ ಸದಸ್ಯರಾಗಿದ್ದರು. ಅವರು ಮೂರು ದಶಕಗಳ ಕಾಲ ಈ ಸ್ಥಾನವನ್ನು ಹೊಂದಿದ್ದರು.

ಯೆಚೂರಿ ಅವರು 2005ರಿಂದ 2017ರವರೆಗೆ ಪಶ್ಚಿಮ ಬಂಗಾಳದಿಂದ ಸಂಸತ್ತಿನ ಸದಸ್ಯರಾಗಿ, ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಅವರು ಪ್ರಕಾಶ್ ಕಾರಟ್ ಅವರ ನಂತರ 2015ರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾದರು ಮತ್ತು 2018 ಮತ್ತು 2022ರಲ್ಲಿ ಎರಡು ಬಾರಿ ಈ ಸ್ಥಾನಕ್ಕೆ ಮರು ಆಯ್ಕೆಯಾದರು.

ಚಿಕ್ಕನಂಜಯ್ಯ



ಮೈಸೂರು, ಸೆ. 12– ಮೈಸೂರಿನ ಚಿಕ್ಕನಂಜಯ್ಯ (67) ಬುಧವಾರ ನಿಧನರಾದರು. ಇವರು ನಗರ ಸ್ಥಳೀಯ ಸಂಸ್ಥೆಗಳಾದ ಕೊಳ್ಳೇಗಾಲ, ಚಾಮರಾಜನಗರ, ಮಳವಳ್ಳಿ, ನಂಜನಗೂಡು ಮುಂತಾದ ಕಡೆ ಮುಖ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಪದೋನ್ನತಿಯ ನಂತರ ಮೈಸೂರು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾಗಿ ಕೆಲಸ ನಿರ್ವಹಿಸಿ ನಿವೃತ್ತರಾಗಿದ್ದರು. ಇವರು ಪತ್ನಿ ಸುಂದರಮ್ಮ, ಮಕ್ಕಳಾದ ಸೌಮ್ಯ, ನವೀನ್, ಲೋಕೇಶ್ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ ಸ್ವಗ್ರಾಮ ಚಾಮರಾಜನಗರ ಜಿಲ್ಲೆಯ ಸಂತೆಮರಳ್ಳಿ ಹೋಬಳಿ ಕಾವುದವಾಡಿ ಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜಯನಗರ ಮೂರನೇ ಹಂತದಲ್ಲಿ ಕೋಟಿ ವೆಚ್ಚದಲ್ಲಿ ಬೃಹತ್ ಕ್ಲಾಕ್ ಟವರ್ ನಿರ್ಮಾಣ

● ಶಾಸಕ ಜಿ.ಟಿ.ದೇವೇಗೌಡರ ಕೋಟಿ ಅನುದಾನದಲ್ಲಿ ತಲೆಯೆತ್ತಲಿದೆ ● ಮೈಸೂರಿನ ಕ್ಲಾಕ್ ಟವರ್‌ಗಳಲ್ಲಿ ಮೂರನೇ ಬೃಹತ್ ಸ್ಥಾವರ ● ಗಂಟೆಗೊಮ್ಮೆ ನಾದಮಯ ಸದ್ದು

ಮೈಸೂರು,ಸೆ.12(ಜಿಎ)–ಮೈಸೂರು ಮುಂದಿನ ದಿನಗಳಲ್ಲಿ ಕ್ಲಾಕ್ ಟವರ್ ನಗರಿಯಾಗಿ ಕಂಗೊಳಿಸುವ ಲಕ್ಷಣಗಳಿದ್ದು, ಇದಕ್ಕೆ ಪೂರಕವಾಗಿ ಈಗ ವಿಜಯನಗರದ 3ನೇ ಹಂತದಲ್ಲಿ 1 ಕೋಟಿ ರೂ ವೆಚ್ಚದಲ್ಲಿ 50 ಅಡಿ ಎತ್ತರದ ಪಾರಂಪರಿಕ ಶೈಲಿಯ ಕ್ಲಾಕ್ ಟವರ್ ನಿರ್ಮಾಣಗೊಳ್ಳುತ್ತಿದೆ.

ಮೈಸೂರು ಎಂದ ತಕ್ಷಣ ಇಲ್ಲಿನ ಪ್ರವಾಸಿ ತಾಣಗಳು, ಸ್ಮಾರಕಗಳು, ಪರಂಪರೆ, ಸಂಸ್ಕೃತಿ, ಸಂಗೀತ, ಕಲೆ ವಿಶ್ವ ಖ್ಯಾತಿ. ಹಾಗೇ, ಇಲ್ಲಿನ ಪಾರಂಪರಿಕ ಶೈಲಿಯ ಕಟ್ಟಡ, ಅರಮನೆ ಮತ್ತು ಅರಮನೆ ಮುಂಭಾಗವಿರುವ ದೊಡ್ಡ ಗಡಿಯಾರ, ದೇವರಾಜ ಮಾರುಕಟ್ಟೆ ಮುಂಭಾಗವಿರುವ ಚಿಕ್ಕ ಗಡಿಯಾರ ಅವುಗಳ ಪಾರಂಪರಿಕ ವಿನ್ಯಾಸವೂ ಎಲ್ಲರ ಗಮನ ಸೆಳೆದಿದೆ. ಪ್ರವಾಸಿಗರು ಇವುಗಳಿಗೆ ಮಾರುಹೋಗಿ ಈ ಸ್ಥಳಗಳಲ್ಲಿ ವಿಹರಿಸಿ ಫೋಟೋ ಕ್ಲಿಕ್ಕಿಸಿಕೊಳ್ಳುವುದು ವಾಡಿಕೆಯಾಗಿದೆ.

ಇದೇ ರೀತಿ ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಉದಯಗಿರಿಯ ಮದೀನಾ ಮಸೀದಿ ವೃತ್ತ, ಮತ್ತೊಂದು ಎನ್‌ಆರ್ ಮೊಹಲ್ಲಾದಲ್ಲಿ 31 ಲಕ್ಷ ರೂ. ವೆಚ್ಚದಲ್ಲಿ 38 ಅಡಿ ಎತ್ತರದ ಬಿಗ್ ಬೆನ್ ಮಾದರಿ ಆಕರ್ಷಕ ಗಡಿಯಾರ ಸ್ಥಾವರ ಸ್ಥಾಪಿಸಿದ್ದು, ಈ ಕ್ಲಾಕ್ ಟವರ್‌ಗಳು ಜನಾಕರ್ಷಿಸಲು ಸಜ್ಜಾಗಿವೆ.

ಕಳೆದ ಆರು ತಿಂಗಳಿನಿಂದ ಮೈಸೂರಿನ ವಿಜಯನಗರ ಮೂರನೇ ಹಂತದ ಸಂಗಮ ವೃತ್ತದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಒಂದು ಕೋಟಿ ರೂ. ಅನುದಾನದಲ್ಲಿ ಪಾರಂಪರಿಕ ಶೈಲಿಯಲ್ಲಿ ಗೋಪುರ ಸೇರಿದಂತೆ 50 ಅಡಿ ಎತ್ತರದ ಆಕರ್ಷಕ ಕ್ಲಾಕ್ ಟವರ್ ನಿರ್ಮಾಣವಾಗುತ್ತಿದೆ.

ಈ ಕ್ಲಾಕ್ ಟವರ್‌ನ ನಾಲ್ಕು ಮುಖದಲ್ಲಿಯೂ 11 ಅಡಿ ಉದ್ದ, 11 ಅಡಿ ಅಗಲದ ಬೃಹತ್ ಗಡಿಯಾರಗಳನ್ನು ಅಳವಡಿಸುತ್ತಿದ್ದು, ಒಂದು ದಿಕ್ಕಿನಲ್ಲಿ ಕನ್ನಡ ಅಂಕಿ, ಮತ್ತೊಂದು ದಿಕ್ಕಿನಲ್ಲಿ ರೋಮನ್ ಅಂಕಿ, ಉಳಿದ ಎರಡು ದಿಕ್ಕಿನಲ್ಲಿ ಇಂಗ್ಲಿಷ್ ಅಂಕಿಗಳುಳ್ಳ ಗಡಿಯಾರ ಗಮನ ಸೆಳೆಯಲಿವೆ. ದೆಹಲಿ ಮೂಲದ ಸಂಸ್ಥೆಯು ಗಡಿಯಾರ ತಯಾರಿಸುತ್ತಿದೆ.



ಕಾಮಗಾರಿ ಹಂತದಲ್ಲಿರುವ ಕ್ಲಾಕ್ ಟವರ್

ಈ ಗಡಿಯಾರಗಳು ಸಮಯ ತೋರಿಸುವುದರ ಜೊತೆಗೆ ಗಂಟೆಗೊಮ್ಮೆ ಸುಮಾರು 1.5 ಕಿ.ಮೀ. ದೂರ ಕೇಳಿಸುವಂತೆ ಹಿತಕಾರಿ ನಾದವುಳ್ಳ ಗಂಟೆ ಬಾರಿಸಲಿದೆ. ಅಲ್ಲದೇ ರಾತ್ರಿ ವೇಳೆಯೂ ಸಮಯ ನೋಡಲು ಅನುವಾಗುವಂತೆ ಗಡಿಯಾರಕ್ಕೆ ರೇಡಿಯಂ ಲೇಪನ ಮಾಡಲಾಗುತ್ತಿದೆ. ಈ ಕ್ಲಾಕ್ ಟವರ್‌ಗೆ ಮತ್ತಷ್ಟು ಮೆರಗು ನೀಡಲು ಮುಂದಾಗಿರುವ ನಗರಪಾಲಿಕೆ, ಇದರ ಸುತ್ತಲೂ ವಿದ್ಯುತ್ ದೀಪಗಳನ್ನು ಅಳವಡಿಸಲು ಮುಂದಾಗಿದೆ. ಈ ವಿದ್ಯುದ್ದೀಪಗಳು ಸ್ವಯಂ ಚಾಲಿತವಾಗಿ ಆನ್ ಅಂಡ್ ಆಫ್ ಆಗುತ್ತವೆ.

> ಮೈಸೂರಿನ ವಿಜಯನಗರ 3ನೇ ಹಾಗೂ 4ನೇ ಹಂತಕ್ಕೆ ಕೇಂದ್ರ ವೃತ್ತವಾದ ಸಂಗಮ ವೃತ್ತದಲ್ಲಿ ಈ ಕ್ಲಾಕ್ ಟವರ್ ನಿರ್ಮಾಣವಾಗುತ್ತಿದ್ದು, ಈ ಭಾಗವನ್ನು ಉನ್ನತೀಕರಿಸುವ ಉದ್ದೇಶದಿಂದ ವಿಶೇಷ ಒತ್ತು ನೀಡಲಾಗಿದೆ.
>
> 
>
> –ಜಿ.ಟಿ.ದೇವೇಗೌಡ, ಶಾಸಕ

ಪ್ರಕೃತಿ ವಿಕೋಪದ ವ್ಯತಿರಿಕ್ತ ಪರಿಣಾಮದಿಂದ ಕ್ಲಾಕ್ ಟವರ್ ಅನ್ನು ರಕ್ಷಿಸುವ ಸಲುವಾಗಿ ಅದರ ಮೇಲೆ ಸಿಡಿಲು ನಿರೋಧಕವನ್ನು ಅಳವಡಿಸಲಾಗುತ್ತಿದೆ. ಮೈಸೂರಿನಲ್ಲಿ ರಾಜರ ಕಾಲದಲ್ಲಿ ಟೌನ್ ಹಾಲ್ ಮುಂಭಾಗ ನಿರ್ಮಿಸಿದ್ದ ದೊಡ್ಡ ಗಡಿಯಾರವೂ ಈ ಹಿಂದೆ ಪ್ರತಿ ಗಂಟೆಗೊಮ್ಮೆ ಗಂಟೆ ಬಾರಿಸುತ್ತಿತ್ತು. ಆದರೆ ನಿರ್ವಹಣೆ ಕೊರತೆಯಿಂದಾಗಿ ಈ ಗಡಿಯಾರದ ಸದ್ದು ನಿಂತಿದೆ.

ಮೈಸೂರಿನ ಈ ದೊಡ್ಡ ಗಡಿಯಾರ 72 ಅಡಿ ಎತ್ತರ, ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಕ್ಲಾಕ್ ಟವರ್ 70 ಅಡಿ ಎತ್ತರವಿದ್ದು, ಉದಯಗಿರಿಯ ಕ್ಲಾಕ್ ಟವರ್ 38 ಅಡಿ ಎತ್ತರವಿದೆ. ವಿಜಯನಗರ 3ನೇ ಹಂತದ ಕ್ಲಾಕ್ ಟವರ್ ಮೈಸೂರಿನ ಮೂರನೇ ಅತೀ ದೊಡ್ಡ ಗಡಿಯಾರವಾಗಿ ಗಮನ ಸೆಳೆಯಲಿದೆ.

ಸೆ.15ರಂದು ಹಿರಿಯ ಸಹಕಾರಿಗಳಿಗೆ ಸನ್ಮಾನ

ಮೈಸೂರು,ಸೆ.12(ಪಿಎಂ)–ನಗರದ ಎನ್.ಮಾಧವರಾವ್ ವೃತ್ತದ ಶ್ರೀ ಕೃಷ್ಣ ರಾಜೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ಸೆ.15ರಂದು ಹಿರಿಯ ಸಹಕಾರಿಗಳ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 10.30ಕ್ಕೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಸಮಾರಂಭ ಹಮ್ಮಿಕೊಂಡಿದ್ದು, ಶ್ರೀ ಕುಂದೂರು ಮಠದ ಪೀಠಾಧ್ಯಕ್ಷ ಶ್ರೀ ಡಾ.ಶರತ್‌ಚಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಮಾರಂಭ ಉದ್ಘಾಟಿಸಲಿದ್ದಾರೆ. ಸಂಸದ ಸುನೀಲ್ ಬೋಸ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಜಿ.ಡಿ.ಹರೀಶ್‌ಗೌಡ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಕೆ.ವಿ.ನರಸಿಂಹಶೆಟ್ಟಿ, ಬಿ.ಪುಟ್ಟಸ್ವಾಮಿ, ಎಸ್.ಬಿ.ವಿಜಯಕುಮಾರ್, ಎಸ್.ಸದಾನಂದ, ಎಂ.ಕೆ.ಪುಟ್ಟಸ್ವಾಮಿ, ಸಿದ್ದರಾಜು, ಪಿ.ಸಿ.ನಾಗರಾಜನ್, ಕೆ.ಎಲ್.ಅನಂತರಾಮಯ್ಯ, ಎನ್.ನಾಗರಾಜು, ಡಿ.ರಾಮು, ಜಿ.ಕೃಷ್ಣ, ಕೆ.ಚಂದ್ರ, ಚನ್ನಯ್ಯ, ಬಾಲಂಬ, ಕಾತ್ಯಾಯಿನಿ, ಎನ್.ಜಯಲಕ್ಷ್ಮೀ, ಕೆ.ಆರ್.ಸೀತಾಲಕ್ಷ್ಮೀ, ಸುಶೀಲಮ್ಮ, ಡಿ.ಆಶಾಕುಮಾರಿ, ಕೆ.ಎಸ್.ಸುನಂದ ಅವರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸೆ.15ರಂದು ಸರ್ವ ಸದಸ್ಯರ ಮಹಾಸಭೆ

ಮೈಸೂರು, ಸೆ.12–ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 30ನೇ ವಾರ್ಷಿಕ ಮಹಾಸಭೆಯು ಸೆ.15ರಂದು ಬೆಳಗ್ಗೆ 11 ಗಂಟೆಗೆ ಕೃಷ್ಣಮೂರ್ತಿಪುರಂನ ಬಲ್ಲಾಳ್ ವೃತ್ತದ ಸಮೀಪವಿರುವ ಸೀತಾರಾಘವ ಪ್ರಾರ್ಥನಾ ಮಂದಿರದಲ್ಲಿ ನಡೆಯಲಿದೆ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್.ಶಶಿಕಲಾ ತಿಳಿಸಿದ್ದಾರೆ.

ನಾಳೆ ಮೈಸೂರಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಮೈಸೂರು,ಸೆ.12(ಜಿಎ)–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು–ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದಿಂದ ಸೆ.14ರಂದು ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ವಿಜಯನಗರದಲ್ಲಿರುವ ಈಡಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಡಾ.ಎಂ.ಕೆ.ಪೋತರಾಜ್ ಈ ವಿಷಯ ತಿಳಿಸಿದರು. ಅಂದು ಬೆಳಗ್ಗೆ 8.30ಕ್ಕೆ ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕಲಾಮಂದಿರದವರೆಗೆ ನಾರಾಯಣಗುರು ಅವರ ಭಾವಚಿತ್ರದೊಂದಿಗೆ ಜಾನಪದ ಕಲಾತಂಡಗಳ ಮೆರವಣಿಗೆಯು ಸಮಾಜದ ಶ್ರೀ ವಿಖ್ಯಾತಾನಂದ ಸ್ವಾಮೀಜಿ, ಶ್ರೀರೇಣುಕಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದೆ. ನಾರಾಯಣಗುರು ಅವರ ಜೀವನ, ಸಾಧನೆ ಬಿಂಬಿಸುವ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿ ಭಾಗಿಯಾಗಲಿವೆ ಎಂದರು.




ವಿಜಯನಗರದಲ್ಲಿರುವ ಈಡಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ಕೆ.ಪೋತರಾಜ್ ಮಾತನಾಡಿದರು.

ಜಿಲ್ಲಾಡಳಿತದಿಂದ ಕಲಾಮಂದಿರದಲ್ಲಿ ಮಾತ್ರ ಜಯಂತಿ ಆಚರಿಸಲಾಗುತ್ತಿತ್ತು. ಆದರೆ, ಈ ಬಾರಿ ಸಂಘದಿಂದ ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ. ಮೆರವಣಿಗೆಯ ನಂತರ ಬೆಳಿಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ನಡೆಯಲಿರುವ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾಗವಹಿಸಲಿದ್ದಾರೆ. ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಅನಿಲ್ ಚಿಕ್ಕಮಾದು, ರಮೇಶ್‌ಬಾಬು ಬಂಡಿಸಿದ್ದೇಗೌಡ, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಯತೀಂದ್ರ ಸಿದ್ದರಾಮಯ್ಯ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಕಾರ್ಯಕ್ರಮಗಳ ವಿವರ ನೀಡಿದರು.

ನಂತರ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ 80 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಇದಲ್ಲದೆ, ಸಮಾಜದ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಗುತ್ತದೆ ಎಂದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಚಿವ ಮಧು ಬಂಗಾರಪ್ಪ ಸಂಸದ ಕೋಟಾ ಶ್ರೀನಿವಾಸ ಪೂಜಾರಿ, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಜೆ.ಪಿ.ಎನ್.ಪಿ. ಪ್ರತಿಷ್ಠಾನದ ಅಧ್ಯಕ್ಷ ಜೆ.ಪಿ.ಸುಧಾಕರ, ಮೈಸೂರು ಜಿಲ್ಲಾ ಆರ್ಯ ಈಡಿಗರ ಸಂಘದ ಮಾಜಿ ಅಧ್ಯಕ್ಷ ಮಾಂಬಳ್ಳಿ ಕೆ.ಪಾಪೇಗೌಡ, ಕರ್ನಾಟಕ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಗುರುಸ್ವಾಮಿ, ಪಾಲಿಕೆ ಮಾಜಿ ಸದಸ್ಯರಾದ ಪಿ.ದೇವರಾಜ್, ಎನ್.ಧ್ರುವರಾಜ್ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಕೃಷ್ಣಮೂರ್ತಿ, ಉಪಾಧ್ಯಕ್ಷ ರಾಜಶೇಖರ ಕದಂಬ, ವಿ.ಜಯಣ್ಣ, ಟಿ.ಎಸ್.ಗೋಪಾಲಸ್ವಾಮಿ, ಎಸ್.ಟಿ.ರಾಜು, ಕೆ.ವಿ.ಶ್ರೀಕಾಂತ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ಇಂದಿನ ಪಂಚಾಂಗ

13.09.2024 ಶುಕ್ರವಾರ, ಮಳೆ ನಕ್ಷತ್ರ: ಉತ್ತರಾ, 13.09.2024 ರಿಂದ 26.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪೂಷಾ, ರಾಹುಕಾಲ : ಬೆಳಗ್ಗೆ 10.30 ರಿಂದ 12 ರವರೆಗೆ

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ :** ಟಿ.ಎಸ್. ಸುಬ್ಬಣ್ಣನವರ 33ನೇ ವರ್ಷದ ಸಂಸ್ಮರಣೆ, ಅಧ್ಯಕ್ಷತೆ : ಮಾಜಿ ಶಾಸಕ ಸಿ.ಎಸ್. ನಿರಂಜನ್‌ಕುಮಾರ್, ಉದ್ಘಾಟನೆ : ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್, ಪೂಜ್ಯರಿಗೆ ನುಡಿನಮನ : ನಿವೃತ್ತ ಪ್ರಾಂಶುಪಾಲರಾದ ಪ್ರೊ. ಸರ್ವಮಂಗಳಬಾಯಿ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಅಪರ ಜಿಲ್ಲಾಧಿಕಾರಿ ಪಿ. ಶಿವರಾಜು, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಪ್ರಾಸ್ತಾವಿಕ ನುಡಿ : ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ ಕಾರ್ಯದರ್ಶಿ ಪ್ರೊ. ಜಿ.ಸಿ. ರಾಜಣ್ಣ, ಸ್ಥಳ: ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆ ಆವರಣ, ವಿದ್ಯಾರಣ್ಯಪುರಂ, ಬೆಳಗ್ಗೆ 10ಕ್ಕೆ

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** 44ನೇ ವರ್ಷದ ಗೌರಿ–ಗಣೇಶ ಹಬ್ಬದ ಪೂಜಾ ಮಹೋತ್ಸವ, ಸ್ಥಳ: ದೇವಸ್ಥಾನ, ವಿನಾಯಕನಗರ.

■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

■ **ಎಸ್.ಪಿವಿಜಿಎಂಸಿ ಟ್ರಸ್ಟ್; ಪಾರಂಪರಿಕ ಸಂಗೀತೋತ್ಸವ,** 63ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಕಾಳಿದಾಸ ಮಹಾಕವಿಯ ರಘುವಂಶ, ವಾಚನ : ವಿದುಷಿ ಮಹಿಮಾ ಕಶ್ಯಪ್, ವ್ಯಾಖ್ಯಾನ : ಡಾ.ಹೆಚ್.ವಿ. ನಾಗರಾಜರಾವ್, ಸಂಜೆ 6.45 ರಿಂದ ವಿದುಷಿ ಸ್ಫೂರ್ತಿರಾವ್ ಅವರಿಂದ ಗಾಯನ, ವಿದುಷಿ ಶ್ರೀ ಲಕ್ಷ್ಮೀ ಎಸ್. ಭಟ್–ವಯೋಲಿನ್, ವಿದ್ವಾನ್ ಅದಮ್ಯ ರಮಾನಂದ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟ, ಸ್ಥಳ: ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಕ್ರಿಯಾಯೋಗ ತರಗತಿಗಳು, ಸ್ಥಳ: ಆಶ್ರಮದ ಆವರಣ.

■ **ಬಾಸುದೇವ ಸೋಮಾನಿ ಕಾಲೇಜು, ನೇತ್ರಧಾಮ ಕಣ್ಣಿನ ಆಸ್ಪತ್ರೆ:** ಕಣ್ಣಿನ ತಪಾಸಣಾ ಶಿಬಿರ, ಉದ್ಘಾಟನೆ: ಇನ್ಸ್‌ಟಿಟ್ಯೂಷನ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು : ನೇತ್ರಧಾಮ ಕಣ್ಣಿನ ಆಸ್ಪತ್ರೆಯ ಡಾ.ನಿಶಿಕಾ ಜೈನ್, ಕುಬೇರ್ ಪಿ.ಗೌಡ, ಎಸ್.ಪ್ರಭಾ, ಪಿ.ಗೀತಾಂಜಲಿ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ, ವಾತ್ಸಲ್ಯ ಸಂಚಿಕೆ ಬಿಡುಗಡೆ: ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪ್ರತಿಭಾ ಪುರಸ್ಕಾರ ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಕಾಲೇಜು ಪ್ರಾಂಶುಪಾಲರಾದ ಡಾ.ಎಂ.ಶಾರದಾ, ವಿ.ಡಿ.ಸುನೀತಾರಾಣಿ, ಅಧ್ಯಕ್ಷತೆ : ಶ್ರೀನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಒಡನಾಡಿ ಸೇವಾ ಸಂಸ್ಥೆ:** ಮಂತ್ರ ಮಾಂಗಲ್ಯ ಸರಳ ವಿವಾಹ ಕಾರ್ಯಕ್ರಮ, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ನಿವೃತ್ತ ಪ್ರಾಧ್ಯಾಪಕಿ ಲತಾ ಕೆ.ಬಿದ್ದಪ್ಪ, ಶ್ರೀದೇವಿ, ಹೂಟಗಳ್ಳಿ ನಗರಸಭಾ ಆಯುಕ್ತ ಬಿ.ಎನ್.ಚಂದ್ರಶೇಖರ್, ಸ್ಥಳ: ಮಡಿಲು ಪುನರ್ವಸತಿ ಕೇಂದ್ರ, ಬೆಳಗ್ಗೆ 11ಕ್ಕೆ.

■ **ಸಮೃದ್ಧಿ ಟ್ರಸ್ಟ್ :** ಗೌರಿ ಗಣೇಶ ಹಬ್ಬದ ಅಂಗವಾಗಿ ಆನ್‌ಲೈನ್ ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯನಗೌಡ, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಲಿಂಗರಾಜು, ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಅಶ್ವಥ್‌ಕುಮಾರ್, ಬಿಜೆಪಿ ಮೈಸೂರು ನಗರ ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಹೇಮಾ ನಂದೀಶ್, ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ್ ಅಯ್ಯಂಗಾರ್, ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಆಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ :** ನೆನಪಿಗಾಗಿ ಸಂಗೀತ ಕಾರ್ಯಕ್ರಮ (ಮ್ಯೂಸಿಕ್ ಫಾರ್ ಮೆಮೋರಿ), ಉದ್ಘಾಟನೆ : ಆದಿಚುಂಚನಗಿರಿ ವಿವಿ ಉಪಕುಲಪತಿ ಡಾ. ಎಂ.ಎ. ಶೇಖರ್, ಮುಖ್ಯ ಅತಿಥಿಗಳು : ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಬಸವನಗೌಡಪ್ಪ, ವೈದ್ಯಕೀಯ ಅಧೀಕ್ಷಕ ಡಾ. ಸಿ.ಪಿ. ಮಧು, ಡಾ. ಪ್ರತಿಭಾ ಪಿರೇರಾ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಅಧ್ಯಕ್ಷ ಡಾ. ಹನುಮಂತಚಾರ್ ಜೋಷಿ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಸಭಾಂಗಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಬಣ್ಣದ ಬಾನಾಡಿಗಳು' ಬಾನುಲಿ ಸರಣಿ, ರಚನೆ : ಡಾ.ಎಸ್.ವಿ. ನರಸಿಂಹನ್, ಪ್ರಸ್ತುತಿ: ಜಿ.ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಸತ್ಯನಾರಾಯಣಗೌಡ, ಸಂಯೋಜನಾಧಿಕಾರಿ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್.ಕೇಶವ ಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಕೆ.ಎಸ್.ನರಸಿಂಹಸ್ವಾಮಿ ಅವರ ರಚನೆಗಳು, 9.00 ನಮ್ಮ ಆರೋಗ್ಯ, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ.ಎಸ್. ಗೋಪಾಲಕೃಷ್ಣನ್–ಕೊಳಲು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸಂಗೀತ ಸಂಭ್ರಮ ನಾದಲಯ ಸಂಗಮ', ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ **ಮಧ್ಯಾಹ್ನ:** 12.30 ದೇವರನಾಮ–ರಾಕೇಶ್. ಎಸ್, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್, 1.20 ಭಾವಗೀತೆಗಳು–ಪಂಚಮ್ ಹಳಿಬಂಡಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರ ಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಕೆ.ಸರಸ್ವತಿ–ವೀಣಾವಾದನ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ: ಅಡಿಕೆ ತೋಟದ ನಿರ್ವಹಣೆ. ಈ ಕುರಿತು ಮೈಸೂರು ಜಿಲ್ಲಾ ತೋಟಗಾರಿಕೆ ಉಪನಿರ್ದೇಶಕರಾದ ಮಂಜುನಾಥ್ ಅಂಗಡಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಕನ್ನಡ ಭಾರತೀ : ಆಲೂರು ದೊಡ್ಡನಿಂಗಪ್ಪ ಅವರಿಂದ ಸಣ್ಣಕತೆ. ಕೆಂಪು ಬೆಲ್ಲ ಮತ್ತು ಕಟ್ಟಿರುವೆಗಳು, ರಾಜರ ಆಳ್ವಿಕೆಯಲ್ಲಿ ಕನ್ನಡದ ಬಳಕೆ. ಈ ಕುರಿತು ಮಾತನಾಡುತ್ತಾರೆ: ಆರ್.ಗಣೇಶ್, ಪ್ರಸ್ತುತಿ: ಜಿ.ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಶೇಷಗೋಪಾಲನ್–ಹಾಡುಗಾರಿಕೆ, 10.00 ತತ್ವಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30 ಸವಿನೆನಪು

ದಸರಾಗೆ ದಿನಗಣನೆ ಆರಂಭವಾದರೂ ಇನ್ನು ಅರೆ-ಬರೆ ಸಿದ್ಧತೆ

● ಸಾರ್ವಜನಿಕರ ಬೇಸರ ● ಮೈಸೂರು ನಗರ ಒಂದು ಸುತ್ತು ಹಾಕಿದರೆ ಎಲ್ಲೆಡೆ ಮಣ್ಣು ಗುಡ್ಡೆ, ತುಂಡರಿಸಿದ ಮರದ ತುಂಡುಗಳು; ತರಾತುರಿ ಕಾಮಗಾರಿಯ ಕುರುಹು!

ಮೈಸೂರು, ಸೆ.12– ನಾಡಹಬ್ಬ ದಸರಾ ಮಹೋತ್ಸವ ಆರಂಭಕ್ಕೆ ಇನ್ನು ಳಿದಿರುವುದು 20 ದಿನಗಳು ಮಾತ್ರ. ಆದರೆ ಸಿದ್ಧತೆ ಆಮೆಗತಿಯಲ್ಲಿ ನಡೆದಿದೆ. ಸ್ಥಳೀಯ ಆಡಳಿತವಂತೂ ಇನ್ನೂ ನಿದ್ರಾವಸ್ಥೆಯಲ್ಲೇ ಇದ್ದಂತಿದೆ.

ಈ ಬಾರಿ ಉತ್ತಮ ಮಳೆಯಾಗಿ ರಾಜ್ಯದ ಅಣೆಕಟ್ಟೆಗಳೆಲ್ಲಾ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಅದ್ಧೂರಿ ದಸರಾ ಆಚರಣೆಗೆ ಸರ್ಕಾರ ನಿರ್ಧರಿಸಿದೆ. ಉಪ ಸಮಿತಿಗಳನ್ನೂ ರಚಿಸಿ, ಜವಾಬ್ದಾರಿಗಳನ್ನು ವಹಿಸಲಾಗಿದೆ. ಜಂಬೂ ಸವಾರಿಗೆ ಗಜಪಡೆಯ ತಾಲೀಮು ಮುಂದುವರೆದಿದೆ. ಆದರೆ ಉತ್ಸವಕ್ಕೆ ಮೈಸೂರು ಸಜ್ಜುಗೊಂಡಿದೆಯೇ ಎಂಬ ಪ್ರಶ್ನೆ ಸಾರ್ವಜನಿಕರದ್ದಾಗಿದೆ. ಇನ್ನು ಇಪ್ಪತ್ತು ದಿನಗಳಲ್ಲಿ ಅಂದರೆ ಅ.3ರಂದು ವಿಜಯದಶಮಿ ಆಚರಣೆಗೆ ಚಾಮುಂಡಿ ಬೆಟ್ಟದಲ್ಲಿ ಚಾಲನೆ ದೊರಕಲಿದೆ.



ಸಯ್ಯಾಜಿರಾವ್ ರಸ್ತೆ ಕಾಡಾ ಕಚೇರಿ ಕಾಂಪೌಂಡ್ ಬಳಿ ಆಮೆಗತಿಯಲ್ಲಿ ಸಾಗಿರುವ ಫುಟ್‌ಪಾತ್ ನವೀಕರಣ ಕಾಮಗಾರಿ



ಮೈಸೂರು ರೈಲ್ವೆ ನಿಲ್ದಾಣದ ಬಳಿ ಜೆಎಲ್‌ಬಿ ರಸ್ತೆ ಬದಿಯಲ್ಲಿ ಮರದ ತುಂಡುಗಳು ಬಿದ್ದಿರುವುದು.

ಅಂದಿನಿಂದಲೇ ವಿದ್ಯುತ್ ಜಗಮಗಿಸುವ ದೀಪಾಲಂಕಾರದೊಂದಿಗೆ ವೈವಿಧ್ಯಮಯ ಕಾರ್ಯಕ್ರಮಗಳೂ ಆರಂಭವಾಗುತ್ತವೆ. ಈ ಹಿನ್ನೆಲೆಯಲ್ಲಿ ಮುಂಚಿತವಾಗಿಯೇ ಪ್ರವಾಸಿಗರು ಮೈಸೂರಿನತ್ತ ಧಾವಿಸುತ್ತಾರೆ. ಆದರೆ ಸ್ಥಳೀಯ ಅಧಿಕಾರಿಗಳಲ್ಲಿ ಯಾವುದೇ ಧಾವಂತ, ಆತುರತೆ ಕಾಣಿಸುತ್ತಿಲ್ಲ.

ಕುಡಿಯುವ ನೀರು ಸರಬರಾಜು, ರಸ್ತೆ, ಚರಂಡಿ, ಬೀದಿದೀಪದ ವ್ಯವಸ್ಥೆಯ ಸಮರ್ಪಕ ನಿರ್ವಹಣೆ ಮೈಸೂರು ಮಹಾನಗರ ಪಾಲಿಕೆಯ ಆದ್ಯತೆ. ಆದರೆ ಈ ಬಗ್ಗೆ ಅಧಿಕಾರಿಗಳಿಗೆ ಕಾಳಜಿ ಇಲ್ಲ. ದಸರಾ ಸಂದರ್ಭದಲ್ಲಾದರೂ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬೇಕೆಂಬ ಸಹಜ ಪ್ರಜ್ಞೆಯೂ ಇಲ್ಲವಾಗಿದೆ. ಅರೆಬರೆ ಕಾಮಗಾರಿಗಳು, ಗುಂಡಿಬಿದ್ದ ರಸ್ತೆಗಳು, ಅಸ್ತವ್ಯಸ್ತವಾದ ಮ್ಯಾನ್‌ಹೋಲ್‌ಗಳು, ಅಲ್ಲಲ್ಲೇ ಬಿದ್ದಿರುವ ಕತ್ತರಿಸಿದ ಮರದ ರೆಂಬೆ–ಕೊಂಬೆಗಳು, ಹೀಗೆ ಅಧಿಕಾರಿ ವರ್ಗ ವಿಶ್ವವಿಖ್ಯಾತ ದಸರಾಗೆ ಸಜ್ಜಾಗಿಲ್ಲ ಎನ್ನುವುದಕ್ಕೆ ಹಲವು ಸಾಕ್ಷಿಗಳು ಕಣ್ಣಿಗೆ ರಾಚುತ್ತವೆ.

ಅಧಿಕಾರಿಗಳ ಅಸಮರ್ಥತೆ ಹಾಗೂ ಕರ್ತವ್ಯ ಲೋಪಕ್ಕೆ ತಕ್ಷಣ ಕ್ರಮ ವಹಿಸುವ ನಿಯಮವಿಲ್ಲ. ಇನ್ನು ಶಿಕ್ಷೆಯಾಗುತ್ತದೆ ಎನ್ನುವುದು ಕೇವಲ ಮೇಲಧಿಕಾರಿಗಳ ಮಾತಿಗಷ್ಟೇ ಸೀಮಿತ. ಹಾಗಾಗಿ ಯಾರಿಗೂ ಯಾರ ಭಯವೂ ಇಲ್ಲ. ಪರಿಣಾಮ ಯಾವ ಕೆಲಸವೂ ಸಕಾಲದಲ್ಲಿ ಹಾಗೂ ಸೂಕ್ತ ರೀತಿಯಲ್ಲಿ ನಡೆಯುವುದಿಲ್ಲ. ಇದಕ್ಕೆ ಜವಾಬ್ದಾರಿ ನಿರ್ವಹಿಸುವ ಅಧಿಕಾರಿಗಳ ಜೊತೆಗೆ ಮೇಲ್ವಿಚಾರಣೆ ಮಾಡುವ ಅಧಿಕಾರಿಗಳೂ ಕಾರಣಕರ್ತರಾಗುತ್ತಾರೆ.

ವಿವಿಧ ಕಾರಣಗಳಿಂದ ಕತ್ತರಿಸಿದ ಮರದ ರೆಂಬೆಗಳನ್ನು ಅಲ್ಲಿಯೇ ಬಿಡುವುದು ಮೈಸೂರಿನಲ್ಲಿ ರೂಢಿಯಾಗಿದೆ. ತಿಂಗಳುಗಳ ಕಾಲ ರಸ್ತೆಬದಿಯಲ್ಲೇ ಬಿದ್ದಿರುತ್ತವೆ. ಕೆಲವೊಮ್ಮೆ ಕತ್ತರಿಸಿದ್ದು ಯಾರೆಂಬುದೇ ಯಕ್ಷಪ್ರಶ್ನೆಯಾಗಿ ಬಿಡುತ್ತದೆ. ಸೆಸ್ಕ್ ಹಾಗೂ ಪಾಲಿಕೆ ಸಿಬ್ಬಂದಿ ಪರಸ್ಪರ ಬೊಟ್ಟು ಮಾಡುತ್ತಾರೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಅಪಘಾತಗಳು ಸಂಭವಿಸುತ್ತವೆ, ಪಾದಚಾರಿಗಳಿಗೆ ಅಪಾಯವುಂಟಾಗುತ್ತದೆ ಎಂಬ ಅರಿವಿಲ್ಲದೆ ವರ್ತಿಸುತ್ತಾರೆ. ರಸ್ತೆ ಗುಂಡಿಗಳು, ತೆರೆದ ಮ್ಯಾನ್‌ಹೋಲ್‌ಗಳು, ಅರೆಬರೆ ಕಾಮಗಾರಿಗಳಿಂದ ಜನರಿಗೆ ಆಗಬಹುದಾದ ಸಮಸ್ಯೆಗಳನ್ನು ನೋಡಿಯೂ ಬೇಜವಾಬ್ದಾರಿ ಮೆರೆಯುತ್ತಿದ್ದಾರೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

ಮೈಸೂರು ನಗರ ಪಾಲಿಕೆ ಆಡಳಿತ ಈಗಲಾದರೂ ಎಚ್ಚರಗೊಳ್ಳಬೇಕು. ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಲು ಸೂಚಿಸಬೇಕು. ತಪ್ಪಿದರೆ ತ್ವರಿತ ಕ್ರಮ ವಹಿಸಿ, ಚುರುಕು ಮುಟ್ಟಿಸುವ ಕೆಲಸವಾಗಬೇಕು. ದಸರೆಗೆ ಐದಾರು ದಿನಗಳಿರುವಾಗ ತರಾತುರಿಯಲ್ಲಿ ತೇಪೆ ಹಚ್ಚಬಾರದು. ಸ್ವಚ್ಛ–ಸುಂದರ ಮೈಸೂರು ಎಂಬ ಭಾವನೆಯೊಂದಿಗೆ ಆಗಮಿಸುವ ಪ್ರವಾಸಿಗರಿಗೆ ಇಲ್ಲಿನ ಅವ್ಯವಸ್ಥೆಗಳನ್ನು ಪ್ರದರ್ಶಿಸುವುದು ಎಷ್ಟು ಸರಿ?. ಈ ಬಗ್ಗೆ ಅಧಿಕಾರಿಗಳು ಸ್ವಲ್ಪವಾದರೂ ಯೋಚಿಸಿದರೆ ನಗರದ ಸಮಸ್ಯೆಗಳಿಗೆ ಪರಿಹಾರ ಸಿಗಬಹುದು ಎಂಬುದು ಜನರ ಬೇಸರದ ನುಡಿಯಾಗಿದೆ.

ನಾಗಮಂಗಲದಲ್ಲಿ ಗಣೇಶೋತ್ಸವ ವೇಳೆ ಕಲ್ಲು ತೂರಾಟ: ಕಿಡಿಗೇಡಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ



ನಾಗಮಂಗಲದಲ್ಲಿ ಘರ್ಷಣೆಗೆ ಕಾರಣರಾದವರನ್ನು ಬಂಧಿಸುವಂತೆ ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಸೆ.12– ನಾಗಮಂಗಲದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಘರ್ಷಣೆಗೆ ಕಾರಣರಾದ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ಮೈಸೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ವಿಶ್ವ ಹಿಂದೂ ಪರಿಷತ್ ಹಾಗೂ ರಾಜಸ್ಥಾನ್ ಸಂಘದ ವತಿಯಿಂದ ಸಿದ್ಧಾರ್ಥ ನಗರದಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಪ್ರತಿಭಟನೆ ನಡೆಸಿ, ನಾಗಮಂಗಲದ ದುರ್ಘಟನೆಗೆ ರಾಜ್ಯ ಸರ್ಕಾರದ ವೈಫಲ್ಯವೇ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಲಾಯಿತು. ಕೋಮುಗಲಭೆ ಸೃಷ್ಟಿಸಲು ಯತ್ನಿಸಿದ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ, ಜಿಲ್ಲಾಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ವಿಶ್ವ ಹಿಂದೂ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಮಹೇಶ್ ಕಾಮತ್ ಮಾತನಾಡಿ, ಹಿಂದೂಗಳು ಶಾಂತಿಪ್ರಿಯರು, ಎಲ್ಲಾ ಧರ್ಮದವರೊಂದಿಗೆ ಸಹಿಷ್ಣುತೆಯಿಂದ ಬದುಕುವವರು. ಇಲ್ಲಿ ಎಲ್ಲಾ ಧರ್ಮೀಯರ ಆಚರಣೆಗಳಿಗೆ ಅಡ್ಡಿ ಮಾಡಬಾರದು. ಹಾಗೆಯೇ ಯಾವ ಧರ್ಮೀಯರ ಹಬ್ಬ, ಆಚರಣೆಗಳಿಗೂ ತೊಂದರೆ ಮಾಡುವುದಿಲ್ಲ. ಆದರೆ ಕಿಡಿಗೇಡಿಗಳು ನಾಗಮಂಗಲದಲ್ಲಿ ಗಣೇಶನ ಮೆರವಣಿಗೆ ಮೇಲೆ ಕಲ್ಲು ತೂರಿ, ದೊಡ್ಡ ಗಲಭೆ ಸೃಷ್ಟಿಸಿರುವುದು ಖಂಡನೀಯ. ಇಂತಹ ಕೃತ್ಯಗಳು ಮರುಕಳಿಸದಂತೆ ಸರ್ಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾ ಕಾರ್ಯದರ್ಶಿ ಮಧುಶಂಕರ್, ವಿಭಾಗ ಸಂಚಾಲಕಿ ಸವಿತಾ ಘಾಟ್ಕೆ, ಉಪಾಧ್ಯಕ್ಷರಾದ ಅಂಬಿಕಾ ಜೀವನ್ ಮಿತ್ರ, ಜನಾರ್ಧನ್, ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರಿಧರ್, ಮುಖಂಡ ಶ್ರೀಮುರಳಿ, ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಹಿತ್, ಡಾ.ಕೃಷ್ಣಮೂರ್ತಿ, ಶಿವು, ರಾಣಿ, ಚೇತನ್ ಮಂಜುನಾಥ್, ಭಾಗ್ಯ ಬೆರುಮಲ್ ರಾಥೋಡ್, ಕಾಂತಿಲಾಲ್ ಗುಲೇಚ, ದಲ್ಲಿಚಂದ್, ಶ್ರೀಮಾಲ್, ರಾಜೀವ್ ಕುಮಾರ್, ಲಾಲಾರಂ ಪುರೋಹಿತ್, ಮದನ್‌ಲಾಲ್ ಪುರೋಹಿತ್ ಹಾಗೂ ರಾಜಸ್ಥಾನ ಸಮುದಾಯದ ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಸೆ.12– ಜ್ಯೋತಿನಗರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ನಿಮಿತ್ತ ಸೆಪ್ಟೆಂಬರ್ 14 ರಂದು ಬೆಳಿಗ್ಗೆ 10 ರಿಂದ ಸಂಜೆ 5:30 ಗಂಟೆಯವರೆಗೆ ಜಲಪುರಿ, ಗಾಯತ್ರಿಪುರಂ, ಜ್ಯೋತಿನಗರ, ಉದಯಗಿರಿ, ಕ್ಯಾತಮಾರನಹಳ್ಳಿ, ಶಾಂತಿನಗರ 1 ಮತ್ತು 2ನೇ ಹಂತ, ಗಣೇಶ್ ನಗರ, ಸತ್ಯನಗರ, ಮಹದೇವಪುರ ರಸ್ತೆ, ಜರ್ಮನ್ ಪ್ರೆಸ್, ಉಸ್ಮಾನಿಯಾ ಬ್ಲಾಕ್, ಗೌಸಿಯಾ ನಗರ, ರಾಘವೇಂದ್ರ ನಗರ, ಗಿರಿಯಾಬೋವಿ ಪಾಳ್ಯ, ಯರಗನಹಳ್ಳಿ, ಬನ್ನೂರು ರಸ್ತೆ, ಸಿದ್ಧಾರ್ಥನಗರ, ಆಲನಹಳ್ಳಿ ಬಡಾವಣೆ, ಕೆಎಸ್.ಆರ್.ಟಿ.ಸಿ ಬಡಾವಣೆ, ಪೊಲೀಸ್ ಬಡಾವಣೆ 1ನೇ ಮತ್ತು 2ನೇ ಹಂತ, ಗಿರಿದರ್ಶಿನಿ ಬಡಾವಣೆ, ನಂದಿನಿ ಬಡಾವಣೆ 1ನೇ ಮತ್ತು 2ನೇ ಹಂತ, ನೇತಾಜಿ ಬಡಾವಣೆ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಸೆ.15ಕ್ಕೆ ವಾರಾಂತ್ಯ ನಾಟಕ ಪ್ರದರ್ಶನ

ಮೈಸೂರು,ಸೆ.12– ರಂಗಾಯಣದ ವಾರಾಂತ್ಯ ರಂಗಪ್ರದರ್ಶನದಲ್ಲಿ ಮಂಗಳೂರಿನ ಕಲಾಭಿ ಥಿಯೇಟರ್ ತಂಡದಿಂದ ಶ್ರವಣ್ ಹೆಗ್ಗೋಡು ಅವರು ನಿರ್ದೇಶನ ಮಾಡಿರುವ 'ಎ ಫ್ರೆಂಡ್ ಬಿಯಾಂಡ್ ದ ಫೆನ್ಸ್' ನಾಟಕ ಪ್ರದರ್ಶನವನ್ನು ಹವ್ಯಾಸಿ ರಂಗ ಪ್ರಯೋಗವಾಗಿ ಸೆಪ್ಟೆಂಬರ್ 15 ರಂದು ಭಾನುವಾರ ಸಂಜೆ 6.30ಕ್ಕೆ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ಎಐ ಕ್ಯಾಮರಾ ಎಡವಟ್ಟು; ವಾಹನ ಚಾಲಕರಿಗೆ ಆಘಾತ!

ಹೆಲ್ಮೆಟ್ ಧರಿಸದ್ದಕ್ಕೆ ಕಾರಿನಲ್ಲಿ ಹೋಗುವವರಿಗೆ ದಂಡಾಸ್ತ್ರ!!

ಮೈಸೂರು, ಸೆ.12– ಮೈಸೂರಿನಲ್ಲಿ ಎಐ ಕ್ಯಾಮರಾ ಎಡವಟ್ಟು ಮುಂದುವರೆದಿದ್ದು, ಈ ಬಗ್ಗೆ ಪೊಲೀಸ್ ಅಧಿಕಾರಿಗಳು ಸ್ಪಷ್ಟನೆ ನೀಡುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮೈಸೂರು ನಗರ ಹಾಗೂ ನಗರ ಸಂಪರ್ಕಿಸುವ ಪ್ರಮುಖ ರಸ್ತೆಗಳಲ್ಲಿ ಎಐ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಆದರೆ ಎಐ ಕ್ಯಾಮರಾಗಳ ಆಧಾರದಲ್ಲಿ ವಾಹನ ಸವಾರರ ಮೊಬೈಲ್‌ಗೆ ಬರುವ ಸಂದೇಶ ನೋಡಿದರೆ ಅಚ್ಚರಿ ಜೊತೆಗೆ ಆತಂಕವುಂಟಾಗುತ್ತದೆ. ಸಂಚಾರ ನಿಯಮ ಉಲ್ಲಂಘಿಸದಿದ್ದರೂ ದಂಡ ಪಾವತಿಸುವಂತೆ ಸಂದೇಶ ಬರುತ್ತಿದೆ. ಕೆಲವರು ಇದನ್ನು ನಿರ್ಲಕ್ಷಿಸಿದರೆ ಮತ್ತಷ್ಟು ಮಂದಿ ಆತಂಕಗೊಳ್ಳುತ್ತಿದ್ದಾರೆ.

ಕಾರು ಚಾಲಕ ಹೆಲ್ಮೆಟ್ ಧರಿಸಬೇಕಾ?: ಕಾರು ಚಾಲಕ ಹಾಗೂ ಆತನ ಪಕ್ಕದ ಸೀಟ್‌ನಲ್ಲಿ ಕುಳಿತವರು ಸೀಟ್ ಬೆಲ್ಟ್ ಹಾಕುವುದು ಕಡ್ಡಾಯ. ಬೆಲ್ಟ್ ಹಾಕದಿದ್ದರೆ ಅದು ನಿಯಮ ಉಲ್ಲಂಘನೆಯಾಗುತ್ತದೆ. ಆದರೆ ಹೆಲ್ಮೆಟ್ ಧರಿಸದೆ ನಿಯಮ ಉಲ್ಲಂಘಿಸಿದ್ದೀರಿ, ದಂಡ ಪಾವತಿಸಿ ಎಂದು ಕಾರು ಮಾಲೀಕನಿಗೆ ಸಂದೇಶ ಬಂದರೆ ಏನರ್ಥ?. ಹೌದು ಮೈಸೂರಿನ ಕಾರು ಮಾಲೀಕರೊಬ್ಬರು ಈ ಸಂದೇಶ ನೋಡಿ ತಬ್ಬಿಬ್ಬಾಗಿದ್ದಾರೆ. ಮಹದೇವಪುರ ರಸ್ತೆ, ರಮ್ಮನಹಳ್ಳಿ ಸರ್ಕಲ್‌ನಲ್ಲಿ ಹೆಲ್ಮೆಟ್ ರಹಿತ ಚಾಲನೆ ಮಾಡಿದ್ದೀರಿ, 500 ರೂ. ದಂಡ ಪಾವತಿಸುವ ಮೂಲಕ ಮುಂದಿನ ಕಾನೂನು ಕ್ರಮದಿಂದ ಪಾರಾಗಿ ಎಂದು ಅವರ ಕಾರಿನ ನೋಂದಣಿ ಸಂಖ್ಯೆಯನ್ನು ನಮೂದಿಸಿರುವ ಸಂದೇಶ ಬಂದಿದೆ.

ಈ ರೀತಿಯ ಯಡವಟ್ಟುಗಳು ಸಾಕಷ್ಟಾಗಿವೆ. ಎಐ ಕ್ಯಾಮರಾಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ? ಇಲ್ಲವೇ? ಎಂಬುದರ ಬಗ್ಗೆ ಸ್ಪಷ್ಟನೆ ಇಲ್ಲ. ಕೆಲ ಅಧಿಕಾರಿಗಳು ಪ್ರಾಯೋಗಿಕ ಹಂತದಲ್ಲಿದೆ ಎನ್ನುತ್ತಾರೆ. ಕ್ಯಾಮರಾಗಳು ಫೋಟೋ ಕ್ಲಿಕ್ಕಿಸಿದ ತಕ್ಷಣ ಆ ವಾಹನಕ್ಕೆ ಸಂಬಂಧಪಟ್ಟವರ ಮೊಬೈಲ್‌ಗೆ ಸಂದೇಶ ಹೋಗುತ್ತದೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಮೇಲಧಿಕಾರಿಗಳು ಪ್ರಕಟಣೆ ಮೂಲಕ ಸ್ಪಷ್ಟನೆ ನೀಡಿ, ಗೊಂದಲ ಪರಿಹರಿಸುವಂತೆ ಸಾರ್ವಜನಿಕರು ಮನವಿ ಮಾಡಿದ್ದಾರೆ.

ಕೇಂದ್ರ ಸಚಿವ ವಿ.ಸೋಮಣ್ಣ ಇಂದು ಮೈಸೂರು ಪ್ರವಾಸ



ಮೈಸೂರು, ಸೆ.12– ಭಾರತ ಸರ್ಕಾರದ ರೈಲ್ವೆ ರಾಜ್ಯ ಸಚಿವರು ಹಾಗೂ ಜಲ ಶಕ್ತಿ ಸಚಿವ ವಿ. ಸೋಮಣ್ಣ ಅವರು ಸೆ.13 ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದು, ಅಂದು ಬೆಳಗ್ಗೆ 9 ಗಂಟೆಗೆ ಮೈಸೂರಿಗೆ ಆಗಮಿಸಲಿದ್ದಾರೆ. ಬೆಳಗ್ಗೆ 9:15 ಗಂಟೆಗೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ದರ್ಶನ ಪಡೆದು ಬಿಜೆಪಿ ಪಕ್ಷದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಅಶೋಕಪುರಂ ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವರು. ಮಧ್ಯಾಹ್ನ 12 ಗಂಟೆಗೆ ಮೈಸೂರು ರೈಲು ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವರು ಹಾಗೂ ಮಧ್ಯಾಹ್ನ 1 ಗಂಟೆಗೆ ಮೈಸೂರಿನ ಡಿಆರ್‌ಎಂ ಕಚೇರಿಯಲ್ಲಿ ರೈಲ್ವೆ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ರೈಲ್ವೆ ಮಂಡಳಿಯ ಸೆಕ್ಷನ್ ಆಫೀಸರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ : ನಾನು ಮುಂದಿನ ಜನ್ಮದಲ್ಲಾದರೂ ನಾಯಿಯಾಗಿ ಹುಟ್ಟಬೇಕು ಎಂದು ದೇವರಲ್ಲಿ ಬೇಡಿಕೊಳ್ಳುವೆ.

ತಿಮ್ಮ : ಯಾಕೋ ನಿನಗೆ ನಾಯಿ ಜನ್ಮ ಬಯಸುವಂತಹ ಮನಸ್ಸು ಯಾಕೆ ಬಂತು!

ಗುಂಡ : ನನ್ನ ಹೆಂಡತಿ ನಾಯಿ ಕಂಡರೆ ಮಾತ್ರ ಹೆದರ್ತಾಳೆ... ಅದಕ್ಕೆ ನಾಯಿಯಾಗಿ ಹುಟ್ಟಲು ಬಯಸಿರುವೆ!

ಮೈಸೂರು ಮಿತ್ರ

ಶುಕ್ರವಾರ, 13 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನೋವುಗಳೇನು ಕಡಿಮೆ ಆಗಿಲ್ಲ. ತಾಳ್ಮೆ ಹೆಚ್ಚಾಗಿದೆ ಅಷ್ಟೇ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಲ್ಲ ಇದ್ದಲ್ಲಿ ನೊಣ ತಿರುಗಾಡಿದಂತೆ.

ನಿಮ್ಮ ಪತ್ರಗಳು

■ ಜಾಹೀರಾತು ವಿಚಾರದಲ್ಲಿ ಸರ್ಕಾರದ ತಾರತಮ್ಯ ನೀತಿ

ಮಾನ್ಯರೆ,

ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ರಾಜ್ಯ ಸರ್ಕಾರ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳಿಗೆ ಸರ್ಕಾರದ ಜಾಹೀರಾತು ನೀಡುವ ವಿಚಾರದಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಹೇಳಿರು ವುದು 100ಕ್ಕೆ 100 ರಷ್ಟು ಸತ್ಯ. ಈ ಬಗ್ಗೆ ನಾನು ಸಹ ಕಳೆದ ವರ್ಷವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಾಗ ಆಯ್ತು ಮುಂದೆ ನೋಡುತ್ತೇನೆ ಎಂದಿದ್ದರು.

ಇಂದು (ಗುರುವಾರ) 'ಮೈಸೂರು ಮಿತ್ರ' ಒಂದನ್ನು ಬಿಟ್ಟು, ರಾಜ್ಯದ ಎಲ್ಲಾ ದಿನಪತ್ರಿಕೆಗಳಲ್ಲೂ ಮುಖಪುಟದಲ್ಲಿ ಬನ್ನಿ ಪ್ರಜಾಪ್ರಭುತ್ವಕ್ಕಾಗಿ ಕೈ ಜೋಡಿಸೋಣ, 'ಬೀದರ್‌ನಿಂದ ಚಾಮರಾಜನಗರದವರೆಗೆ ಅತಿ ಉದ್ದದ ಮಾನವ ಸರಪಳಿ...' ಎಂಬ ಜಾಹೀರಾತು ನೀಡಲಾಗಿದೆ. ಇದು ಒಂದು ರೀತಿಯಲ್ಲಿ ತಾರತಮ್ಯವಲ್ಲದೇ ಇನ್ನೇನು? ಇದು ರಾಜ್ಯ ಸರ್ಕಾರ ಅನುಸರಿಸುತ್ತಿರುವ ಮಲತಾಯಿ ಧೋರಣೆ ಎನ್ನಬೇಕು.

ಕಾಂಗ್ರೆಸ್ ಪಕ್ಷದ ಕೆಲವು ನಾಯಕರು, ಸಮಾನತೆ, ಸಹಬಾಳ್ವೆ, ಸರ್ವರಿಗೂ ಸಮಪಾಲು ಎಂದು ಭಾಷಣ ಬಿಗಿಯುತ್ತಾರೆ. ಆದರೆ, ಮೈಸೂರು ಜಿಲ್ಲೆಯಲ್ಲೇ ಅತೀ ಹೆಚ್ಚು ಪ್ರಸಾರ ಇರುವ 'ಮೈಸೂರು ಮಿತ್ರ'ಕ್ಕೆ ಸರ್ಕಾರದ ಜಾಹೀರಾತು ನೀಡದೇ ಅಸಮಾನತೆ ಅನುಸರಿಸುವ ಕೆಲಸ ಮಾಡುತ್ತಿರುವುದು ಇವರ ಇಬ್ಬಗೆ ಧೋರಣೆಯನ್ನು ಜಗಜ್ಜಾಹೀರು ಮಾಡುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಲ್ಲವನ್ನೂ ಸಮಾನ ದೃಷ್ಟಿಯಿಂದ ನೋಡುವ ಮನೋಭಾವನೆ ಬೆಳೆಸಿಕೊಳ್ಳಬೇಕಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಸರ್ಕಾರದ ಈ ಇಬ್ಬಗೆ ಧೋರಣೆ ಬಗ್ಗೆ ಓದುಗರೆಲ್ಲಾ ಖಂಡಿಸಬೇಕಿದೆ!

ಮಾನ್ಯರೆ,

ಕಳೆದ ನಲ್ವತ್ತು ದಶಕಗಳಿಂದ ಪತ್ರಿಕಾ ರಂಗದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿರುವ ಜನಪ್ರಿಯ ದಿನಪತ್ರಿಕೆಗಳಾದ 'ಮೈಸೂರು ಮಿತ್ರ/ ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳಿಗೆ ಜಾಹೀರಾತು ನೀಡುವಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿರುವ ಸರ್ಕಾರದ ಕ್ರಮ ಖಂಡನಾರ್ಹ.

ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿ ಮನೆ ಮಾತಾಗಿ ಅಪಾರ ಓದುಗರನ್ನು ಹೊಂದಿರುವ ಈ ಸೋದರ ಪತ್ರಿಕೆಗಳು ವಸ್ತುನಿಷ್ಠ ಬರಹಗಳ ಮೂಲಕ ಜನಮನ್ನಣೆ ಗಳಿಸಿವೆ. ಪ್ರಸ್ತುತ ಎಲೆಕ್ಟ್ರಾನಿಕ್ ಮಾಧ್ಯಮಗಳ ಪೈಪೋಟಿ ನಡುವೆಯೂ ತನ್ನದೇ ಆದ ವಿಶೇಷತೆಯನ್ನು ಉಳಿಸಿ ಕೊಂಡು ಬಂದಿವೆ. ರಾಜ್ಯ ಮಟ್ಟದ ಪತ್ರಿಕೆಗಳಿಗೆ ಸರಿಸಮನಾಗಿ ಹೊರ ಬರುತ್ತಿರುವ ಈ ಪತ್ರಿಕೆಗಳಿಗೆ ಯಾವ ಕಾರಣಕ್ಕೆ ಜಾಹೀರಾತು ನೀಡುತ್ತಿಲ್ಲವೆಂಬುದನ್ನು ಸ್ಪಷ್ಟಪಡಿಸ ಬೇಕಿದ್ದು, ಸರ್ಕಾರದ ಈ ಇಬ್ಬಗೆ ಧೋರಣೆಯನ್ನು ಓದುಗರೆಲ್ಲರೂ ಖಂಡಿಸಬೇಕಿದೆ.

– ಹೆಚ್. ಆರ್. ಪ್ರಸಾದ್, ವಿವೇಕಾನಂದ ನಗರ, ಮೈಸೂರು.

■ ಉದ್ಘಾಟನೆಗಾಗಿ ಕಾದಿರುವ ಸೋಲಿಗರ ಸಮುದಾಯ ಭವನ

ಮಾನ್ಯರೆ,

ಮೈಸೂರಿನ ಗಾಯತ್ರಿಪುರಂ ಬಡಾವಣೆಯಲ್ಲಿ ಸರ್ಕಾರದಿಂದ ಅನುದಾನ ಪಡೆದು ನಿರ್ಮಿಸಲಾಗಿರುವ ಸೋಲಿಗರ ಸಮುದಾಯ ಭವನವು ಸುಮಾರು 7–8 ವರ್ಷಗಳಿಂದಲೂ ಉದ್ಘಾಟನೆಗೊಳ್ಳದೆ ಪಾಳು ಬಿದ್ದಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಭವನವು ಆದಷ್ಟು ಬೇಗ ಉದ್ಘಾಟನೆಗೊಳ್ಳಲಿ ಎಂದು ಮನವಿ.

– ಕಾರಿಯಪ್ಪ, ಮೈಸೂರು.

■ ತೃತೀಯಲಿಂಗಿಗಳ ಕಾಟಕ್ಕೆ ಕಡಿವಾಣ ಅಗತ್ಯ

ಮಾನ್ಯರೆ,

ಇತ್ತೀಚೆಗೆ ಮೈಸೂರಿನಲ್ಲಿ ತೃತೀಯಲಿಂಗಿಗಳು ಸಾರ್ವಜನಿಕರು ಓಡಾಡುವ ಮಧ್ಯ ರಸ್ತೆಯಲ್ಲಿ ಹೊಡೆದಾಟ ಮಾಡಿಕೊಂಡು ನಗ್ನ ಸ್ಥಿತಿಯಲ್ಲಿ ಕಾಣಿಸಿಕೊಂಡು ಸಾರ್ವಜನಿಕರಿಗೆ ತೊಂದರೆ ನೀಡಿ ಅಸಹ್ಯ ತರಿಸುವಂತೆ ವರ್ತಿಸಿದ್ದಾರೆ.

ಎಲ್ಲಾ ಕಡೆಗೂ ರೈಲುಗಳಲ್ಲಿ, ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಸೀಮಂತ ಕಾರ್ಯಕ್ರಮದಿಂದ ಶುರುವಾಗಿ ನಾಮಕರಣ, ಮದುವೆ, ಗೃಹಪ್ರವೇಶ ಯಾವುದೇ ಶುಭ ಸಮಾರಂಭದಲ್ಲೂ ಹೀಗೆ ಎಲ್ಲಾ ಛತ್ರಗಳಿಗೂ ನುಗ್ಗಿ ಸಂತಸದ ಸಂಭ್ರಮವನ್ನು ಹಾಳು ಮಾಡುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೂ ಯಾವುದೇ ಉಪಯೋಗವಾಗುತ್ತಿಲ್ಲ. ಇದಕ್ಕೆ ಪೊಲೀಸ್ ಇಲಾಖೆ ಮಾಮೂಲು ಪಡೆಯುತ್ತಾರೆ. ಅವರು ನಮಗೇನೂ ಮಾಡುವುದಿಲ್ಲ. ಹೋಗಿ ದೂರುಕೊಡಿ ಎಂದು ರಾಜಾರೋಷವಾಗಿ ತೃತೀಯಲಿಂಗಿಗಳು ಹೇಳುತ್ತಿರುವುದು ನಮ್ಮ ಭ್ರಷ್ಟ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಲೈಂಗಿಕ ಅಲ್ಪಸಂಖ್ಯಾತರು ಎಂಬ ಹಣೆಪಟ್ಟಿ ಧರಿಸಿ ಸಮಾಜದ ಔದಾಸಿನ್ಯ ಹಾಗೂ ಮರುಕದ ನಡೆಗಳನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವ ಇಂತಹ ನಡೆ ಖಂಡನೀಯ. ಸಾರ್ವಜನಿಕವಾಗಿ ಸಭ್ಯತೆಯ ಎಲ್ಲೆ ಮೀರಬಾರದು ಎಂಬ ಸೌಜನ್ಯವನ್ನೇ ಅಸ್ತ್ರವಾಗಿಸಿಕೊಂಡು ಮರ್ಯಾದಸ್ತರು ಅನಿವಾರ್ಯವಾಗಿ ಹಣ ಪೀಕುವಂತ ಪರಿಸ್ಥಿತಿಯ ನಿರ್ಮಾಣ ಮಾಡುವಂತ ಇವರ ನಡೆ ಅಸಹ್ಯ ಹುಟ್ಟಿಸುತ್ತದೆ.

ದೈಹಿಕವಾಗಿ ಸದೃಢವಾಗಿಯೇ ಇರುವ ಇವರು ಇಂದಿನ ದಿನಮಾನಗಳಲ್ಲಿ ಯಾವ ಕೆಲಸವನ್ನಾದರೂ ಕಷ್ಟಪಟ್ಟು ಮಾಡಿ ಹಣ ಸಂಪಾದಿಸುವ ಸೌಕರ್ಯ ಗಳಿರುವಾಗ ಇಂತಹ ಸುಲಭ ಹಣ ಸಂಪಾದನೆಯ ಮಾರ್ಗದ ಮೂಲಕ ಸಭ್ಯರನ್ನು ದೋಚುವಂತ ಕೆಲಸಕ್ಕೆ ಇಳಿದಿರುವುದು ವಿಷಾದನೀಯ. ರಕ್ಷಣಾ ಇಲಾಖೆ ಈ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಂಡು ಸಾರ್ವಜನಿಕರ ಹಿತರಕ್ಷಣೆ ಮಾಡಬೇಕು.

ಸಂಚಾರಿ ವ್ಯವಸ್ಥೆಯನ್ನು ತಹಬದಿಗೆ ತರಲು ಮಿತಿ ಮೀರಿ ಪ್ರಯತ್ನಿಸುವ ಪೊಲೀಸರು ಈ ತೃತೀಯಲಿಂಗಿಗಳ ವಿಚಾರದಲ್ಲಿ ಬಾಯಿಗೆ ಬೀಗ ಹಾಕಿಕೊಂಡಿರು ವುದು ಸರಿಯೇ. ಈ ಬಗ್ಗೆ ರಾಜ್ಯಾದ್ಯಂತ ಸೂಕ್ತ ಕ್ರಮ ಜರುಗಿಸಬೇಕಾಗಿರುವುದು ತುರ್ತು ಆಗಬೇಕಾಗಿದೆ. ಕೆಲವರಂತೂ ರೌಡಿ ಗಂಡಸರೇ ಸ್ತ್ರೀ ವೇಷ ಧರಿಸಿ ಬರುತ್ತಿದ್ದಾರೆ ಎಂಬ ಗುಮಾನಿಯು ಇದೆ. ತೃತೀಯಲಿಂಗಿಗಳ ಕಾಟಕ್ಕೆ ತೆರೆ ಬೀಳಬೇಕಾಗಿದೆ.

–ಶಿವಮೊಗ್ಗ ನಾ. ದಿನೇಶ್ ಆಡಿಗ ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಆರೋಗ್ಯ ಕೇಂದ್ರದಲ್ಲಿ ಅನಾರೋಗ್ಯಕ್ಕೆ ತಾತ್ಕಾಲಿಕ ಮದ್ದಷ್ಟೇ!


ಇತ್ತೀಚೆಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ನಮಗೆ ಸಾಕಷ್ಟು ಪೂರಕ ವಿಷಯಗಳನ್ನು ತಿಳಿಸಿಕೊಡಲಾಗುತ್ತಿದೆ. ನಾವು ಏನನ್ನು ತಿನ್ನಬೇಕು, ಏನನ್ನು ತಿನ್ನಬಾರದು, ಆರೋಗ್ಯವನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಏನು ಮಾಡಬೇಕು. ಇತ್ಯಾದಿ ಹಲವು ಸಲಹೆಗಳು ಅಲ್ಲಿ ದೊರಕುತ್ತವೆ. ನಾವು ಅದನ್ನು ಓದಿ ಹಾಗೆಯೇ ಬಿಡುತ್ತೇವೆ.

ಅವನ್ನು ಓದಿದಾಗ ಹೌದು, ಹಾಗೆ ಮಾಡಬಹುದು ಎನ್ನಿಸುತ್ತದೆ. ಇನ್ನು ಮುಂದೆ ಆದಷ್ಟೂ ಹೊರಗೆ, ಹೋಟೇಲ್‌ಗಳಲ್ಲಿ, ರಸ್ತೆಬದಿ ಏನನ್ನೂ ತಿನ್ನಬಾರದು ಎನ್ನಿಸುತ್ತದೆ. ಆದರೆ ಕೆಲವೇ ಸಮಯದಲ್ಲೇ ಅದನ್ನು ಮರೆತು ಮಾಮೂಲಿನಂತೆ ಇಂತಹ ಆಹಾರ ಅರಸಿ ಹೋಗುತ್ತೇವೆ. ನಮಗೆ ಆರೋಗ್ಯಕ್ಕಿಂತ ಬಾಯಿ ಚಪಲ ಪ್ರಧಾನವಾಗುತ್ತದೆ. ಆರೋಗ್ಯ ಕೆಟ್ಟಾಗ, ಅದು ಸಣ್ಣದಾಗಿದ್ದರೆ ಏನೋ ಆರೈಕೆ ಮಾಡಿಸಿಕೊಂಡು ಸರಿಪಡಿಸಿಕೊಳ್ಳುತ್ತೇವೆ. ಅದು ದೀರ್ಘಾವಧಿಯ ಸಮಸ್ಯೆಯಾದರೆ ವೈದ್ಯರನ್ನು ಹುಡುಕಿಕೊಂಡು ಹೋಗುತ್ತೇವೆ. ಆಗಲೂ ನನ್ನ ಆರೋಗ್ಯ ಹದಗೆಡುವುದಕ್ಕೆ ಏನು ಕಾರಣ ಎಂದು ವಿಶ್ಲೇಷಿಸುವುದಿಲ್ಲ.

ಆರೋಗ್ಯ ಕಾಪಾಡಿಕೊಳ್ಳಲು ಪ್ರತಿದಿನ ವ್ಯಾಯಾಮ ಮಾಡಿ, ಕನಿಷ್ಠ ಒಂದು ಗಂಟೆ ಕಾಲ್ನಡಿಗೆ ಎಂದೆಲ್ಲಾ ಓದಿರುತ್ತೇವೆ. ಕೆಲವು ದಿನ ಹಾಗೇ ಮಾಡುತ್ತೇವೆ ಕೂಡ. ಆದರೆ ಯಾವುದೋ ಕಾರಣದಿಂದ ಒಂದೆರಡು ದಿನ ವಾಕಿಂಗ್ ಹೋಗಲಾಗಲಿಲ್ಲ ಎಂದರೆ ಮತ್ತೆ ಹೋಗುವ ಪ್ರಯತ್ನವನ್ನೇ ಮಾಡು ವುದಿಲ್ಲ. ನಮಗೆಲ್ಲರಿಗೂ ಬೆಳಗಿನ ಸವಿನಿದ್ರೆ ಮೋಡಿ ಮಾಡುತ್ತದೆ ಹಾಗೂ ತನ್ನತ್ತ ಸೆಳೆದುಕೊಂಡು ಬಿಡುತ್ತದೆ. ನಾವು ನಿದ್ರಾ ದಾಸರಾದಾಗ ಕ್ರಮೇಣ ಆರೋಗ್ಯ ದಾರಿ ತಪ್ಪುತ್ತಾ ಹೋಗುತ್ತದೆ. ಆದರೆ ಮನಸ್ಸಿನಲ್ಲಿ ಏನೋ ಒಂದು ನಿರ್ಧಾರ! ಆರೋಗ್ಯದಲ್ಲಿ ಹೆಚ್ಚುಕಡಿಮೆಯಾದರೆ ಯಾವುದಾದರೂ ಆಸ್ಪತ್ರೆಗೆ, ನರ್ಸಿಂಗ್ ಹೋಮ್‌ಗೆ ಹೋಗಿ ಸರಿಪಡಿಸಿಕೊಂಡರಾಯಿತು ಎಂಬ ಮನೋಭಾವ ಬಂದುಬಿಟ್ಟಿರುತ್ತದೆ. ಆದ್ದರಿಂದ ಆರೋಗ್ಯ ಕಾಪಾಡಿಕೊಳ್ಳಲು ಶ್ರಮವಹಿಸುವುದಕ್ಕಿಂತ ಆಸ್ಪತ್ರೆಗಳತ್ತ ಗಮನ ಹರಿಸುತ್ತೇವೆ.

ಇದೊಂದು ರೀತಿ ವೈಪರೀತ್ಯದ ಮನೋಭಾವ. ಆರೋಗ್ಯವನ್ನು ಸರಿಯಾಗಿಟ್ಟುಕೊಳ್ಳಬೇಕೇ? ಅಥವಾ ಆರೋಗ್ಯ ಕೆಟ್ಟಾಗ ಸರಿಪಡಿಸಿಕೊಳ್ಳಲು ಔಷಧಿ ತೆಗೆದುಕೊಳ್ಳಬೇಕೆ ಎಂಬುದು ಗೊಂದಲದ ಮನೋಭಾವ. ಆರೋಗ್ಯ ಸರಿಯಾಗಿಟ್ಟುಕೊಳ್ಳಲು ಯೋಗ ಮಾಡಬೇಕು, ಬೆಳಿಗ್ಗೆ–ಸಂಜೆ ನಡಿಗೆ ಒಳ್ಳೆಯದು, ಮಿತಾಹಾರ ಸೇವಿಸಬೇಕು ಇತ್ಯಾದಿಗಳು ನಮಗೆ ಗೊತ್ತಿಲ್ಲದ ವಿಷಯಗಳಲ್ಲ. ಆದರೆ ಹಾಗೆ ಮಾತ್ರ ನಡೆದುಕೊಳ್ಳುವುದಿಲ್ಲ. ಇದಕ್ಕೆ ನೀಡುವ ಮುಖ್ಯವಾದ ಕಾರಣ ನಮಗೆ ಸಮಯವಿಲ್ಲ!! ಆದರೆ ಆರೋಗ್ಯ ಹದಗೆಟ್ಟಾಗ, ಮೇಲೇಳಲು ಸಾಧ್ಯವಾಗದ ಪರಿಸ್ಥಿತಿ ಬಂದಾಗ ನಮಗೆ ಮಲಗುವುದು ಅನಿವಾರ್ಯವಾದಾಗ, ವೈದ್ಯರೂ ನಿಮಗೆ ವಿಶ್ರಾಂತಿ ಬೇಕು ಎಂದು ಹೇಳಿದಾಗ ನಮಗೆ ಸಮಯ ಹೊಂದುತ್ತದೆ. ಆದರೆ ಆರೋಗ್ಯವಂತರಾಗಿರುವಾಗ ಯಾವುದಕ್ಕೂ ಟೈಂ ಇಲ್ಲ.

ನಮ್ಮ ಆರೋಗ್ಯ ಚೆನ್ನಾಗಿರಬೇಕೆಂದು, ಜೀವನ ಸುಗಮವಾಗಬೇಕೆಂದು ಹಗಲೂ ಇರುಳು ದುಡಿಯುವ ನಾವು ನಮ್ಮ ಆರೋಗ್ಯದ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಿದ್ದೇವೆ ಎಂಬುದನ್ನೂ ಯೋಚಿಸಬೇಕು. ಇಷ್ಟಾದರೂ ನಮ್ಮ ಆರೋಗ್ಯ ಕೇಂದ್ರಗಳು ನಮ್ಮ ಖಾಯಿಲೆಗಳಿಗೆ ಶಾಶ್ವತ ಪರಿಹಾರ ನೀಡುತ್ತವೆಯೇ ಎಂಬುದನ್ನೂ ಯೋಚಿಸಬೇಕು. ಆದರೆ ನೈಜತೆ ಎಂದರೆ ಇಂದು ಆಸ್ಪತ್ರೆಗಳು ರೋಗ ಗುಣಪಡಿಸುವ ಕೇಂದ್ರಗಳಾಗಿರದೆ ಕೇವಲ ರಿಪೇರಿ ಮಾಡುವ ಕೇಂದ್ರಗಳಾಗುತ್ತಿರುವುದು ಶೋಚನೀಯವಾಗಿ ಕಂಡುಬರುತ್ತದೆ. ನಿಮಗೆ ಖಾಯಿಲೆ ಬಂದಿದೆಯೇ ಅದಕ್ಕೆ ಕಾರಣ ಏನು ನಿಮ್ಮ ದೇಹಕ್ಕೆ ಯಾವ ಆಹಾರ ಪದ್ಧತಿ ಒಳ್ಳೆಯದು, ಏನನ್ನು ಸೇವಿಸಬೇಕು, ಏನನ್ನು ಸೇವಿಸಬಾರದು ಎಂದು ಅವು ಮಾರ್ಗದರ್ಶನ ಮಾಡುವುದಿಲ್ಲ. ಜ್ವರ ಬಂದಿದೆಯೇ ಹಾಗಾದರೆ ಈ ಮಾತ್ರೆ, ಔಷಧಿ, ಇಂಜೆಕ್ಷನ್ ತೆಗೆದುಕೊಳ್ಳಿ ಎಂದು ಹೇಳುತ್ತವೆಯೇ ಹೊರತು ಜ್ವರ ಬಂದಿದ್ದಕ್ಕೆ ಕಾರಣ ಏನು. ಅದು ಮತ್ತೆ ಮರುಕಳಿಸದಂತಾಗಲು ಏನು ಮಾಡಬೇಕು ಎಂದೇ ಹೇಳುವುದಿಲ್ಲ. ನಮಗೆ ಬೇಕಿರುವುದೂ ಅಷ್ಟೇ. ಜ್ವರ ಬಂದರೆ ಅದು ಹೋಗಬೇಕು ಅಷ್ಟೇ. ಮತ್ತೆ ಜ್ವರ ಬಂದರೆ ಮತ್ತೆ ಮಾತ್ರೆ ನುಂಗಿದರಾಯಿತು ಎಂಬ ಮನೋಭಾವ ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿದೆ.



> ಆರೋಗ್ಯ ಕೇಂದ್ರಗಳು (ಆಸ್ಪತ್ರೆಗಳು) ಆರೋಗ್ಯ ಸುಧಾರಿಸುವ ಕೇಂದ್ರಗಳಾಗಬೇಕು. ಅವು ನಮ್ಮ ಆರೋಗ್ಯದ ಕುರಿತಾದ ವಿಶ್ಲೇಷಣೆ ನಡೆಸಬೇಕು, ಮತ್ತೆ ಅಂತಹ ಅನಾರೋಗ್ಯವಾಗದಂತೆ ಏನು ಮಾಡಬೇಕು ಎಂದು ತಿಳಿಸಿ ಹೇಳಬೇಕು. ಆದರೆ ಹಾಗೆ ಆಗುತ್ತಿಲ್ಲ. ಬಂದ ಖಾಯಿಲೆಗೆ ತಾತ್ಕಾಲಿಕ ಪರಿಹಾರ ನೀಡುವುದೇ ಆರೋಗ್ಯ ಕೇಂದ್ರದ ಕರ್ತವ್ಯ ಎಂಬಂತೆ ಕಂಡುಬರುತ್ತಿರುವುದು ದುರ್ದೈವ.

ಆರೋಗ್ಯ ಕೇಂದ್ರಗಳು (ಆಸ್ಪತ್ರೆಗಳು) ಆರೋಗ್ಯ ಸುಧಾರಿಸುವ ಕೇಂದ್ರಗಳಾಗಬೇಕು. ಅವು ನಮ್ಮ ಆರೋಗ್ಯದ ಕುರಿತಾದ ವಿಶ್ಲೇಷಣೆ ನಡೆಸಬೇಕು, ಮತ್ತೆ ಅಂತಹ ಅನಾರೋಗ್ಯವಾಗದಂತೆ ಏನು ಮಾಡಬೇಕು ಎಂದು ತಿಳಿಸಿ ಹೇಳಬೇಕು. ಆದರೆ ಹಾಗೆ ಆಗುತ್ತಿಲ್ಲ. ಬಂದ ಖಾಯಿಲೆಗೆ ತಾತ್ಕಾಲಿಕ ಪರಿಹಾರ ನೀಡುವುದೇ ಆರೋಗ್ಯ ಕೇಂದ್ರದ ಕರ್ತವ್ಯ ಎಂಬಂತೆ ಕಂಡುಬರುತ್ತಿರುವುದು ದುರ್ದೈವ. ಈ ಹಿಂದೆ ಹಾಗಿರಲಿಲ್ಲ. ಅನಾರೋಗ್ಯ ಎಂದಾಗ ಹಿಂದಿನ ದಿನ ಏನು ತಿಂದಿರಿ? ಅದರಿಂದ ನಿಮಗೆ ಖಾಯಿಲೆ ಬಂದಿದೆ. ಮುಂದೆ ಅಂತಹುದನ್ನು ಸೇವಿಸಬೇಡಿ, ಬದಲಾಗಿ ಹೀಗೆ ಮಾಡಿ ಎಂಬ ಸಲಹೆಗಳನ್ನು ವೈದ್ಯರು ನೀಡುತ್ತಿದ್ದರು. ಆದರೆ ಈಗ ಎಲ್ಲವೂ ಔಷಧ ಆಹಾರ.

ಮೊದಲನೆಯದಾಗಿ ವೈದ್ಯರಿಗೆ ಪುರುಸೊತ್ತಿಲ್ಲದ ಕೆಲಸ. ನೂರಾರು ರೋಗಿಗಳನ್ನು ಅವರು ನೋಡಬೇಕು. ಹಾಗಾಗಿ ಬಂದವರನ್ನು ಕೆಲ ನಿಮಿಷಗಳಲ್ಲಿ ಸಾಗಹಾಕುವ ತಂತ್ರ ಅನುಸರಿಸಲಾಗುತ್ತಿದೆ. ಹೀಗೆ ಎಲ್ಲ ವೈದ್ಯರು ಮಾಡುತ್ತಾರೆ ಎಂದು ಹೇಳಲಾಗುವುದಿಲ್ಲ. ಇಂದಿಗೂ ರೋಗಿಗಳನ್ನು ಆತ್ಮೀಯವಾಗಿ ಕಂಡು ಸೂಕ್ತ ಸಲಹೆ ನೀಡುವವರು ಇದ್ದಾರೆ. ಆದರೆ ಅವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ ಉಳಿದಂತೆ ವೈದ್ಯರಿಗೆ ದಾಹ ಹೆಚ್ಚಾಗುತ್ತಿದೆ, ಅದೂ ಹಣದ ದಾಹ. ಅದು ತಣಿಯುವಂತೆ ಕಾಣುತ್ತಿಲ್ಲ.

ಇತ್ತೀಚೆಗೆ ಒಬ್ಬ ಪತ್ರಕರ್ತರು ತಮ್ಮ ಪತ್ರಿಕೆಯ ಸಂಪಾದಕೀಯದಲ್ಲಿ ಒಂದು ವಿಷಯ ಪ್ರಸ್ತಾಪಿಸಿದ್ದರು. ಅದು ಮನಕಲಕುವಂತಿದೆ. ಅವರ ಮಗಳು ಕೇವಲ 42 ನೆಯ ವಯಸ್ಸಿನಲ್ಲಿ ನಿಧನರಾದರು. ಆಕೆ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. (ಯಾವ ತಂದೆ–ತಾಯಿಯರಿಗೂ ತಮ್ಮ ಮಕ್ಕಳು ತಮ್ಮ ಎದುರಿಗೇ ಮೃತರಾಗುವುದನ್ನು ಕಾಣುವುದು ಸಹಿಸಲಾಗದ ನೋವು ನೀಡುವಂತಹುದು. ಅದರಲ್ಲೂ ಗಂಡುಮಕ್ಕಳನ್ನು ಅರೆ ವಯಸ್ಸಿನಲ್ಲಿ ಕಳೆದುಕೊಂಡಾಗ ಅದರ ನೋವು ಜೀವನಪರ್ಯಂತ ಎಂಬುದಕ್ಕೆ 'ಪುತ್ರ ಶೋಕಂ ನಿರಂತರಂ' ಎಂದು ಹೇಳಲಾಗುತ್ತದೆ. ಆದರೆ ಇಂದು ಗಂಡು–ಹೆಣ್ಣು ಎಂಬ ಭೇದವಿಲ್ಲ. ಸತ್ತವರ ಬಗ್ಗೆ ಜೀವನ ಪೂರ್ತಿ ಕೊರಗು ಉಳಿಯುತ್ತದೆ ಎಂಬುದು ಕಟುಸತ್ಯ.) ಮಕ್ಕಳು ಮುಂದೆ ನಮ್ಮನ್ನು ನೋಡಿಕೊಳ್ಳುತ್ತಾರೆ ಎಂಬ ಭಾವನೆಯಿಂದ, ನೆಮ್ಮದಿಯ ಜೀವನ ನಡೆಸುತ್ತಿರುವವರಿಗೆ ಇಂತಹ ಮರಣಗಳು ಜೀವನಪೂರ್ತಿ ಆಘಾತ ನೀಡುತ್ತವೆ.

ಪತ್ರಕರ್ತರೊಬ್ಬರ ಮಗಳ ಸಾವು ಅಕಾಲಿಕವಾದದ್ದು. ಸಾವಿಗೆ ಕಾರಣವಾದದ್ದು ತೀವ್ರವಾದ ಪಾರ್ಶ್ವವಾಯು. ಮಗಳ ಆರೋಗ್ಯ ಸರಿಯಾಗಬೇಕು ಎಂದು ಆಕೆಯನ್ನು ಬೆಂಗಳೂರಿನ ಒಂದು ಪ್ರಸಿದ್ಧ ಆಸ್ಪತ್ರೆ ದಾಖಲಿಸಿದರು. ನಂತರ ಅಲ್ಲಿ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲವೆಂದು ಮತ್ತೊಂದು ಉತ್ತಮ ಎಂದು ಭಾವಿಸಿದ ಆಸ್ಪತ್ರೆಗೆ ದಾಖಲಿಸಿದರು. ಮುಂದಿನ ಮಾತುಗಳು ಅವರ ಬರಹದಲ್ಲಿದೆ. ಅವರು ಬರೆಯುತ್ತಾರೆ: 'ಬೆಂಗಳೂರಿನ ಎರಡು ಪ್ರಸಿದ್ಧ ಆಸ್ಪತ್ರೆಗಳಲ್ಲಿ 20 ದಿನಗಳ ಕಾಲ ಸಾವು–ಬದುಕಿನ ನಡುವೆ ಹೋರಾಟ ನಡೆಸಿ ಮಗಳು ಕಣ್ಮುಚ್ಚಿದಳು. ಕಾರಿನಿಂದಿಳಿದು ನಗುನಗುತ್ತಲೇ, ಚೆನ್ನಾಗಿ ಮಾತನಾಡುತ್ತಲೇ ಆಸ್ಪತ್ರೆಯ ಅಂಗಳ ತಲುಪಿದವಳನ್ನು ದಿನ ಕಳೆಯುವುದರಲ್ಲಿ ಅಗತ್ಯವಿಲ್ಲದಿದ್ದರೂ ತೀವ್ರ ನಿಗಾ ಘಟಕ(ಐಸಿಯು)ದಲ್ಲಿ ಇರಿಸಿ ನಾನಾ ಬಗೆಯ ಅನಗತ್ಯ ಚಿಕಿತ್ಸೆಗಳನ್ನು ನೀಡಿ ಮಗಳ ದೇಹವನ್ನು ಹಿಂಡಿ ಹಿಪ್ಪೆ ಮಾಡಿದರು. ಇಡೀ ನನ್ನ ಕುಟುಂಬ ಆಸ್ಪತ್ರೆಯ ಬಾಗಿಲಿನಲ್ಲಿ ಮಗಳು ಗುಣಮುಖಳಾಗುವುದನ್ನು ಚಾತಕ ಪಕ್ಷಿಯಂತೆ ಕಾಯುತ್ತಾ ಹಗಲು–ರಾತ್ರಿ ಕಳೆದೆವು. ಆಕೆ ಗಂಭಿರ ಸ್ಥಿತಿ ತಲುಪಿರುವುದನ್ನು ಗಮನಿಸಿ ಸಂಬಂಧಪಟ್ಟ ಎಲ್ಲಾ ವೈದ್ಯರನ್ನು ಕಂಡು 'ಮಗಳನ್ನು ಉಳಿಸಿಕೊಡಿ' ಎಂದು ಅಂಗಲಾಚಿದೆವು. ಯಾವ ವೈದ್ಯರೂ ಖಚಿತವಾದ ನಿರ್ಧಾರಕ್ಕೆ ಬರಲೇ ಇಲ್ಲ. ಪ್ರತಿನಿತ್ಯ ಸುಮಾರು ಒಂದು ಲಕ್ಷ ರೂಪಾಯಿ ಚಾರ್ಜ್ ಮಾಡುತ್ತಲೇ ಬಂದರು. ಅವಳನ್ನು ಉಳಿಸಿಕೊಳ್ಳುವ ಆಸೆಯಿಂದ ಸಾಲ–ಸೋಲ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಆಸ್ಪತ್ರೆಗೆ ಕಟ್ಟಿದೆವು. ಪ್ರಯೋಜನವಾಗಲಿಲ್ಲ. ಕೇವಲ 42 ವರ್ಷಕ್ಕೆ ನನ್ನ ಪ್ರೀತಿಯ ಮಗಳು ನಮ್ಮಿಂದ ದೂರವಾದಳು. ಬೆಂಗಳೂರಿನ ಬಹುಪಾಲು ಪ್ರಸಿದ್ಧ ಆಸ್ಪತ್ರೆಗಳೆಲ್ಲದರ ಸ್ಥಿತಿ ಇದೇ ಆಗಿದೆ' ಎಂದು ಅವರು ಬರೆದುಕೊಂಡಿದ್ದಾರೆ. ಓದಿದರೆ ಕರುಳು ಹಿಂಡಿದಂತಾಗುತ್ತದೆ. ಅವರಿಗೆ ಯಾರು ಹಾಗೂ ಏನೆಂದು ಸಮಾಧಾನಪಡಿಸಬಹುದು ಎಂಬ ದುಗುಡದ ಆಲೋಚನೆ ಬಿಟ್ಟರೆ ಏನು ಮಾಡಲಾದೀತು ಎನಿಸುತ್ತದೆ.

ಇದು ಒಬ್ಬರ ಕಥೆ. ಇಂತಹ ಕಥೆಗಳು ಆ ಆಸ್ಪತ್ರೆಗಳ ಕಂಬಗಳು, ಗೋಡೆಗಳು ಅವೆಷ್ಟು ನೋಡಿವೆಯೋ ಎನ್ನಿಸುತ್ತದೆ. ಇಂತಹವುದನ್ನು ಕಂಡಾಗ ನಮಗೆ ಆರೋಗ್ಯದ ಮಹತ್ವ ಏನು ಎಂಬುದರ ಅರಿವಾಗಬೇಕು. 'ಓ ದೇವರೇ, ಆಯಸ್ಸು ಮುಗಿದಿದ್ದರೆ ನೇರವಾಗಿ ನಮ್ಮನ್ನು ನಿನ್ನ ಬಳಿ ಕರೆದುಕೋ, ಯಾವುದೇ ಕಾರಣಕ್ಕೂ ಆಸ್ಪತ್ರೆಗೆ ದಾಖಲಾಗುವಂತೆ ಮಾಡಬೇಡ, ಅಲ್ಲಿ ನಾನೂ ಉಳಿಯುವುದಿಲ್ಲ, ನನ್ನನ್ನು ನಂಬಿದವರೂ ಇರುವ ಎಲ್ಲಾ ಹಣವನ್ನು ಕಳೆದುಕೊಳ್ಳುವಂತಾಗದಿರಲಿ' ಎಂದು ಪ್ರಾರ್ಥಿಸುವಂತಾಗುತ್ತಿದೆ.

ಈ ಕಾರಣದಿಂದ ಅನ್ನಿಸುವುದು ಮೊದಲು ನಮ್ಮ ಆರೋಗ್ಯದ ಬಗ್ಗೆ ನಮಗೆ ಕಾಳಜಿ ಇರಬೇಕು. ಇಂದು ಆರೋಗ್ಯ ಕೆಟ್ಟರೆ ಅದು ಸುಧಾರಿಸುತ್ತದೆ ಎಂದು ಧೈರ್ಯವಾಗಿ ಹೇಳಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ನಾವು ಆರೋಗ್ಯವಂತರಾಗಿರಲು ನಾವೇ ಎಚ್ಚರದ ಕ್ರಮವಹಿಸಬೇಕು. ಸಾಮಾನ್ಯವಾಗಿ ಆರೋಗ್ಯ ಹಾಳಾಗಲು ಮುಖ್ಯವಾಗಿ ಎರಡು ಕಾರಣಗಳಿರುತ್ತವೆ. ಒಂದು, ನಾವು ಸೇವಿಸುವ ಆಹಾರ ಹಾಗೂ ನಮ್ಮ ಜೀವನ ಕ್ರಮ. ಸರ್ ಎಂ ವಿಶ್ವೇಶ್ವರಯ್ಯನವರು 102 ವರ್ಷ ಬದುಕಿದ್ದರು. ಅದಕ್ಕೆ ಮುಖ್ಯ ಕಾರಣ ಅವರ ಆಹಾರ ಪದ್ಧತಿ. ತಮಗೆ ಬೇಕಾದದ್ದು ಸಿಗದಿದ್ದಾಗ, ಬೇಡದ್ದನ್ನು ಅವರು ಎಂದೂ ಸೇವಿಸುತ್ತಿರಲಿಲ್ಲ. ಇದು ನಮ್ಮ ಜೀವನ ಕ್ರಮವಾಗಬೇಕು. ನಮ್ಮ ದೇಹಕ್ಕೆ ಒಗ್ಗುವುದಿಲ್ಲ ಎಂಬುದನ್ನು ಯಾವುದೇ ಕಾರಣಕ್ಕೆ, ಯಾವುದೇ ಆಸೆಯಿಂದ, ಯಾವುದೇ ಒತ್ತಾಯಗಳಿಗೆ ಮಣಿದು ಸೇವಿಸಬಾರದು. ನಮ್ಮ ದೇಹಕ್ಕೆ ಯಾವುದು ಹಿತವಲ್ಲ ಎಂಬುದನ್ನು ಬೇರೆಯವರು ನಮಗೆ ಹೇಳಿಕೊಡಬೇಕಾಗಿಲ್ಲ. ಅದು ನಮಗೇ ಅರ್ಥವಾಗುತ್ತದೆ. ಇದನ್ನು ಪಾಲಿಸುವುದು ತುಸು ಕಷ್ಟವಾದರೂ ಆರೋಗ್ಯವಂತರಾಗಿರಲು ಇದನ್ನು ಅನುಸರಿಸಲೇಬೇಕು.

ಮೊದಲಿನಿಂದಲೂ ನಮ್ಮ ಆರೋಗ್ಯ ಸೂತ್ರ ಎಂದರೆ ಹಸಿವಾಗಿರುವಾಗ ಮಾತ್ರ ತಿನ್ನು, ಸೂರ್ಯನ ಬೆಳಕಿರುವಾಗಲೇ ಆಹಾರ ಸೇವಿಸು ಎಂಬುದು. ಗಡಿಯಾರ ನೋಡಿಕೊಂಡು ತಿನ್ನುವ ಸಮಯವಾಗಿದೆ ಎಂದು ತಿನ್ನಬಾರದು. ಹೊಟ್ಟೆ ತನಗೆ ಆಹಾರ ಬೇಕಾಗಿದೆ ಎಂದು ತಿಳಿಸುವ ತನಕ, ಅಂದರೆ ಹಿಂದೆ ತಿಂದಿದ್ದು ಅರಗುವ ತನಕ, ಮತ್ತೆ ಆಹಾರ ಸೇವಿಸಬಾರದು. ರಾತ್ರಿ ಮಲಗುವ ಪೂರ್ವದ ಮೂರ್‍ನಾಲ್ಕು ಗಂಟೆಗಳ ಮೊದಲು ಆಹಾರ ಸೇವಿಸಬೇಕು. ತಡವಾಗಿದೆ ಎಂದರೆ ರಾತ್ರಿಯ ಊಟವನ್ನೇ ಬಿಡಬೇಕು.

ಇತ್ತೀಚೆಗೆ ಸಕ್ಕರೆ ಖಾಯಿಲೆ ಇರುವವರು ಆಹಾರ ಬಿಡಬಾರದು ಎಂದು ಮನಸ್ಸಿಗೆ ತುಂಬಲಾಗುತ್ತಿದೆ. ಇತ್ತೀಚೆಗೆ ಒಂದು ವಿದೇಶದಲ್ಲಿ ನಡೆದ ಸಂಶೋಧನೆಯಲ್ಲಿ 15 ದಿನಕ್ಕೆ ಒಮ್ಮೆ ಏನನ್ನೂ ಸೇವಿಸದಿರುವುದು ಆರೋಗ್ಯದ ಸೂತ್ರ ಎಂದು ಕಂಡುಕೊಳ್ಳಲಾಗಿದೆ. ಇದನ್ನು ನಮ್ಮಲ್ಲಿ ಮೊದಲಿನಿಂದಲೂ 'ಏಕಾದಶಿ' ಎಂಬ ಹೆಸರಿನಲ್ಲಿ ಆಚರಿಸಿಕೊಂಡು ಬಂದಿದ್ದೇವೆ. ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಆರೋಗ್ಯ ಕೇಂದ್ರಗಳಲ್ಲಿ ನಮ್ಮ ಆರೋಗ್ಯ ಸುಧಾರಿಸುವುದಿಲ್ಲ. ಅವು ಕೇವಲ ರಿಪೇರಿ ಕೇಂದ್ರಗಳಾಗುತ್ತಿವೆ. ದುರಸ್ತಿಗೆ ಬಂದ ವಾಹನ ಪದೇಪದೆ ದುರಸ್ತಿಗೆ ಒಳಪಡುವಂತೆ, ನಮ್ಮ ದೇಹ ಪದೇಪದೆ ದುರಸ್ತಿಗೆ ಒಳಪಡಬಾರದು. ದುರಸ್ತಿ ಮತ್ತೆ ಮೂಲ ಸ್ಥಿತಿಗೆ ತರುವುದಿಲ್ಲ ಎಂಬುದನ್ನು ಗಮನಿಸಬೇಕು.

ಸ್ಥಳೀಯ ಸಂಸ್ಥೆಗಳ ಟೆಂಡರ್‌ನಲ್ಲಿ ಯುವ ಗುತ್ತಿಗೆದಾರರಿಗೆ ಅವಕಾಶ ಕಲ್ಪಿಸಿ

ಸಿಎಂ ಸಿದ್ದರಾಮಯ್ಯಗೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಪತ್ರ

ಮೈಸೂರು, ಸೆ.12(ಬಿಎಲ್‌ಯು)– ಮೈಸೂರು ನಗರಪಾಲಿಕೆ ಸೇರಿದಂತೆ ರಾಜ್ಯದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕಾಮಗಾರಿಗಳ ಟೆಂಡರ್‌ನಲ್ಲಿ ಹೊಸದಾಗಿ ಲೈಸೆನ್ಸ್ ಪಡೆದಿರುವ ಯುವ ಗುತ್ತಿಗೆದಾರರಿಗೂ ಅವಕಾಶ ಕಲ್ಪಿಸುವಂತೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.



ಸಂದೇಶ್ ಸ್ವಾಮಿ

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಪತ್ರ ಬರೆದಿರುವ ಅವರು, ಸ್ಥಳೀಯ ಸಂಸ್ಥೆಗಳಲ್ಲಿ ಟೆಂಡರ್ ಪಡೆಯಲು ಯುವ ಗುತ್ತಿಗೆದಾರರು ಕಾಯುತ್ತಿದ್ದಾರೆ. ಆದರೆ ಕೆಲವು ಗುತ್ತಿಗೆದಾರರ ಚಿತಾವಣೆಯಿಂದ ಹೊಸಬರು ಅವಕಾಶ ವಂಚಿತರಾಗಿದ್ದಾರೆ ಎಂದು ಆರೋಪಿಸಿದ್ದಾರೆ.

ಇಂಜಿನಿಯರಿಂಗ್, ಡಿಪ್ಲೊಮಾ ಸೇರಿದಂತೆ ಇತರೆ ಪದವಿ ಪಡೆದವರಿಗೆ ಸರ್ಕಾರಿ ಉದ್ಯೋಗ ಸಿಗುತ್ತಿಲ್ಲ. ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಶೋಷಣೆ ಅನುಭವಿಸುವ ಬದಲು ಸ್ವತಂತ್ರ ಉದ್ಯೋಗ ಮಾಡಲು ಮುಂದಾಗಿದ್ದರೂ ಅದಕ್ಕೂ ಅವಕಾಶ ಸಿಗುತ್ತಿಲ್ಲ ಎಂದು ವಿಷಾದಿಸಿದ್ದಾರೆ.

ಲೋಕೋಪಯೋಗಿ, ನೀರಾವರಿ, ಕಾರ್ಮಿಕ ಇಲಾಖೆಗಳಲ್ಲಿ ಲೈಸೆನ್ಸ್ ಪಡೆದು ಟೆಂಡರ್ ಪಡೆಯಲು ಯುವ ಗುತ್ತಿಗೆದಾರರು ಕಾಯುತ್ತಿದ್ದಾರೆ. ಆದರೆ ಹತ್ತಾರು ವರ್ಷಗಳಿಂದ ಗುತ್ತಿಗೆ ಪಡೆಯುತ್ತಿರುವವರಿಗೆ ಮತ್ತೆ ಅವಕಾಶ ನೀಡಲಾಗುತ್ತಿದ್ದು, ಹೊಸಬರನ್ನು ಕಡೆಗಣಿಸಲಾಗುತ್ತಿದೆ ಎಂದು ಸಂದೇಶ್ ಸ್ವಾಮಿ ಆಪಾದಿಸಿದ್ದಾರೆ.

ಮೈಸೂರು ನಗರಪಾಲಿಕೆಯಲ್ಲೂ ಹತ್ತಾರು ವರ್ಷಗಳಿಂದ ಟೆಂಡರ್ ಪಡೆದವರಿಗೆ ಮತ್ತೆ ಅವಕಾಶ ನೀಡಲಾಗುತ್ತಿದೆ. ಸರ್ಕಾರದ ಅಧಿಕೃತ ನಿಯಮಾವಳಿ, ಸೂಚನೆ ಮತ್ತು ಆದೇಶ ಇಲ್ಲದಿದ್ದರೂ ಅನಧಿಕೃತ ಸುತ್ತೋಲೆ ಹೆಸರಿನಲ್ಲಿ ತಮಗೆ ಅನುಕೂಲವಾಗುವ ಆದೇಶ ಪಡೆದು ಹೊಸಬರಿಗೆ ಟೆಂಡರ್‌ನಲ್ಲಿ ಅವಕಾಶ ತಪ್ಪಿಸುತ್ತಿದ್ದಾರೆ. ಈ ಮೂಲಕ ಹಳೆಯ ಗುತ್ತಿಗೆದಾರರಿಗೆ ಮತ್ತೆ ಮತ್ತೆ ಅವಕಾಶ ನೀಡುತ್ತಿದ್ದಾರೆ ಎಂದು ದೂರಿದ್ದಾರೆ.

ಗುತ್ತಿಗೆ ಪಡೆಯಲು ಅನುಭವದ ಮಾನದಂಡ ಉಲ್ಲೇಖಿಸುತ್ತಾರೆ. ಕೆಲಸ ಕೊಟ್ಟರೆ ತಾನೆ ಅನುಭವ ಆಗುವುದು ಎಂದು ಅಭಿಪ್ರಾಯಪಟ್ಟಿರುವ ಸಂದೇಶ್ ಸ್ವಾಮಿ, ಹಿರಿಯ ಗುತ್ತಿಗೆದಾರರ ಆಮಿಷಗಳಿಗೆ ಒಳಗಾಗುತ್ತಿರುವ ಅಧಿಕಾರಿಗಳು ಅಕ್ರಮದಲ್ಲಿ ಭಾಗಿಯಾಗುತ್ತಿದ್ದಾರೆ ಎಂಬ ದೂರುಗಳಿವೆ ಎಂದು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಯುವ ಗುತ್ತಿಗೆದಾರರಿಗೆ ಯಾವುದೇ ಸೇವಾವಧಿ ಮತ್ತು ಅನುಭವದ ನಿಯಮ ಅನ್ವಯಿಸದೆ ಟೆಂಡರ್‌ನಲ್ಲಿ ಮುಕ್ತವಾಗಿ ಭಾಗವಹಿಸಲು ಅವಕಾಶ ಕಲ್ಪಿಸಬೇಕು. ಒಂದು ವೇಳೆ ಈ ಆಗ್ರಹವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಯುವ ಗುತ್ತಿಗೆದಾರರೆಲ್ಲಾ ಸಂಘಟಿತರಾಗಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಇದಕ್ಕೆ ಆಸ್ಪದ ನೀಡದೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯ ಮಾಡಿರುವ ಸಂದೇಶ್ ಸ್ವಾಮಿ, ಈ ಪತ್ರವನ್ನು ನಗರಾಭಿವೃದ್ಧಿ ಸಚಿವರು, ಕಾರ್ಮಿಕ ಸಚಿವರು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೂ ಬರೆದಿದ್ದಾರೆ.

ಆನೆ ಸೆರೆಗೆ ಬಳಸುವ ಸೆಣಬಿನ ಹಗ್ಗ ತಯಾರಿಕೆಯಲ್ಲಿ ತೊಡಗಿರುವ ಗಜಪಡೆ ಮಾವುತರು, ಕಾವಾಡಿಗಳು



ಅರಮನೆಯ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ದಸರಾ ಗಜಪಡೆಯ ಮಾವುತ, ಕಾವಾಡಿಗಳು ಕಾಡಾನೆ ಸೆರೆ ಕಾರ್ಯಾಚರಣೆಗಾಗಿ ಸೆಣಬಿನ ಹಗ್ಗ ಹೊಸೆಯುತ್ತಿರುವುದು.

ಮೈಸೂರು, ಸೆ.12(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಗಜಪಡೆಯೊಂದಿಗೆ ಆಗಮಿಸಿರುವ ಮಾವುತರು, ಕಾವಾಡಿಗಳು ಕಾಡಾನೆ ಸೆರೆ ಕಾರ್ಯಾಚರಣೆಗೆ ಬೇಕಾದ ಸೆಣಬಿನ ಹಗ್ಗವನ್ನು ಹೊಸೆಯುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.

ಬನ್ನೇರುಘಟ್ಟ, ಹಾಸನ ಹಾಗೂ ಚಿಕ್ಕಮಗಳೂರು ಸೇರಿದಂತೆ ವಿವಿಧೆಡೆ ಉಪಟಳ ನೀಡುವ ಕೆಲ ಗುರುತಿಸಲ್ಪಟ್ಟ ಕಾಡಾನೆ ಸೆರೆಗೆ ಕಾರ್ಯಾಚರಣೆ ನಡೆಸಲು ಉದ್ದೇಶಿಸಲಾಗಿದ್ದು, ಅದಕ್ಕಾಗಿ ಸದ್ದಿಲ್ಲದೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವ ಪ್ರಮುಖ ಆನೆಗಳು ಹಾಗೂ ಸಿಬ್ಬಂದಿ ದಸರಾ ಗಜಪಡೆಯೊಂದಿಗೆ ಆಗಮಿಸಿ ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದು, ಇದೀಗ ಕಾಡಾನೆ ಸೆರೆ ಕಾರ್ಯಾಚರಣೆಗೆ ಬೇಕಾದ ಸೆಣಬಿನ ಹಗ್ಗ ಹೊಸೆಯುವ ಕಾರ್ಯ ನಡೆಸಲಾಗುತ್ತಿದೆ. ಗಟ್ಟಿಮುಟ್ಟಾಗಿರುವ ಸೆಣಬಿನ ಹಗ್ಗದಿಂದ ಸೆರೆ ಹಿಡಿದ ಕಾಡಾನೆಯನ್ನು ಕಟ್ಟುವುದರಿಂದ ಆನೆ ಕಾಲಿಗೆ ಗಾಯವಾಗುವುದನ್ನು ತಡೆಗಟ್ಟಿದಂತಾಗುತ್ತದೆ.

ಅಲ್ಲದೆ, ಸೆರೆ ಹಿಡಿದ ನಂತರ ಕ್ರಾಲ್‌ನಲ್ಲಿಟ್ಟು ಆನೆ ಪಳಗಿಸುವುದಕ್ಕೆ ಒಂದು ವರ್ಷವಾದರೂ ಬೇಕಾಗುತ್ತದೆ. ಅಲ್ಲಿಯವರೆಗೂ ದೀರ್ಘಕಾಲ ಬಾಳಿಕೆ ಬರುವ ಹಗ್ಗವನ್ನೇ ಬಳಸುವ ಅಗತ್ಯವಿದ್ದು, ವಿವಿಧೆಡೆ ಬೆಳೆದಿರುವ ಸೆಣಬನ್ನು ಕಿತ್ತುತಂದು ನಾರಿಗೆ ಪರಿವರ್ತಿಸಲಾಗಿದ್ದು, ಇದೀಗ ಅರಮನೆ ಆವರಣದಲ್ಲಿ ಭಾರಿ ಗಾತ್ರದ ಸೆಣಬಿನ ಹಗ್ಗ ತಯಾರಿಕೆಯಲ್ಲಿ ಮಾವುತರು, ಕಾವಾಡಿಗಳು ತೊಡಗಿದ್ದಾರೆ.

ಕಳೆದ ಎರಡು ದಿನಗಳಿಂದ ಆನೆ ತಾಲೀಮಿನ ಬಳಿಕ ಬಿಡುವಿನ ವೇಳೆ ಮಾವುತರು, ಕಾವಾಡಿಗಳು ಹಗ್ಗ ತಯಾರಿಸುವ ಕೆಲಸ ಮಾಡುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ದಸರಾ



ವಿಶೇಷ 2024



ಮೈಸೂರು ಅರಮನೆ ಆವರಣದಲ್ಲಿ ಸಾಂಪ್ರದಾಯಿಕ ಫಿರಂಗಿ ಪೂಜೆ

● 7 ಫಿರಂಗಿಗಳಿಗೆ ಪೊಲೀಸ್ ಇಲಾಖೆ ವತಿಯಿಂದ ಧಾರ್ಮಿಕ ಕಾರ್ಯ ● ಜಂಬೂಸವಾರಿ, ಪಂಜಿನ ಕವಾಯತು ವೇಳೆ ಕುಶಾಲ ತೋಪು ಸಿಡಿಸಲು ಸಿದ್ಧತೆ ● ಸಿಎಆರ್‌ನಿಂದ ತೀಕ್ಷ್ಣಮತಿಯುಳ್ಳ 30 ಮಂದಿಯ ಫಿರಂಗಿ ದಳ ರಚನೆ





ಮೈಸೂರು ಅರಮನೆ ಆವರಣದಲ್ಲಿ ಫಿರಂಗಿಗಳಿಗೆ ಪೊಲೀಸ್ ಇಲಾಖೆ ವತಿಯಿಂದ ಗುರುವಾರ ಪೂಜೆ ಸಲ್ಲಿಸಲಾಯಿತು. ಕುಶಾಲ ತೋಪು ಸಿಡಿಸಲು ಆಯ್ಕೆಯಾಗಿರುವ ಫಿರಂಗಿ ದಳದ ಸಿಬ್ಬಂದಿಯನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಸೆ.12(ಎಂಟಿವೈ)- ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಂಬೂಸವಾರಿ ಹಾಗೂ ಪಂಜಿನ ಕವಾಯತು ಸಂದರ್ಭದಲ್ಲಿ ಕುಶಾಲ ತೋಪು ಸಿಡಿಸಲು ಪೊಲೀಸ್ ಇಲಾಖೆ ತೀಕ್ಷ್ಣಮತಿಯುಳ್ಳ 30 ಸಿಬ್ಬಂದಿಯ ಫಿರಂಗಿ ದಳ ರಚಿಸಿದ್ದು, ಗುರುವಾರ ಸಂಪ್ರದಾಯದಂತೆ 7 ಫಿರಂಗಿಗಳಿಗೆ ಪೂಜೆ ಸಲ್ಲಿಸಲಾಯಿತು.

ಮೈಸೂರು ಅರಮನೆಯ ಆನೆ ಬಾಗಿಲು ಬಳಿ 7 ಫಿರಂಗಿಗಳಿಗೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇಲಾಖೆ ವತಿಯಿಂದ ಪೂಜೆ ಸಲ್ಲಿಸಿ, ಫಿರಂಗಿಯನ್ನು ನಿಂಬೆಹಣ್ಣಿನ ಮೇಲೆ ಚಲಿಸುವ ಮೂಲಕ ಕುಶಾಲ ತೋಪು ಸಿಡಿತದ ತಾಲೀಮಿಗೆ ಸಿದ್ಧತೆ ಆರಂಭಿಸಿದರು.

ಜಂಬೂಸವಾರಿ ದಿನ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ವೇಳೆ ಹಾಗೂ ಬನ್ನಿಮಂಟಪದಲ್ಲಿ ನಡೆಯುವ ಪಂಜಿನ ಕವಾಯತು ಸಂದರ್ಭದಲ್ಲಿ ರಾಷ್ಟ್ರಗೀತೆ ನುಡಿಸುವಾಗ ಒಂದು ನಿಮಿಷದಲ್ಲಿ 21 ಬಾರಿ ಕುಶಾಲ ತೋಪು ಸಿಡಿಸುವ ಸಂಪ್ರದಾಯವಿದ್ದು, ಅದಕ್ಕಾಗಿ ನಗರ ಸಶಸ್ತ್ರ ಮೀಸಲು ಪಡೆಯ ನುರಿತ ಹಾಗೂ ಅನುಭವವುಳ್ಳ 30 ಸಿಬ್ಬಂದಿಯ ಕುಶಾಲ ತೋಪು ಸಿಡಿಸುವ ತಂಡವನ್ನು ರಚಿಸಲಾಗಿದೆ. ಸಿಎಆರ್ ಎಸಿಪಿ ಸತೀಶ್, ಇನ್ಸ್‌ಪೆಕ್ಟರ್ ಶಿವಾನಂದ ಪಾಟೀಲ್ ಮಾರ್ಗದರ್ಶನ ಎಎಸ್‌ಐ ಎಸ್.ಸಿದ್ದರಾಜು ನೇತೃತ್ವದಲ್ಲಿ ಕುಶಾಲ ತೋಪು ಸಿಡಿಸುವ ತಂಡದಲ್ಲಿದ್ದು, ತಾಲೀಮಿಗೆ ಗ್ರೀನ್ ಸಿಗ್ನಲ್ ನೀಡಲಾಗಿದೆ.

ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗಿದೆ

"ಕುಶಾಲ ತೋಪು ಸಿಡಿಸಲು ಬಳಸುವ 7 ಫಿರಂಗಿಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗಿದೆ. ಜಂಬೂಸವಾರಿಗೂ ಮುನ್ನ ಮೂರು ಬಾರಿ ಸಿಡಿಮದ್ದು ತಾಲೀಮು ನಡೆಸಲಾಗುತ್ತದೆ. ಅಲ್ಲಿಯವರೆಗೂ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. **ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತರು**

ಮೃತ್ಯುಂಜಯ ಪೂಜೆ ಮಾಡಲಾಗಿದೆ

"ಫಿರಂಗಿಗಳಿಗೆ ಗಣಪತಿ ಪೂಜೆ, ಮೃತ್ಯುಂಜಯ ಪೂಜೆ ಸಲ್ಲಿಸಲಾಗಿದೆ. ಫಿರಂಗಿ ದಳದ ಸಿಬ್ಬಂದಿಗೆ ಒಳಿತಾಗಲಿ. ಸಿಡಿಮದ್ದು ಸಿಡಿಸುವ ಪ್ರಕ್ರಿಯೆ ನಿರ್ವಿಘ್ನವಾಗಿ ನೆರವೇರಲೆಂದು ವಿಶೇಷ ಪೂಜೆ ಸಲ್ಲಿಸಲಾಗಿದೆ.

- ಎಸ್.ವಿ.ಪ್ರಹ್ಲಾದರಾವ್, ಅರ್ಚಕ

ಫಿರಂಗಿ ಪೂಜೆ: ಪ್ರತಿ ವರ್ಷ ಜಂಬೂಸವಾರಿ ಹಾಗೂ ಪಂಜಿನ ಕವಾಯತು ವೇಳೆ ಕುಶಾಲತೋಪು ಸಿಡಿಸಲು ಅರಮನೆಯಲ್ಲಿರುವ 7 ಫಿರಂಗಿಗಳನ್ನು ಬಳಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಅರಮನೆ ಆನೆ ಬಾಗಿಲ ಬಳಿ ಎಲ್ಲಾ ಫಿರಂಗಿಗಳಿಗೂ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು. ಅರ್ಚಕ ಎಸ್.ವಿ. ಪ್ರಹ್ಲಾದ್‌ರಾವ್ ಎಲ್ಲಾ ಫಿರಂಗಿಗಳಿಗೂ ಪೂಜೆಗೆ ಅಣಿ ಮಾಡಿದ್ದರು. ಬಳಿಕ ಸೀಮಾ ಲಾಟ್ಕರ್ ಫಿರಂಗಿಗಳ ಎಳೆದು ನಿಂಬೆಹಣ್ಣಿನ ಮೇಲೆ ಹರಿಸಿದರು.

ವಿಮೆ ಮಾಡಿಸಲಾಗುತ್ತದೆ: ಪ್ರತಿ ವರ್ಷದಂತೆ ಈ ಬಾರಿಯೂ ಫಿರಂಗಿ ದಳದ ಸಿಬ್ಬಂದಿಗೆ ವಿಮೆ ಮಾಡಿಸಲಾಗುತ್ತದೆ. ಸಿಡಿಮದ್ದು ತಾಲೀಮು ಆರಂಭಕ್ಕೂ ಮುನ್ನವೇ ಎಲ್ಲಾ ಸಿಬ್ಬಂದಿಗೂ ವಿಮೆ ಚಾಲ್ತಿಯಲ್ಲಿರುತ್ತದೆ. ಜಂಬೂಸವಾರಿ ಮುಗಿದು, ಚಾಮುಂಡಿಬೆಟ್ಟದಲ್ಲಿ ನಡೆಯುವ ರಥೋತ್ಸವದ ದಿನದವರೆಗೂ ವಿಮಾ ಅವಧಿ ಚಾಲ್ತಿಯಲ್ಲಿರುತ್ತದೆ.

ನಾಳೆಯಿಂದ ಒಣ ತಾಲೀಮು: ಜಂಬೂಸವಾರಿಗೆ ಗಣ್ಯರು ಪುಷ್ಪಾರ್ಚನೆ ಮಾಡುವ ವೇಳೆ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರಗೀತೆ ನುಡಿಸುವ ವೇಳೆ 21 ಬಾರಿ ಕುಶಾಲ ತೋಪು ಸಿಡಿಸಬೇಕಾಗಿದೆ. 7 ಫಿರಂಗಿಗಳಲ್ಲಿ ತಲಾ ಮೂರು ಸುತ್ತಿನಂತೆ ಸಿಡಿಮದ್ದನ್ನು ಒಂದು ನಿಮಿಷದೊಳಗೆ ಸಿಡಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಶುಕ್ರವಾರದಿಂದ (ಸೆ.13) ಒಣ ತಾಲೀಮು ಆರಂಭಿಸಲಾಗುತ್ತದೆ. ಮಾಸಾಂತ್ಯದಿಂದ ಅ.8 ರೊಳಗೆ ಮೂರು ಬಾರಿ ಗಜಪಡೆ ಹಾಗೂ ಅಶ್ವಪಡೆ ಮುಂದೆ ಸಿಡಿಮದ್ದು ಸಿಡಿಸಿ ತಾಲೀಮು ನಡೆಸಲಾಗುತ್ತದೆ. ಅಲ್ಲಿಯವರೆಗೂ ಯಾವುದೇ ಸಿಡಿಮದ್ದು ಬಳಸದೇ ಸಿಡಿಮದ್ದು ಸಿಡಿಸುವ ಸಮಯಕ್ಕೆ ಅನುಗುಣವಾಗಿ ತಾಲೀಮು ನಡೆಸಲಾಗುತ್ತದೆ. ಒಂದು ಫಿರಂಗಿಗೆ ಐವರು ಸಿಬ್ಬಂದಿಗಳನ್ನು ವಿಂಗಡಣೆ ಮಾಡಿ, ಫಿರಂಗಿ ಸ್ವಚ್ಛಗೊಳಿಸುವ, ಸಿಡಿಮದ್ದು ತುಂಬುವ, ಬೆಂಕಿ ಕಿಡಿ ಹಚ್ಚುವುದು ಸೇರಿದಂತೆ ವಿವಿಧ ಪ್ರಕ್ರಿಯೆಗಳ ಒಣ ತಾಲೀಮು ನಡೆಸಲಾಗುತ್ತದೆ.

ಸಾಂಪ್ರದಾಯಿಕ ಫಿರಂಗಿ ಪೂಜೆ ಸಲ್ಲಿಸುವ ವೇಳೆ ಉಪಪೊಲೀಸ್ ಆಯುಕ್ತರಾದ ಎಂ.ಮುತ್ತುರಾಜ್, ಜಾಹ್ನವಿ, ಸಿಎಆರ್‌ಡಿಸಿಪಿ ಮಾರುತಿ, ಪಮೌಂಟೆಡ್ ಕಮಾಂಡೆಂಟ್ ವಿ.ಶೈಲೇಂದ್ರ, ದೇವರಾಜ ಎಸಿಪಿ ಶಾಂತಮಲ್ಲಪ್ಪ, ಸಿಎಆರ್ ಎಸಿಪಿ ಸತೀಶ್, ಅರಮನೆ ಭದ್ರತಾ ಪಡೆಯ ಎಸಿಪಿ ಹೆಚ್. ಚಂದ್ರಶೇಖರ್, ದಸರಾ ಗಜಪಡೆಯ ಪಶುವೈದ್ಯ ಡಾ.ಮುಜೀಬ್ ರೆಹಮಾನ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಅರಮನೆ ಒಳಾಂಗಣದಲ್ಲಿ ದಸರಾ ತಯಾರಿ

ಬಣ್ಣ ಬಳಿಯುವ, ಉದ್ಯಾನವನ ಸ್ವಚ್ಛತೆ, ಅಂದಗೊಳಿಸುವ ಕಾರ್ಯ ತ್ವರಿತ



ಮೈಸೂರು ಅರಮನೆಯ ಆನೆ ಬಾಗಿಲ ಮೇಲಿನ ಗ್ಯಾಲರಿಯಲ್ಲಿ ವಿದ್ಯುತ್ ದೀಪಗಳ ದುರಸ್ತಿಗೆ ಕಾಲಾವದಿ ಹಾಕುತ್ತಿರುವುದು.

ಮೈಸೂರು, ಸೆ.12(ಎಂಟಿವೈ)-ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ನವರಾತ್ರಿ ವೇಳೆ ನಡೆಯುವ ಧಾರ್ಮಿಕ ವಿಧಿ-ವಿಧಾನಕ್ಕೆ ಮೈಸೂರು ಅರಮನೆ ಸಜ್ಜಾಗುತ್ತಿದೆ. ನವರಾತ್ರಿ ಸಂದರ್ಭದಲ್ಲಿ ಅರಮನೆಯಲ್ಲಿ ರಾಜಮನೆತನದ ವತಿಯಿಂದ ವಿವಿಧ ಸಾಂಪ್ರದಾಯಿಕ ಪೂಜಾ ಮಹೋತ್ಸವ ಜರುಗಲಿದ್ದು, ರಾಜವಂಶಸ್ಥರೂ ಆದ ಸಂಸದ ಯದುವೀರ ಒಡೆಯರ್ ಅವರು ಚಿನ್ನದ ಸಿಂಹಾಸನ ಏರಿ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಅರಮನೆಯಲ್ಲಿ ಹಬ್ಬದ ಸಂಭ್ರಮ ಮನೆ ಮಾಡಲಿದ್ದು, ಅದಕ್ಕಾಗಿ ಸಿದ್ಧತಾ ಕಾರ್ಯ ಆರಂಭಿಸಲಾಗಿದೆ.

ಪ್ರಮುಖವಾಗಿ ಅರಮನೆಯ ದರ್ಬಾರ್ ಹಾಲ್, ಗ್ಯಾಲರಿ, ಆನೆ ಬಾಗಿಲಿನ ಬಳಿಯ ಮೇಲ್ಛಾವಣಿ ಸೇರಿದಂತೆ ಒಳಾವರಣದಲ್ಲಿ ಅಗತ್ಯವಿದ್ದೆಡೆ ಬಣ್ಣ ಬಳಿಯುವ, ವಿದ್ಯುತ್ ದೀಪಗಳ ದುರಸ್ತಿ ಕಾರ್ಯ ಆರಂಭವಾಗಿದೆ. ವಿದ್ಯುತ್ ದೀಪ ಬದಲಿಸುವುದಕ್ಕಾಗಿ ಇಂದಿನಿಂದ ಕಾಲಾವದಿ ಕಟ್ಟುವ ಕಾರ್ಯ ಆರಂಭಿಸಲಾಗಿದ್ದು, 15 ದಿನದೊಳಗೆ ಅರಮನೆ ಒಳಾವರಣದಲ್ಲಿ ದಸರಾ ಸಿದ್ಧತಾ ಕಾರ್ಯ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.

ಉದ್ಯಾನವನದಲ್ಲಿ ಕಳೆ ಗಿಡ ತೆರವು: ಅರಮನೆ ಆವರಣದಲ್ಲಿರುವ ವಿವಿಧ ಉದ್ಯಾನವನಲ್ಲಿ ಕಳೆ ಗಿಡ ತೆರವು ಕಾರ್ಯ ಆರಂಭಿಸಲಾಗಿದೆ. ಈಗಾಗಲೇ ಅರಮನೆ ಮುಂಭಾಗದ ಪಾರ್ಕ್‌ನಲ್ಲಿ ಹೂವಿನ ಕುಂಡಗಳನ್ನು ಜೋಡಣೆ ಮಾಡಲು ನೆಲ ಅಗೆದು ಹದ ಮಾಡಲಾಗುತ್ತಿದೆ. ಅಲ್ಲದೆ, ಪಾರ್ಕ್‌ನಲ್ಲಿರುವ ವಿದ್ಯುತ್ ದೀಪಗಳ ಕಂಬಗಳಿಗೆ ಬಣ್ಣ ಬಳಿಯುವ ಕಾರ್ಯವು ತ್ವರಿತವಾಗಿ ಸಾಗಿದೆ.

ದಸರಾ ಗಜಪಡೆ ಪರಿವಾರದ ಮಕ್ಕಳಿಗೆ ವ್ಯವಸ್ಥಿತ ತಾತ್ಕಾಲಿಕ ಶಾಲೆ ಕಾರ್ಯಾಚರಣೆ



ಮೈಸೂರು ಅರಮನೆ ಆವರಣದಲ್ಲಿ ತೆರೆದಿರುವ ತಾತ್ಕಾಲಿಕ ಶಾಲೆಯಲ್ಲಿ ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳು ಕಲಿಕೆಯಲ್ಲಿ ನಿರತವಾಗಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಸೆ.12(ಎಂಟಿವೈ)- ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ಅರಮನೆ ಆವರಣದ ಆನೆ ಬಿಡಾರದ ಬಳಿ ತೆರೆದಿರುವ ತಾತ್ಕಾಲಿಕ ಶಾಲೆ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿದ್ದು, 25ಕ್ಕೂ ಹೆಚ್ಚು ಮಕ್ಕಳು ಪಾಠ ಕಲಿಯುತ್ತಿದ್ದಾರೆ.

ಈ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಉದ್ದೇಶದಿಂದ ಸಾರ್ವಜನಿಕ ಶಿಕ್ಷಣ ಇಲಾಖೆ ತೆರೆದಿರುವ ತಾತ್ಕಾಲಿಕ ಶಾಲೆಯಲ್ಲಿ ಈಗಾಗಲೇ 25 ಮಕ್ಕಳು ಪಾಠ ಕಲಿಯುತ್ತಿದ್ದಾರೆ. ಗಜಪಡೆಯ ಎರಡೂ ತಂಡಗಳ ಮಾವುತರು, ಕಾವಾಡಿಗಳ ಮತ್ತಷ್ಟು ಮಕ್ಕಳು ದಾಖಲಾಗುವ ನಿರೀಕ್ಷೆ ಇದೆ. ಈ ಹಿನ್ನೆಲೆಯಲ್ಲಿ ತಾತ್ಕಾಲಿಕ ಶಾಲೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಿದೆ.

ಡಿಡಿಪಿಐ ಜವರೇಗೌಡ, ದಕ್ಷಿಣ ವಲಯದ ಬಿಇಓ ಸಿ.ಎನ್.ರಾಜು ಮಾರ್ಗದರ್ಶನದಲ್ಲಿ ಕಾರ್ಯಾಚರಿಸುತ್ತಿರುವ ಈ ತಾತ್ಕಾಲಿಕ ಶಾಲೆಗೆ ಬಿಆರ್‌ಸಿ ಎಂ.ಡಿ. ಶ್ರೀಕಂಠಸ್ವಾಮಿ, ನೋಡಲ್ ಅಧಿಕಾರಿಯಾಗಿ ಎಸ್.ಕೆ.ಮಂಜುಳಾ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯ ಮಕ್ಕಳಿಗೆ ಪಾಠ ಮಾಡಲು ಮುಖ್ಯ ಶಿಕ್ಷಕರಾದ ನೂರ್‌ಫಾತಿಮಾ, ಮೌಸೀನ್ ತಾಜ್ ಹಾಗೂ ದಿವ್ಯಾ ಪ್ರಿಯದರ್ಶಿನಿ ಕಾರ್ಯ ನಿರ್ವಹಿಸುತ್ತಿದ್ದು, ಮಕ್ಕಳ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ನಲಿ-ಕಲಿ ವಿಧಾನ, ಮಾಡೆಲ್ ಪ್ರದರ್ಶನದ ಮೂಲಕ ಪಾಠ ಕಲಿಸುತ್ತಿದ್ದಾರೆ. ಮಕ್ಕಳಿಗೆ ಪ್ರತಿದಿನ ಮಧ್ಯಾಹ್ನ ಇಸ್ಕಾನ್ ಸಂಸ್ಥೆಯಿಂದ ಬಿಸಿಯೂಟ ಪೂರೈಕೆಯಾಗಲಿದೆ. ಟೆಂಟ್ ಶಾಲೆಯಲ್ಲಿ ವಿವಿಧ ಮಾಹಿತಿ ನೀಡುವ ಚಾಟ್‌ಗಳು, ಚಿತ್ರಾ, ಭೂಪಟಗಳು ಹಾಗೂ ಇನ್ನಿತರ ಭಿತ್ತಿಪತ್ರಗಳನ್ನು ಅಳವಡಿಸಲಾಗಿದೆ. ಪ್ರತಿದಿನ ಬೆಳಗ್ಗೆ 9.45ರಿಂದ ಮಧ್ಯಾಹ್ನ 3.30ರವರೆಗೆ ತರಗತಿ ನಡೆಸಲಾಗುತ್ತಿದೆ.

ಅಂಬಾರಿ ಆನೆಗೆ ಪೂಜೆ ಸಲ್ಲಿಸುವ ಪ್ರಹ್ಲಾದ್ ರಾವ್‌ಗೆ ಸನ್ಮಾನ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ಮೈಸೂರು ದಸರಾ ಅಂಬಾರಿ ಆನೆಗೆ ಪೂಜೆ ಸಲ್ಲಿಸುವ ಪ್ರಹ್ಲಾದ್ ರಾವ್ ಅವರನ್ನು ಮೈಸೂರು ಜಿಲ್ಲಾ ಮಡಿವಾಳರ ಸಂಘದವರು ಸನ್ಮಾನಿಸಿದರು.

ಮೈಸೂರು, ಸೆ.12(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಕಳೆದ 27 ವರ್ಷಗಳಿಂದ ಅಂಬಾರಿ ಆನೆಗೆ ಪೂಜೆ ಸಲ್ಲಿಸುತ್ತಾ ಬಂದಿರುವ ಪ್ರಹ್ಲಾದ್ ರಾವ್ ಅವರನ್ನು ಮೈಸೂರು ಜಿಲ್ಲಾ ಮಡಿವಾಳರ ಸಂಘದವರು ಇಂದು ಸನ್ಮಾನಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದ ಸಭಾಂಗಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಪ್ರಹ್ಲಾದ್ ರಾವ್ ಅವರನ್ನು ಸನ್ಮಾನಿಸಿ, ಅವರ ಕಾರ್ಯವನ್ನು ಪ್ರಶಂಸಿಸಲಾಯಿತು. ಈ ವೇಳೆ ಮಾತನಾಡಿದ ಪ್ರಹ್ಲಾದ್‌ರಾವ್, ಹಲವು ವರ್ಷಗಳ ಕಾಲ ಚಿನ್ನದ ಅಂಬಾರಿ ಹೊತ್ತ ಅರ್ಜುನನ ಸ್ಮಾರಕ ನಿರ್ಮಾಣ ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು. ನಾಡದೇವತೆ ತಾಯಿ ಚಾಮುಂಡೇಶ್ವರಿ ಆಶೀರ್ವಾದದಿಂದ ಅಂಬಾರಿ ಹೊರುವ ಆನೆಗೆ ಗಜಾನನ ಪೂಜೆ ಮಾಡಿಕೊಂಡು ಬಂದಿದ್ದು, ಈ ತನಕ ಎಲ್ಲಾ ಕಾರ್ಯಗಳು ನಿರ್ವಿಘ್ನವಾಗಿ ನೆರವೇರಿದೆ ಎಂದು ತಿಳಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮಾಜಿ ಮೇಯರ್‌ಗಳಾದ ಪುರುಷೋತ್ತಮ್, ಅನಂತ, ಮಡಿವಾಳ ಜಿಲ್ಲಾ ಸಂಘದ ಅಧ್ಯಕ್ಷ ಸಿಂಗ್ರಿ ಶೆಟ್ಟರು, ಪ್ರಧಾನ ಕಾರ್ಯದರ್ಶಿ ಹನೂರು ನಾಗರಾಜ್, ಉಪಾಧ್ಯಕ್ಷರಾದ ಬಿ.ಜಿ.ಕೇಶವ್, ಪದಾಧಿಕಾರಿಗಳಾದ ಕಿರಣ್, ಮಂಜುಶೆಟ್ಟಿ, ಮಹೇಶ್, ಶ್ರೀರಾಮ್, ವೆಂಕಟೇಶ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಸೋಮನಾಥಪುರದಲ್ಲಿ ಬ್ಲಾಗರ್‌ಗಳ ಪ್ರಚಾರ ಅಭಿಯಾನ

ಮೈಸೂರು, ಸೆ.12(ಆರ್‌ಕೆ)- ಅಕ್ಟೋಬರ್ 3ರಿಂದ 12ರವರೆಗೆ ನಡೆಯಲಿರುವ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಸಾಮಾಜಿಕ ಜಾಲತಾಣದ ಮೂಲಕ ಪ್ರವಾಸಿ ತಾಣಗಳ ಪ್ರಚಾರ ನಡೆಸುತ್ತಿರುವ ಬ್ಲಾಗರ್‌ಗಳ ತಂಡವು ಇಂದು ತಿ.ನರಸೀಪುರ ತಾಲೂಕು, ಸೋಮನಾಥಪುರಕ್ಕೆ ಭೇಟಿ ನೀಡಿತ್ತು.

ಸಾಮಾಜಿಕ ಜಾಲತಾಣಗಳನ್ನು ಕೇಂದ್ರೀಕರಿಸಿ, 'ಡಿಸ್ಕವರ್ ಮೈಸೂರು' ಉಪಕ್ರಮದ ಮೂಲಕ ನಡೆಯುತ್ತಿರುವ ಪ್ರಚಾರ ಅಭಿಯಾನದಲ್ಲಿ ಮೈಸೂರಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವುದು, ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಇಂದು ಬ್ಲಾಗರ್‌ಗಳ ತಂಡವು ಸೋಮನಾಥಪುರದ ಚೆನ್ನಕೇಶವ ದೇವಾಲಯಕ್ಕೆ ಭೇಟಿ ನೀಡಿ ಅದರ ಇತಿಹಾಸ, ವಾಸ್ತುಶಿಲ್ಪ ಕಲಾಕೃತಿಗಳ ಬಗ್ಗೆ ಪ್ರವಾಸಿ ಮಾರ್ಗದರ್ಶಿಗಳಿಂದ ಮಾಹಿತಿ ಸಂಗ್ರಹಿಸಿದರು.

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಬ್ಲಾಗರ್‌ಗಳನ್ನು ಸ್ವಾಗತಿಸಿದರು. ಕೇಂದ್ರ ಪ್ರವಾಸೋದ್ಯಮ, ಮಂತ್ರಾಲಯದ ಪ್ರಾದೇಶಿಕ ಆಯುಕ್ತ ಫಾರುಕ್ ಅಹಮದ್, ಸಹಾಯಕ ನಿರ್ದೇಶಕ ಕೇದಾರನಾಥ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಕಾರ್ಯನಿರ್ವಹಣಾಧಿಕಾರಿ ರುದ್ರೇಶ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಟ್ರಾವೆಲ್ ಏಜೆಂಟ್ಸ್ ಅಸೋಸಿಯೇಷನ್‌ನ ಪ್ರಶಾಂತ್, ಟೂರಿಸ್ಟ್ ಗೈಡ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಅಶೋಕ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರಲ್ಲಿ ಸಾಮಾಜಿಕ ಜಾಲತಾಣದ ಮೂಲಕ ಪ್ರವಾಸಿ ತಾಣಗಳ ಪ್ರಚಾರ ನಡೆಸುತ್ತಿರುವ ಬ್ಲಾಗರ್‌ಗಳ ತಂಡ ಗುರುವಾರ ತಿ.ನರಸೀಪುರ ತಾಲೂಕಿನ ಸೋಮನಾಥಪುರಕ್ಕೆ ಭೇಟಿ ನೀಡಿತ್ತು.

ನಾಗಮಂಗಲ ಗುಂಪು ಘರ್ಷಣೆ ಪ್ರಕರಣ

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ

ಘಟನಾ ಸ್ಥಳಕ್ಕೆ ಭೇಟಿ ನೀಡಿದ ಬಿಜೆಪಿ ನಿಯೋಗ, ಪರಿಶೀಲನೆ

ನಾಗಮಂಗಲ,ಸೆ.12(ಮೋಹನ್‌ರಾಜ್)– ನಾಗಮಂಗಲ ಪಟ್ಟಣದಲ್ಲಿ ನಡೆದಿರುವ ಘಟನೆ ನೋಡಿದರೆ ಭಯೋತ್ಪಾದನ ಕೃತ್ಯವೂ ಈ ರೀತಿ ನಡೆಯಲ್ಲ ಎನಿಸುತ್ತದೆ. ಕಿಡಿಗೇಡಿಗಳು ಕಾನೂನನ್ನು ಕೈಗೆತ್ತುಕೊಂಡಿದ್ದಾರೆ. ಕಳೆದ ಬಾರಿಯೂ ಗಣಪತಿ ವಿಚಾರಕ್ಕೆ ಗಲಾಟೆಯಾಗಿದೆ. ಆದರೆ ಅಧಿಕಾರಿಗಳು ಪರಿಜ್ಞಾನ ಇಲ್ಲದಂತೆ ಕಾರ್ಯನಿರ್ವಹಿಸಿದ್ದು, ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕಿಡಿಕಾರಿದರು.

ಗುರುವಾರ ಪಟ್ಟಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಾನೂನು ಹಾಗೂ ಸರ್ಕಾರ ನಮಗೆ ಏನೂ ಮಾಡಲ್ಲ ಎಂಬುದು ಕಿಡಿಗೇಡಿಗಳ ತಲೆಗೆ ಹತ್ತಿದೆ. ಮಚ್ಚು ಲಾಂಗ್ ತಕೊಂಡು ಶಿವಮೊಗ್ಗದಲ್ಲಿ ಓಡಾಡಿದ್ದರು. ಆದರೆ ಅವರಿಗೇನು ಮಾಡಲಿಲ್ಲ. ಇದೆಲ್ಲ ಕಾಂಗ್ರೆಸ್ಸಿನ ಪ್ರಚೋದನೆ ಇಲ್ಲದೆ ನಡೆಯಲು ಸಾಧ್ಯವಿಲ್ಲ ಎಂದು ದೂರಿದರು.

ಕೆರಗೋಡಿನಲ್ಲಿ ಏಕಾಏಕಿ ಹನುಮಧ್ವಜ ಇಳಿಸಿದರು. ಬಳಿಕ ರಾಜ್ಯ ಪೂರ್ತಿ ಹನುಮ ಧ್ವಜ ಇಳಿಸಿದರು. ಕಾಂಗ್ರೆಸ್ ಹನುಮನನ್ನ ವಿಲನ್ ಮಾಡಿ ಆಗಿದೆ. ಇದೀಗ ಗಣೇಶನನ್ನು ಕಂಡರು ಕಾಂಗ್ರೆಸ್‌ನವರಿಗೆ ಆಗಲ್ಲ. ಗಣೇಶನ ಮೇಲೆ ಕಾಂಗ್ರೆಸ್ ವಕ್ರದೃಷ್ಟಿ ಬೀರಿದ್ದು, ಕಾಂಗ್ರೆಸ್ ಸರ್ಕಾರ ಸರ್ವನಾಶವಾಗಲಿದೆ. ಗೃಹ ಸಚಿವರು ಇದನ್ನು ಸಣ್ಣ ಘಟನೆ ಎನ್ನುತ್ತಾರೆ. ಪೆಟ್ರೋಲ್ ಬಾಂಬ್ ಹಾಕಿರೋದು ಅವರಿಗೆ ಸಣ್ಣ ಘಟನೆಯಾಗಿದ್ದು, ಮಿಸೈಲ್, ರಾಕೆಟ್ ಹಾಕಿದರೆ ಅವರಿಗೆ ದೊಡ್ಡ ಘಟನೆಯಾಗಬಹುದೆಂದು ವ್ಯಂಗ್ಯವಾಡಿದರು. ಇದು ಪೂರ್ವ ನಿಯೋಜಿತ ಘಟನೆಯಾಗಿದ್ದು, ಮಸೀದಿಯಲ್ಲಿ ಪ್ಲಾನ್ ಮಾಡಿ ಗಲಭೆ ಎಳಿಸಿದ್ದಾರೆ. ಮಂಡ್ಯದಲ್ಲಿ ಗಣಪತಿ ಹಬ್ಬ ನಡೆಯಬಾರದೆಂಬುದು ಅವರ ಪ್ಲಾನ್ ಆಗಿದ್ದು, ಕುತಂತ್ರ ಮಾಡಿ ಈ ಕೃತ್ಯ ಮಾಡಿದ್ದಾರೆ. ಹಲ್ಲೆ ಮಾಡಿದ್ದು ಅನ್ಯಕೋಮಿನ ರೌಡಿಗಳಾಗಿದ್ದು, ಅವರ ವಿರುದ್ಧ ಕಾನೂನು ಕ್ರಮವಾಗಬೇಕು. ಈ ಕೃತ್ಯದಲ್ಲಿ ಅಂಗಡಿ–ಮುಂಗಟ್ಟು ಕಳೆದುಕೊಂಡವರಿಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ನಾಗಮಂಗಲದಲ್ಲಿ ಶಾಂತಿಯುತವಾಗಿ ಗಣಪತಿ ಮೆರವಣಿಗೆ ಮಾಡುತ್ತಿದ್ದರು. ಪೂರ್ವನಿಯೋಜಿತವಾಗಿ ಹಿಂದೂ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ್ದಾರೆ. ಅಂಗಡಿಗಳಿಗೆ ಬೆಂಕಿ ಹಾಕಿ ನಾಶ ಮಾಡಿದ್ದಾರೆ. ದೇಶದ್ರೋಹಿಗಳು ಅಶಾಂತಿ ವಾತಾವರಣ ನಿರ್ಮಾಣ ಮಾಡುತ್ತಿದ್ದು, ಇವರ ವಿರುದ್ಧ ಕಠಿಣ ಕಾನೂನು ಕ್ರಮವಾಗಬೇಕೆಂದು ಒತ್ತಾಯಿಸಿದರು.

ಕೆರಗೋಡಿನಲ್ಲೂ ಹನುಮಧ್ವಜ ಇಳಿಸಿದ್ದರು. ಮಂಡ್ಯ ಜಿಲ್ಲೆಯು ರೈತರ ಹೋರಾಟಕ್ಕೆ ಹೆಸರಾಗಿತ್ತು. ಇದೀಗ ಕೋಮುಗಲಭೆ ಮೂಲಕ ಹೆಸರುವಾಸಿಯಾಗುತ್ತಿದೆ. ಪೊಲೀಸರು ಇಷ್ಟೇ ಘಟನೆ ಆಗುತ್ತಿದ್ದರೂ ಮೌನವಾಗಿದ್ದಾರೆ. ಕಾಂಗ್ರೆಸ್ ಶಾಸಕರ ಮನೆಗಳಿಗೆ ಮುಂದಿನ ದಿನಗಳಲ್ಲಿ ಈ ದೇಶದ್ರೋಹಿಗಳು ನುಗ್ಗುತ್ತಾರೆ. ಈಗಲಾದರೂ ಎಚ್ಚರ ವಹಿಸಿ ಎಂದ ಅವರು, ಬಂಧಿತ ಹಿಂದೂಗಳನ್ನು ಬಿಡುಗಡೆ ಮಾಡಬೇಕು. ದೇಶದ್ರೋಹಿಗಳಿಗೆ ಶಿಕ್ಷೆ ನೀಡಬೇಕು. ಕಾಂಗ್ರೆಸ್ ಸರ್ಕಾರ ಗಲಭೆಕೋರರಿಗೆ ಸಪೋರ್ಟ್ ಮಾಡುತ್ತಿದ್ದು, ಅದೇ ಕಾರಣಕ್ಕೆ ರಾಜ್ಯದಲ್ಲಿ ಗಲಭೆಗಳು ಆಗುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ನಿಯೋಗವು ಬೆಂಕಿ ಕೆನ್ನಾಲೆಗೆ ಸುಟ್ಟು ಕರಕಲಾದ ಅಂಗಡಿಗಳ ವೀಕ್ಷಣೆ ನಡೆಸಿದರು. ದಾಂಧಲೆಗೆ ಒಳಗಾದ ಬಜಾಜ್ ಶೋರೂಂಗೆ ತೆರಳಿ ಮಾಲೀಕರಿಂದ ಮಾಹಿತಿ ಪಡೆದುಕೊಂಡರು. ಭಾರತ್ ಮಾತಾಕೀ ಜೈ, ಜೈ ಶ್ರೀರಾಮ್, ನಾವೆಲ್ಲಾ ಹಿಂದೂ ನಾವೆಲ್ಲಾ ಒಂದು, ಜೈ ಗಣೇಶ, ಜೈ ಜೈ ಗಣೇಶ, ಸನಾತನ ಹಿಂದೂ ಧರ್ಮಕ್ಕೆ ಜೈಕಾರ ಎಂದು ಘಟನಾ ಸ್ಥಳದ ಬಳಿ ನಿಂತು ಘೋಷಣೆ ಕೂಗಿದರು.

ಈ ಸಂದರ್ಭದಲ್ಲಿ ಶಾಸಕರಾದ ಸಿ.ಎನ್.ಅಶ್ವತ್ಥ್ ನಾರಾಯಣ, ಸುನೀಲ್‌ಕುಮಾರ್, ಸಿ.ಟಿ.ರವಿ, ಮಾಜಿ ಶಾಸಕರಾದ ಕೆ.ಸುರೇಶ್ ಗೌಡ, ಅಶ್ವತ್ಥ್ ನಾರಾಯಣ್‌ಗೌಡ, ಮಾಜಿ ಸಂಸದರಾದ ಪ್ರತಾಪ್‌ಸಿಂಹ, ಮುನಿಸ್ವಾಮಿ ಸೇರಿದಂತೆ ಬಿಜೆಪಿ, ಜೆಡಿಎಸ್‌ನ ಹಲವು ಮುಖಂಡರು ಭಾಗಿಯಾಗಿದ್ದರು.



ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮತ್ತು ವಿರೋದ ಪಕ್ಷದ ನಾಯಕ ಆರ್.ಅಶೋಕ್ ನಾಗಮಂಗಲಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕೋಮು ಸೌಹಾರ್ದತೆ ಕದಡುವ ಕೆಲಸವನ್ನು ಸರ್ಕಾರ ಸಹಿಸುವುದಿಲ್ಲ: ಚಲುವರಾಯಸ್ವಾಮಿ



ನಾಗಮಂಗಲದಲ್ಲಿ ಘರ್ಷಣೆ ಸಂಭವಿಸಿದ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭೇಟಿ ನೀಡಿ, ಸಂತ್ರಸ್ತರಿಂದ ಮಾಹಿತಿ ಸಂಗ್ರಹಿಸಿದರು.

ನಾಗಮಂಗಲ,ಸೆ.12– ಕೋಮು ಸೌಹಾರ್ದತೆ ಮತ್ತು ಶಾಂತಿ ಕದಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ ಶಾಂತಿಭಂಗ ತರುವ ಯಾವುದೇ ಕೆಲಸವನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಎಚ್ಚರಿಸಿದರು.

ನಾಗಮಂಗಲ ಪಟ್ಟಣದಲ್ಲಿ ನಡೆದ ಗಲಾಟೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರತ್ಯಕ್ಷದರ್ಶಿಗಳು, ಅಂಗಡಿ ಮುಂಗಟ್ಟುಗಳು ಹಾಗೂ ಗ್ಯಾರೇಜ್‌ಗಳ ಮಾಲೀಕರು ಮತ್ತು ಸ್ಥಳೀಯ ನಿವಾಸಿಗಳೊಂದಿಗೆ ಮಾತುಕತೆ ನಡೆಸಿದ್ದು, ಘಟನೆಯ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇನೆ. ಅಗತ್ಯ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಹಲವರನ್ನು ಬಂಧಿಸಲಾಗಿದೆ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮವಹಿಸಲಾಗುವುದು. ಈ ಘಟನೆ ನಡೆದಿರುವುದು ದುರದೃಷ್ಟಕರ. ಆಕಸ್ಮಿಕವಾಗಿ ನಡೆದ ಘಟನೆ, ನಂತರ ದೊಡ್ಡ ಮಟ್ಟದ ಗಲಭೆಗೆ ಕಾರಣವಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ ಸುಮಾರು 53ಕ್ಕೂ ಅಧಿಕ ಜನರನ್ನು ಬಂಧಿಸಲಾಗಿದ್ದು, ಘಟನೆಯಲ್ಲಿ ಪಾಲ್ಗೊಳ್ಳದ ಅಮಾಯಕರ ಬಂಧನವಾಗಿದ್ದಲ್ಲಿ ಸಿಸಿಟಿವಿ ಪರಿಶೀಲಿಸಿ, ಖಚಿತಪಡಿಸಿಕೊಂಡು ಬಿಡುಗಡೆ ಮಾಡಲು ಸೂಚಿಸಲಾಗಿದೆ. ನೈಜ ತಪ್ಪಿತಸ್ಥರನ್ನು ಬಿಡುವ ಪ್ರಶ್ನೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮುಂದಿನ ಎರಡು ದಿನಗಳಲ್ಲಿ ಮಂಡ್ಯ ಜಿಲ್ಲಾಧಿಕಾರಿ, ಹಾಗೂ ಎಸ್ಪಿ ನೇತೃತ್ವದಲ್ಲಿ ಶಾಂತಿ ಸಭೆ ನಡೆಸಲು ಸೂಚನೆ ನೀಡಲಾಗಿದೆ. ಈ ಘಟನೆಯನ್ನು ರಾಜಕೀಯವಾಗಿ ಬಳಸದೇ ವಿರೋಧ ಪಕ್ಷಗಳು ಸಹ ಜವಾಬ್ದಾರಿಯಿಂದ ವರ್ತಿಸಬೇಕು. ಹಾಗೆಯೇ, ಮಾಧ್ಯಮಗಳು ನಮ್ಮೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಇಂದು ಮಂಡ್ಯ ವಿವಿ ಘಟಿಕೋತ್ಸವ

ರಾಜ್ಯಪಾಲರು ಭಾಗಿ, ಚುಂಚಶ್ರೀ, ಪ್ರಮೋದಾದೇವಿ, ಡಾ.ರಾಜಣ್ಣಗೆ ಗೌರವ ಡಾಕ್ಟರೇಟ್ ಪ್ರದಾನ

ಮಂಡ್ಯ,ಸೆ.12– ಮಂಡ್ಯ ವಿಶ್ವವಿದ್ಯಾಲಯದ ವತಿಯಿಂದ ಸೆ.13ರಂದು ಮಧ್ಯಾಹ್ನ 11.30ಕ್ಕೆ ನಗರದ ಡಾ.ಅಂಬೇಡ್ಕರ್ ಭವನದಲ್ಲಿ ಮೊದಲನೇ ಮತ್ತು ಎರಡನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ವಿವಿ ಕುಲಪತಿ ಪ್ರೊ.ಪುಟ್ಟರಾಜು ತಿಳಿಸಿದರು.

ಕಾಲೇಜಿನಲ್ಲಿ ನಡೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯಪಾಲ ಹಾಗೂ ಮಂಡ್ಯ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಥಾವರ್ ಚಂದ್ ಗೆಹ್ಲೋಟ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹಾಗೂ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ್ ಅವರು ಸಮಾರಂಭದಲ್ಲಿ ಭಾಗವಹಿಸುವರು ಎಂದರು. ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಮೊದಲನೇ ವರ್ಷದ ಘಟಿಕೋತ್ಸವದ ಗೌರವ ಡಾಕ್ಟರೇಟ್ ಹಾಗೂ ರಾಜ ಮನೆತನ ಮೈಸೂರು ಅರಮನೆಯ ಪ್ರಮೋದಾದೇವಿ ಒಡೆಯರ್ ಹಾಗೂ ಕೊಪ್ಪ ಗ್ರಾಮದ ಪದ್ಮಶ್ರೀ ಡಾ.ಕೆ.ಎಸ್.ರಾಜಣ್ಣ ಅವರಿಗೆ ಎರಡನೇ ವರ್ಷದ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

2155 ಮಂದಿಗೆ ಪದವಿ ಪ್ರಮಾಣ ಪತ್ರ ವಿತರಣೆ: ಘಟಿಕೋತ್ಸವ ಸಮಾರಂಭದಲ್ಲಿ 2155 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಗುವುದು. ಸ್ನಾತಕ ವಿಭಾಗದಲ್ಲಿ 734 ಮಹಿಳಾ ಪದವೀಧರರು, 732 ಪುರುಷ ಪದವೀಧರರು ಸೇರಿ ಒಟ್ಟಾರೆ 1466 ಮಂದಿ, ಸ್ನಾತಕೋತ್ತರ ವಿಭಾಗದಲ್ಲಿ 438 ಮಹಿಳಾ ಪದವೀಧರರು, 251 ಪುರುಷ ಪದವೀಧರರು ಸೇರಿ ಒಟ್ಟು 689 ಮಂದಿ ಪದವಿ ಪ್ರಮಾಣಪತ್ರ ಪಡೆಯಲಿದ್ದಾರೆ ಎಂದರು.

ನಾಳೆಯಿಂದ ಗಗನಚುಕ್ಕಿ ಜಲಪಾತೋತ್ಸವ



ಮಂಡ್ಯ,ಸೆ.12– ಮಳವಳ್ಳಿ ತಾಲೂಕಿನ ಶಿವನಸಮುದ್ರದ ಗಗನಚುಕ್ಕಿ ಜಲಪಾತದ ಬಳಿ ಸೆ.14ರಿಂದ ಎರಡು ದಿನಗಳ ಕಾಲ ನಡೆಯಲಿರುವ ಗಗನಚುಕ್ಕಿ ಜಲಪಾತೋತ್ಸವಕ್ಕೆ ಕ್ಷಣಗಣನೆ ಆರಂಭಗೊಂಡಿದೆ. ಇದರೊಂದಿಗೆ ಅಂತಿಮ ಹಂತದ ತಯಾರಿಗಳು ಭರದಿಂದ ಸಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಜಲಪಾತೋತ್ಸವಕ್ಕೆ ಚಾಲನೆ ನೀಡುತ್ತಿರುವುದು ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರಾದ ಸಂಗೀತ ನಿರ್ದೇಶಕ ರವಿ ಬಸ್ರೂರು ತಂಡದವರು ಸಂಗೀತ ರಸಸಂಜೆ ಕಾರ್ಯಕ್ರಮ ನಡೆಸಿಕೊಡುತ್ತಿರುವುದು ವಿಶೇಷವಾಗಿದೆ.

ಪ್ರವಾಸೋದ್ಯಮವನ್ನು ಉತ್ತೇಜಿಸುವ ಹಾಗೂ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಗಗನಚುಕ್ಕಿ ಜಲಪಾತೋತ್ಸವ ಆಯೋಜಿಸಲಾಗಿದೆ. ಪ್ರಕೃತಿದತ್ತವಾದ ಜಲಪಾತದ ಸೊಬಗನ್ನು ಸವಿಯುವ ಜತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಸ್ವಾದಿಸುವ ಮುಕ್ತ ಅವಕಾಶವನ್ನು ಜಲಪಾತೋತ್ಸವ ಮೂಲಕ ಪ್ರವಾಸಿಗರು ಮತ್ತು ಜನರಿಗೆ ನೀಡಲಾಗಿದ್ದು, ಬೆಂಗಳೂರು–ದಿಂಡಗಲ್ ಹೆದ್ದಾರಿಯಿಂದ ಶಿವನಸಮುದ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯ ರೊಟ್ಟಿಕಟ್ಟೆ ಕ್ರಾಸ್‌ನಿಂದ ಜಲಪಾತದವರೆಗೆ ರಸ್ತೆಯ ಎರಡೂ ಬದಿಗಳನ್ನು ಮದುವಣಗಿತ್ತಿಯಂತೆ ಅಲಂಕರಿಸಲಾಗಿದೆ. ಬಣ್ಣಬಣ್ಣದ ಬಟ್ಟೆಗಳು, ಪ್ಲೇವುಡ್, ಮರದ ಕಂಬಗಳನ್ನು ಬಳಸಿದ ಆಕರ್ಷಕ ಅಲಂಕಾರಿಕ ಪರಿಕಗಳ ಮೂಲಕ ರಸ್ತೆಗಳಿಗೆ ಕಲರ್‌ಫುಲ್ ಟಚ್ ನೀಡಲಾಗಿದೆ. ಜಲಪಾತದ ಪ್ರದೇಶವನ್ನೂ ಇದೇ ರೀತಿ ಅಲಂಕರಿಸಲಾಗಿದೆ. ಗಗನಚುಕ್ಕಿ ಜಲಪಾತ ಪ್ರದೇಶದ ಅಭಿವೃದ್ಧಿಗೆ ಪೂರಕವಾಗಿ ಜಲಪಾತೋತ್ಸವವನ್ನು ಬಳಸಿಕೊಳ್ಳಲಾಗುತ್ತಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವನೆ ಸಲ್ಲಿಸಲು ನಿರ್ಧರಿಸಲಾಗಿದೆ.

ಒಂದು ಸಮುದಾಯದ ಓಲೈಕೆ, ತುಷ್ಟೀಕರಣದಿಂದ ಇಂಥ ಘಟನೆಗಳು ನಡೆಯುತ್ತಿವೆ: ಕುಮಾರಸ್ವಾಮಿ



ಮಂಡ್ಯ,ಸೆ.12– ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ಒಂದು ಸಮುದಾಯದ ಪುಂಡರು ನಡೆಸಿದ ದಾಳಿಯನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಖಂಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಂಡ್ಯ ಜಿಲ್ಲೆ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದಿರುವ ಘಟನೆಯನ್ನು ನಾನು ಉಗ್ರವಾಗಿ ಖಂಡಿಸುತ್ತೇನೆ. ಗಣಪತಿ ದೇವರ ಮೆರವಣಿಗೆಯಲ್ಲಿ ಶಾಂತಿಯುತವಾಗಿ ತೆರಳುತ್ತಿದ್ದ ಭಕ್ತರನ್ನು ಗುರಿ ಮಾಡಿ ಒಂದು ಸಮುದಾಯದ ಪುಂಡರು ಉದ್ದೇಶಪೂರ್ವಕವಾಗಿಯೇ ದಾಂಧಲೆ ಎಬ್ಬಿಸಿ ಸಾರ್ವಜನಿಕರು–ಪೊಲೀಸರ ಮೇಲೆ ಕಲ್ಲು, ಚಪ್ಪಲಿ ಎಸೆದು ಪೆಟ್ರೋಲ್ ಬಾಂಬ್ ಸ್ಫೋಟಿಸಿ ತಲ್ವಾರ್ ಝಳಪಿಸುವ ದುಸ್ಸಾಹಸಕ್ಕೆ ಕೈ ಹಾಕಿರುವುದು ಪಟ್ಟಣದಲ್ಲಿ ಶಾಂತಿ ಸುವ್ಯವಸ್ಥೆ ವೈಫಲ್ಯವಾಗಿರುವುದಕ್ಕೆ ಸಾಕ್ಷಿ ಎಂದು ಕಿಡಿಕಾರಿದ್ದಾರೆ. ಪೊಲೀಸ್ ಠಾಣೆ ಎದುರು ರಕ್ಷಣೆ ಕೊಡಿ ಎಂದು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದವರ ಮೇಲೆಯೇ ಆ ಕೋಮಿನ ಪುಂಡರು ದಬ್ಬಾಳಿಕೆ ನಡೆಸುತ್ತಾರೆ ಎಂದರೆ ನಾವು ಎಲ್ಲಿದ್ದೇವೆ ಎನ್ನುವ ಅನುಮಾನ ಬರುತ್ತದೆ. ಇಲ್ಲಿ ಸ್ಥಳೀಯ ಪೊಲೀಸರ ವೈಫಲ್ಯವೂ ಎದ್ದು ಕಾಣುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒಂದನೇ ಪುಟದಿಂದ

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ರಾಜ್ಯಪಾಲರು 23 ವರ್ಷದ ಹಳೆಯ ಪ್ರಕರಣದ ತನಿಖೆಗೆ ಅನುಮತಿ ನೀಡಿದ್ದಾರೆ. ಇದು ರಾಷ್ಟ್ರಪತಿ ಆಳ್ವಿಕೆಗಿಂತ ಹೆಚ್ಚು ರಾಜಕೀಯಪ್ರೇರಿತ. ಸೆಕ್ಷನ್ 17ಎ ಅಡಿ ಅನುಮತಿ ನೀಡುವಾಗ ಸಚಿವ ಸಂಪುಟದ ಶಿಫಾರಸು ಪಾಲಿಸಬೇಕು. ಪಾಲಿಸದಿದ್ದರೆ ಅದಕ್ಕೆ ಸೂಕ್ತ ಕಾರಣ ನೀಡುವ ಹೊಣೆ ರಾಜ್ಯಪಾಲರ ಮೇಲಿದೆ. ಎಲ್ಲಾ ಪ್ರಕರಣಗಳಲ್ಲೂ ಸಚಿವ ಸಂಪುಟ ಸಿಎಂ ಪರ ಇದೆ, ತಾರತಮ್ಯ ಮಾಡಿದೆ ಎನ್ನಲಾಗದು. ಸಚಿವ ಸಂಪುಟದ ಸಭೆಯಲ್ಲಿ ಮಂತ್ರಿಗಳು ಬೇರೆ ಬೇರೆ ಅಭಿಪ್ರಾಯ ಮಂಡಿಸಬಹುದು ಎಂದು ಅಭಿಷೇಕ್ ಮನು ಸಿಂಘ್ವಿ ವಾದಿಸಿದರು. ರಾಜ್ಯಪಾಲರು ಸಚಿವ ಸಂಪುಟದ ಶಿಫಾರಸು ಪಾಲಿಸಲೇಬೇಕೆಂದಿಲ್ಲ. ಆದರೆ ಭಿನ್ನ ನಿಲುವಿಗೆ ಕಾರಣ ನೀಡಬೇಕೆಂಬುದು ನಿಮ್ಮ ವಾದವೇ ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಸಿಂಘ್ವಿ, ಸಚಿವ ಸಂಪುಟದ ಶಿಫಾರಸ್ಸನ್ನು ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ರಾಜ್ಯಪಾಲರು ಸಚಿವ ಸಂಪುಟದ ಶಿಫಾರಸ್ಸು ತಪ್ಪೆಂದು ಹೇಳಿಲ್ಲ. ಹೀಗಾಗಿ ಕಾರಣವೇ ಹೇಳದೆ ಸಚಿವ ಸಂಪುಟದ ಕ್ರಮ ತಾರತಮ್ಯಪೂರಿತವೆನ್ನಲಾಗದು ಎಂದು ಅಭಿಷೇಕ್ ಮನು ಸಿಂಘ್ವಿ ಹೇಳಿದರು. ಸುದೀರ್ಘ ವಾದ, ಪ್ರತಿವಾದ ಆಲಿಸಿದ ನ್ಯಾಯಾಧೀಶರಾದ ಎಂ. ನಾಗಪ್ರಸನ್ನ ಅವರು ತೀರ್ಪು ಕಾಯ್ದಿರಿಸಿದ್ದಾರೆ.

ಸಿಎಂ ಪರ ಪ್ರೊ.ರವಿವರ್ಮ ಕುಮಾರ್ ವಾದ

- ಅಕ್ರಮ ಮತ್ತು ಅಧಿಕಾರ ದುರುಪಯೋಗವಾಗಿರುವ ಸಾಧ್ಯತೆ ಇದೆ ಎಂದು ರಾಜ್ಯಪಾಲರ ಉಲ್ಲೇಖವಿದೆ. ಸಹಿ ಹಾಕಿದ ಬಳಿಕ ಷೋಕಾಸ್ ನೋಟಿಸ್ ನೀಡಿದ್ದಾರೆ.
- ಆ.14ರಂದು ಫೈಲ್ ಪರಿಶೀಲಿಸಿದ್ದೇನೆ. ಡಿಕ್ಟೇಷನ್ ನೀಡಿದ್ದೇನೆ ಎಂದು ಬರೆಯಲಾಗಿದೆ.
- ಆದರೆ ಟಿ.ಜೆ.ಅಬ್ರಹಾಂ ನೀಡಿದ ದೂರಿನನ್ವಯ ಜು. 26 ರಂದು 26.07 ರಂದು ಫೈಲ್ ಸಿದ್ದಪಡಿಸಲಾಗಿದೆ. ಜು.5 ರಂದು ಸ್ನೇಹಮಯಿ ಕೃಷ್ಣ ದೂರು ನೀಡಿದ್ದಾರೆ. ಆದರೆ ಕಡತದಲ್ಲಿ ಅದರ ಉಲ್ಲೇಖವಿಲ್ಲ.
- ರಾಜ್ಯಪಾಲರ ಆದೇಶದಲ್ಲಿ 25 ಸೆಕ್ಷನ್‌ಗಳನ್ನು ಉಲ್ಲೇಖಿಸಲಾಗಿದೆ.ಉದಾಹರಣೆಗೆ ಫೋರ್ಜರಿ ಮತ್ತಿತರ ಸೆಕ್ಷನ್ ಉಲ್ಲೇಖಿಸಿದ್ದಾರೆ.ಆದರೆ ಎಲ್ಲಿ ಸಿಎಂ ಫೋರ್ಜರಿ ಮಾಡಿದ್ದಾರಾ ಎಂಬುದಕ್ಕೆ ಉತ್ತರವಿಲ್ಲ.
- ಜಮೀನು ಸ್ವಾಧೀನವಾದ ಬಳಿಕ ಪರಿಹಾರದ ನೋಟಿಸ್ ವಿಳಂಬವಾಗಿ ತಲುಪಿದೆ. ಮುಡಾ ಜಮೀನನ್ನು ಭೌತಿಕವಾಗಿ ಸ್ವಾಧೀನಕ್ಕೆ ಪಡಿದಿರಲಿಲ್ಲ. ನಂತರ ಸೆ.48 ಅಡಿ ಜಮೀನನ್ನು ಡಿ ನೋಟಿಫಿಕೇಷನ್ ಮಾಡಲಾಗಿದೆ.
- ಮಹಜರ್ ಮಾಡಿ ಭೂಮಿಯನ್ನು ಸ್ವಾಧೀನಕ್ಕೆ ಪಡೆದಿರಲಿಲ್ಲ. ರಾಜ್ಯಪಾಲರು ಮುಡಾ ಸ್ವಾಧೀನದಲ್ಲಿತ್ತು ಎಂದು ಹೇಳಿದ್ದಾರೆ.ಹೀಗಾಗಿ ರಾಜ್ಯಪಾಲರ ಆದೇಶವೇ ಕಾನೂನುಬಾಹಿರವಾಗಿದೆ.
- ಸಿದ್ದರಾಮಯ್ಯ ಮಾತ್ರ ಕಳೆದ ಐವತ್ತು ವರ್ಷಗಳಲ್ಲಿ ಅವಧಿ ಪೂರೈಸಿದ್ದು, ಐದು ವರ್ಷಗಳ ನಂತರವೂ ಮತ್ತೊಮ್ಮೆ ಸಿಎಂ ಆಗಿ ಆಯ್ಕೆಯಾಗಿದ್ದಾರೆ.
- ಈ ರೀತಿ ಜುಜುಬಿ ಸೈಟ್‌ಗೆ ಸಿಎಂ ಹೀಗೆಲ್ಲಾ ಮಾಡುವ ಅಗತ್ಯವಿಲ್ಲ.
- 60:40 ಅನುಪಾತಕ್ಕೆ ಅವರ ತಕರಾರಿಲ್ಲ 50:50 ಅನುಪಾತಕ್ಕೆ ತಕರಾರಿದೆ. ಪರಿಹಾರದ ನಿವೇಶನ ಕೊಟ್ಟಿರುವುದು ಮುಡಾ. ಈ ರೀತಿ ಜನಪ್ರಿಯ ನಾಯಕನ ವಿರುದ್ಧ ರಾಜ್ಯಪಾಲರು ಈ ರೀತಿ ಅನುಮತಿ ನೀಡಿರುವುದು ರಾಜಕೀಯ ದುರುದ್ದೇಶ ಸ್ಪಷ್ಟಪಡಿಸುತ್ತದೆ.
- ಅಧಿಕಾರದಲ್ಲಿದ್ದಾಗ ಸಂಬಂಧಿಕರು, ಅಧಿಕಾರಿಗಳು ಅಸೂಯೆಯಿಂದ ಏನಾದರೂ ಮಾಡಿರಬಹುದು. ಅದಕ್ಕೆಲ್ಲಾ ಸಿಎಂ ಸಿದ್ದರಾಮಯ್ಯರನ್ನು ಹೊಣೆ ಮಾಡುವುದು ಸರಿಯಲ್ಲ.

ಸರ್ಕಾರದ ಪರ ಎಜಿ ಶಶಿಕಿರಣ್ ಶೆಟ್ಟಿ ವಾದ

- ಯಾವುದೇ ತನಿಖೆಯ ಆಧಾರವಿಲ್ಲದೇ 17 ಎ ಅನುಮತಿಯೇ ಏಕಾಏಕಿ ನಿರ್ಧಾರ ತೆಗೆದುಕೊಳ್ಳಲಾಗಿದೆ.
- ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ನು ರಾಜ್ಯಪಾಲರು ಪಾಲಿಸಿಲ್ಲ..
- ಹೀಗಾಗಿ ರಾಜ್ಯಪಾಲರ ಅನುಮತಿ ಕಾನೂನು ಬಾಹಿರ.

ದೂರುದಾರ ಟಿ.ಜೆ.ಅಬ್ರಹಾಂ ಪರ ರಂಗನಾಥ್ ರೆಡ್ಡಿ ವಾದ

- ಒಂದೆಡೆ ಕೃಷಿ ಜಮೀನೆಂದು, ಮತ್ತೊಂದೆಡೆ ಮುಡಾ ಜಮೀನು ಒತ್ತುವರಿ ಮಾಡಿದೆ ಎನ್ನುತ್ತಿದ್ದಾರೆ.
- ಸಿಎಂ ಪರ ವಕೀಲರು ಎರಡೆರಡು ರೀತಿಯಲ್ಲಿ ವಾದ ಮಂಡಿಸುತ್ತಿದ್ದಾರೆ.
- ಪ್ರಕ್ರಿಯೆ ಪಾಲಿಸದೇ ಹಣವನ್ನು ಠೇವಣಿ ಇಡುವುದು ಸಾಧ್ಯವಿಲ್ಲ .
- ಇದು ಹೇಗಾಗಿದೆ ಎಂದರೆ ದೇವನೂರು ಬಡಾವಣೆಯ ಜಮೀನಿಗೆ ವಿಜಯನಗರದಲ್ಲಿ ಬದಲಿ ನಿವೇಶನ. ಚಿಂತಾಮಣಿಯ ಜಮೀನಿಗೆ ಸದಾಶಿವನಗರದಲ್ಲಿ ನಿವೇಶನ ಕೊಟ್ಟಂತಾಗಿದೆ.

ತೆರೆಯದ ಅಂಗಡಿ–ಮುಂಗಟ್ಟು; ಶಾಲಾ–ಕಾಲೇಜಿಗೆ ರಜೆ; ಪೊಲೀಸರ ಸರ್ಪಗಾವಲು

ಮಾತಿಗೆ ಮಾತು ಬೆಳೆದು, ಎರಡು ಗುಂಪಿನವರು ಪರಸ್ಪರ ಕೈ–ಕೈ ಮಿಲಾಯಿಸಿಕೊಂಡು ಕಲ್ಲು ತೂರಾಟದಲ್ಲಿ ತೊಡಗಿದಾಗ ಪೊಲೀಸರು ಲಾಠಿ ಚಾರ್ಜ್ ನಡೆಸಿ, ಗುಂಪನ್ನು ಚದುರಿಸಿದ್ದಲ್ಲದೇ ಗಣೇಶಮೂರ್ತಿ ಇದ್ದ ವಾಹನವನ್ನು ಮಂಡ್ಯ ಸರ್ಕಲ್‌ನಿಂದ ಮರಿಯಪ್ಪ ವೃತ್ತದ ಕಡೆಗೆ ಕಳುಹಿಸಿ ಪರಿಸ್ಥಿತಿ ಹತೋಟಿಗೆ ತರಲು ಪ್ರಯತ್ನಿಸುತ್ತಿದ್ದಾಗಲೇ ಉದ್ರಿಕ್ತ ಗುಂಪಿನವರು ಕಬ್ಬಿಣದ ಪೈಪು, ಕಲ್ಲು, ದೊಣ್ಣೆಗಳ ಹಿಡಿದು ಘರ್ಷಣೆಗೆ ಇಳಿದರು. ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದಾಗ ಒಂದು ಗುಂಪಿನವರು ಮಚ್ಚು, ಲಾಂಗು, ದೊಣ್ಣೆ ಹಾಗೂ ಕಲ್ಲುಗಳನ್ನು ಹಿಡಿದು ಪೊಲೀಸರ ಮೇಲೆ ಬೀಸುತ್ತಾ ಕೊಲೆ ಮಾಡುವ ಉದ್ದೇಶದಿಂದ ಓಡಿಸಿಕೊಂಡು ಬಂದರು. ಅದೇ ವೇಳೆ ಗಣೇಶಮೂರ್ತಿ ಮೆರವಣಿಗೆಯಲ್ಲಿದ್ದವರೂ ಘೋಷಣೆ ಕೂಗುತ್ತಾ ಮರಿಯಪ್ಪ ವೃತ್ತದ ಕಡೆಯಿಂದ ಮಂಡ್ಯದ ವೃತ್ತದ ಕಡೆಗೆ ಕಲ್ಲುಗಳ ತೂರಾಟ ನಡೆಸಿದರು. ಪರಿಸ್ಥಿತಿ ವಿಕೋಪಕ್ಕೆ ತೆರಳಿ ಅಂಗಡಿ ಮಳಿಗೆಗಳು ರಸ್ತೆಯಲ್ಲಿದ್ದ ವಾಹನಗಳಿಗೆ ಬೆಂಕಿ ಹಚ್ಚಿ ಸಾರ್ವಜನಿಕರ ಆಸ್ತಿ–ಪಾಸ್ತಿಗೆ ನಷ್ಟ ಉಂಟು ಮಾಡಲಾಗಿದೆ ಎಂದು ಸಬ್ ಇನ್ಸ್‌ಪೆಕ್ಟರ್ ರವಿ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಪರಿಸ್ಥಿತಿ ಅವಲೋಕನ: ಇಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನಾಗಮಂಗಲಕ್ಕೆ ಭೇಟಿ ನೀಡಿ ಬೆಂಕಿಗಾಹುತಿಯಾಗಿದ್ದ ಮಳಿಗೆಗಳ ವೀಕ್ಷಣೆ ಮಾಡಿದರು. ಈ ವೇಳೆ ಎರಡೂ ಗುಂಪಿಗೆ ಸೇರಿದ ಮಹಿಳೆಯರು ಸಚಿವರನ್ನು ಸುತ್ತುವರೆದು ತಮ್ಮ ಮನೆಯ ಅಮಾಯಕ ಗಂಡು ಮಕ್ಕಳನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಹಿಳೆಯರಿಗೆ ಸಮಜಾಯಿಷಿ ನೀಡುವುದಾಗಲೀ, ಸಮಾಧಾನಪಡಿಸುವುದಾಗಲೀ ಸಾಧ್ಯವಾಗದೇ ಸಚಿವರು ಸ್ಥಳದಿಂದ ಕಾಲ್ಕಿತ್ತರು. ನಂತರ ತಾಲೂಕು ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ, ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ನಾಗಮಂಗಲದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವ ಬಗ್ಗೆ ಚರ್ಚೆ ನಡೆಸಿದರು.

ಬಿಜೆಪಿ ಮುಖಂಡರು ಭೇಟಿ: ಬೆಂಕಿಗಾಹುತಿಯಾಗಿದ್ದ ಅಂಗಡಿಗಳಿಗೆ ಎಫ್‌ಎಸ್‌ಎಲ್ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಾಗಮಂಗಲಕ್ಕೆ ಇಂದು ವಿಪಕ್ಷ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವಾರು ಮುಖಂಡರು ಭೇಟಿ ನೀಡಿದ್ದರು. ಇವರಿಗೆ ನಾಗಮಂಗಲದವರೇ ಆದ ಮಾಜಿ ಶಾಸಕ ಕೆ.ಸುರೇಶ್ ಗೌಡ ಸಾಥ್ ನೀಡಿದರು.

ಬೀದಿಗೆ ಬಿದ್ದ ಬಟ್ಟೆ ವ್ಯಾಪಾರಿ: ನಿನ್ನೆ ನಡೆದ ಘರ್ಷಣೆಯಿಂದಾಗಿ ನಾಗಮಂಗಲ ಪಟ್ಟಣದಲ್ಲಿ ಕೋಟ್ಯಾಂತರ ರೂ. ನಷ್ಟ ಉಂಟಾಗಿದೆ. ಹಲವಾರು ಅಂಗಡಿಗಳವರು ತಮ್ಮ ಆಸ್ತಿ–ಪಾಸ್ತಿ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಘಟನೆ ಸಂಬಂಧ ವಿವರಿಸಿದ ಬಟ್ಟೆ ಅಂಗಡಿ ಮಾಲೀಕ ಭೀಮರಾಜ್, ನಿನ್ನೆ ದುಷ್ಕರ್ಮಿಗಳು ಎರಡು ಬಾರಿ ತಮ್ಮ ಅಂಗಡಿಗೆ ಬೆಂಕಿ ಹಚ್ಚಿದಾಗಲೂ ಅದನ್ನು ನಂದಿಸಿದ್ದೆವು. ನಂತರ ನೂರಕ್ಕೂ ಹೆಚ್ಚು ಮಂದಿ ಒಟ್ಟಿಗೆ ನುಗ್ಗಿ ಸ್ಥಳದಲ್ಲಿದ್ದ ಪೊಲೀಸರ ಮೇಲೂ ಕಲ್ಲು ತೂರಾಟ ನಡೆಸಿ ಅಂಗಡಿಗೆ ಪೆಟ್ರೋಲ್ ಬಾಂಬ್ ಎಸೆದು ಬೆಂಕಿ ಹಚ್ಚಿದರು. ಅಂಗಡಿ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದ್ದು, 1.5 ಕೋಟಿ ರೂ. ನಷ್ಟ ಉಂಟಾಗಿದೆ. ಇದರಿಂದಾಗಿ ನಾವು ಬೀದಿಗೆ ಬಿದ್ದಿದ್ದೇವೆ ಎಂದು ಅಳಲು ತೋಡಿಕೊಂಡರು.

ಗಣೇಶನ ಕೂರಿಸಲು ಚಂದಾ ಕೊಟ್ಟವರ ಗುಜರಿ ಧ್ವಂಸ: ಗುಜರಿ ಅಂಗಡಿ ಮಾಲೀಕ ರಿಯಾಜ್ ಮಾತನಾಡಿ, ನಾಗಮಂಗಲದಲ್ಲಿ ಎರಡೂ ಕೋಮಿನವರು ಪರಸ್ಪರ ಸೌಹಾರ್ದಯುತವಾಗೇ ಇದ್ದೇವೆ. ನಾನೂ ಕೂಡ ಗಣಪತಿ ಪ್ರತಿಷ್ಠಾಪನೆಗೆ ಚಂದಾ ನೀಡಿದ್ದೇನೆ. ನನ್ನ ಗುಜರಿಗೂ ಬೆಂಕಿ ಹಚ್ಚಿದ್ದಾರೆ. ಇದನ್ನು ಮಾಡಿದವರು ಎರಡೂ ಕೋಮಿನವರೂ ಅಲ್ಲ, ಗಲಾಟೆ ಮಾಡಲೆಂದೇ ಇರುವ ಪ್ರತ್ಯೇಕ ಜಾತಿಯವರು ಎಂದು ಗುಜರಿ ಮಾಲೀಕ ರಿಯಾಜ್ ಮತ್ತು ಗುಜರಿ ಸ್ಥಳವನ್ನು ಬಾಡಿಗೆಗೆ ನೀಡಿರುವ ಶಿವರಾಜ್ ಕಿಡಿಕಾರಿದರು.

ನಿನ್ನೆ ರಾತ್ರಿ ಬಜಾಜ್ ಶೋ ರೂಂಗೆ ಮುಖಕ್ಕೆ ಬಟ್ಟೆ ಕಟ್ಟಿಕೊಂಡು ನುಗ್ಗಿದ ದುಷ್ಕರ್ಮಿಗಳು ಅಲ್ಲಿ ನಿಲ್ಲಿಸಿದ್ದ ಹೊಸ ಬೈಕ್‌ಗಳನ್ನು ಜಖಂ ಮಾಡಿದ್ದಾರೆ. ಶೋ ರೂಂನಿಂದ 8 ಬೈಕ್‌ಗಳನ್ನು ಕೊಂಡೊಯ್ದಿದ್ದು, ಅವುಗಳಲ್ಲಿ ಎರಡು ಬೈಕ್‌ಗಳಿಗೆ ಬೆಂಕಿ ಹಚ್ಚಲಾಗಿದೆ. ಉಳಿದ 6 ಬೈಕ್‌ಗಳು ನಾಪತ್ತೆಯಾಗಿವೆ. ಶೋ ರೂಂನಲ್ಲಿದ್ದ ಕಂಪ್ಯೂಟರ್ ಹಾಗೂ ಗ್ರಾಹಕರಿಗಾಗಿ ಅಳವಡಿಸಿರುವ ಕುರ್ಚಿಗಳನ್ನು ಧ್ವಂಸ ಮಾಡಲಾಗಿದೆ. ಸಿಸಿ ಕ್ಯಾಮರಾ ಒಡೆದು ಹಾಕಲು ಪ್ರಯತ್ನಿಸಲಾಗಿದೆ. ಎಲ್ಲವೂ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿವೆ ಎಂದು ಶೋ ರೂಂ ಮ್ಯಾನೇಜರ್ ತಿಳಿಸಿದ್ದಾರೆ. ನಿನ್ನೆ ನಡೆದ ಘಟನೆಯಲ್ಲಿ ಬಟ್ಟೆ ಶೋ ರೂಂ, ಬಜಾಜ್ ಬೈಕ್ ಶೋ ರೂಂ, ಗುಜರಿ, ಹಣ್ಣಿನ ಅಂಗಡಿ, 4 ಗ್ಯಾರೇಜ್‌ಗಳು, ಚಪ್ಪಲಿ ಅಂಗಡಿ, ಟೈಲರಿಂಗ್ ಶಾಪ್‌ಗೆ ಬೆಂಕಿ ಹಚ್ಚಲಾಗಿದೆ.

ಇಂದು ನಾಗಮಂಗಲದಲ್ಲಿ ಶಾಂತಿ ನೆಲೆಸಿದ್ದರೂ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ. ಅಂಗಡಿ–ಮುಂಗಟ್ಟುಗಳೆಲ್ಲಾ ಬಂದ್ ಆಗಿವೆ. ಸೆ.14ರವರೆಗೆ ನಿಷೇಧಾಜ್ಞೆ ಜಾರಿಯಲ್ಲಿದ್ದು, ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಇಂದು ಸಂಜೆ ನಾಗಮಂಗಲ ಪಟ್ಟಣದ ಎಲ್ಲಾ ಬೀದಿಗಳಲ್ಲೂ ಪೊಲೀಸರು ಶಸ್ತ್ರ ಸಜ್ಜಿತರಾಗಿ ಪಥ ಸಂಚಲನ ನಡೆಸಿದರು. ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಹಿರಿಯ ಅಧಿಕಾರಿಗಳು ಪಟ್ಟಣದಲ್ಲೇ ಮೊಕ್ಕಾಂ ಹೂಡಿದ್ದಾರೆ.

ನಿರ್ದಾಕ್ಷಿಣ್ಯ ಕ್ರಮ

ಬಂಧಿಸಲಾಗಿದ್ದು, ಸಮಾಜದ ಶಾಂತಿ, ಸುವ್ಯವಸ್ಥೆ ಕಾಪಾಡುವುದೇ ನಮ್ಮ ಮೊದಲ ಆದ್ಯತೆಯಾಗಿದೆ ಎಂದು ಹೇಳಿದ್ದಾರೆ. ಕಳೆದ ಒಂದೂವರೆ ವರ್ಷಗಳಿಂದ ಯಾವುದೇ ಗಲಭೆ, ಗಲಾಟೆ, ಹಿಂಸಾಚಾರಗಳು ನಡೆಯದೆ ಸರ್ವಜನಾಂಗದ ಶಾಂತಿಯ ತೋಟದಂತಿದ್ದ ನಾಡನ್ನು, ಧಾರ್ಮಿಕ ನೆಲೆಗಟ್ಟಿನಲ್ಲಿ ವಿಭಜಿಸಲು ಯತ್ನಿಸುವ ದುರುಳರು ಯಾವುದೇ ಜಾತಿ, ಧರ್ಮದವರಾಗಿರಲಿ ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಪ್ರಚೋದನೆಗಳಿಗೆ ಒಳಗಾಗದೆ ಶಾಂತಿ, ಸಂಯಮ ಕಾಪಾಡಿಕೊಳ್ಳುವ ಮೂಲಕ ನಮ್ಮೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡುತ್ತೇನೆಂದು ಹೇಳಿದ್ದಾರೆ.

ಸಣ್ಣ ಘಟನೆ; ಕೋಮು ಗಲಭೆಯಲ್ಲ



ಪರಮೇಶ್ವರ್

ಬೆಂಗಳೂರು, ಸೆ.12– ನಾಗಮಂಗಲದಲ್ಲಿ ಗಣೇಶಮೂರ್ತಿ ವಿಸರ್ಜನೆ ವೇಳೆ ನಡೆದಿರುವುದು ಆಕಸ್ಮಿಕವಾಗಿ ಕಲ್ಲು ತೂರಾಟ, ಇದೊಂದು ಸಣ್ಣ ಘಟನೆಯಾಗಿದ್ದು ಕೋಮು ಗಲಭೆ ಎಂದು ಹೇಳುವುದು ತಪ್ಪಾಗುತ್ತದೆ ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದ್ದಾರೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನಲ್ಲಿ ಬುಧವಾರ ರಾತ್ರಿ ಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಸಂಭವಿಸಿದ ಕೋಮು ಗಲಭೆ ವಿಚಾರವಾಗಿ ಪ್ರತಿಕ್ರಿಯಿಸಿದ ಪರಮೇಶ್ವರ್ ಇದೊಂದು ಆಕಸ್ಮಿಕ ಘಟನೆ, ಕೋಮು ಗಲಭೆಯಾಗಿಲ್ಲ ಎಂದಿದ್ದಾರೆ. ಈ ಘಟನೆ ನಡೆಯಬಾರದಿತ್ತು. ಸಣ್ಣ ಪ್ರಮಾಣದಲ್ಲಿ ಪ್ರಾರಂಭವಾಗಿ ಅಂತ್ಯವಾಗಿದೆ.

ಜಿಲ್ಲಾ ಪೊಲೀಸ್ ಅಧೀಕ್ಷಕರು, ಐಜಿಪಿ, ಕೆಎಸ್‌ಆರ್‌ಪಿ ತುಕಡಿ ಸ್ಥಳದಲ್ಲಿದೆ. ಕಾನೂನು ಸುವ್ಯವಸ್ಥೆ ಎಡಿಜಿಪಿ ಅವರನ್ನು ಸ್ಥಳಕ್ಕೆ ಕಳುಹಿಸಿಕೊಟ್ಟಿದ್ದೇನೆ. ಈ ಘಟನೆಯನ್ನು ಕೋಮು ಗಲಭೆ ಎಂದು ಹೇಳಲಾಗದು. ಇದನ್ನು ಹೆಚ್ಚು ಬೆಳೆಯಲು ಪೊಲೀಸರು ಬಿಟ್ಟಿಲ್ಲ. ಹೆಚ್ಚು ಪ್ರಚಾರ ನೀಡುವುದೂ ಬೇಡ ಎಂದು ಮನವಿ ಮಾಡಿದರು. ನಾಗಮಂಗಲ ಘಟನೆ ಸಂಬಂಧ ಸುಮಾರು 52 ಜನರನ್ನು ಬಂಧಿಸಲಾಗಿದೆ. ಕಲ್ಲು ತೂರಾಟ ವೇಳೆ ಒಬ್ಬ ಎಎಸ್‌ಐಗೂ ಗಾಯವಾಗಿದೆ. ಈ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು ಎಂದು ವಿನಂತಿಸಿದ್ದಾರೆ. ಘಟನೆಗೆ ಅತಿಯಾದ ಓಲೈಕೆಯೇ ಕಾರಣ ಎಂದಿರುವ ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಲು ಹೋಗುವುದಿಲ್ಲ. ಅವರು ಈ ಹಿಂದೆ ಯಾವ ರೀತಿ ಓಲೈಕೆ ಮಾಡುತ್ತಿದ್ದರೋ ಗೊತ್ತಿಲ್ಲ ಎಂದು ತಿರುಗೇಟು ನೀಡಿದರು. ಇದರಲ್ಲಿ ರಾಜಕೀಯ ಮಾಡುವುದು ಬೇಡ. ಪೊಲೀಸರಿಗೆ ಬಿಟ್ಟರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ. ಕಾನೂನು ಸಲಹೆ ಕೊಡುವುದಾದರೆ ಸ್ವಾಗತಿಸುತ್ತೇನೆ. ಘಟನೆಯಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ ಎಂಬುದರ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆ ಎಂದು ಹೇಳಿದರು. ಕಳೆದ ವರ್ಷವೂ ಇದೇ ರೀತಿಯ ಘಟನೆಗಳು ನಡೆದಿದ್ದರೂ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಪರಮೇಶ್ವರ್, ಸ್ಥಳದಲ್ಲಿ ಕೆಎಸ್‌ಆರ್‌ಪಿ ತುಕಡಿಯನ್ನು ನಿಯೋಜಿಸಿದ್ದು, ಪರಿಸ್ಥಿತಿಯನ್ನು ಹತೋಟಿಗೆ ತರಲು ಸಹಾಯ ಮಾಡಿತು. ಇಲ್ಲದಿದ್ದರೆ, ದೊಡ್ಡ ಹಿಂಸಾಚಾರ ನಡೆಯುವ ಸಾಧ್ಯತೆಯಿತ್ತು ಎಂದು ಹೇಳಿದರು. ಈ ಘಟನೆಯ ಹಿಂದೆ ಯಾವುದೇ ರಾಜಕೀಯ ಪ್ರಚೋದನೆ ಇಲ್ಲ ಎಂದು ಮೇಲ್ನೋಟಕ್ಕೆ ತೋರುತ್ತಿದೆ ಎಂದು ಅವರು ಹೇಳಿದರು.

ಮತಾಂಧ ಶಕ್ತಿಗಳ ಅಟ್ಟಹಾಸ

ಬೆಂಗಳೂರು, ಸೆ.12–ರಾಜ್ಯ ಬಿಜೆಪಿ ನಾಗಮಂಗಲ ಗಲಭೆ ವಿಚಾರದಲ್ಲಿ ಪ್ರತಿಕ್ರಿಯಿಸಿ, ಕಾಂಗ್ರೆಸ್ ಸರ್ಕಾರದಲ್ಲಿ ಮತಾಂಧ ಶಕ್ತಿಗಳು ಮತ್ತೊಮ್ಮೆ ಅಟ್ಟಹಾಸ ಮೆರೆದಿದ್ದು, ಸರ್ವಜನಾಂಗದ ಶಾಂತಿಯ ತೋಟವಾಗಿದ್ದ ಕರ್ನಾಟಕದಲ್ಲಿ ಜಿಹಾದಿ ಮುಳ್ಳುಗಳ ದುಸ್ಸಾಹಸ ಶಾಂತಿ ಕದಡುತ್ತಿದೆ ಎಂದಿದೆ.

ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದಿರುವ ಘಟನೆ ಅತ್ಯಂತ ಖಂಡನೀಯ, ಕಾಂಗ್ರೆಸ್ ಆಡಳಿತದಲ್ಲಿ ಕಣ್ಮರೆಯಾಗಿರುವ ಕಾನೂನು ಸುವ್ಯವಸ್ಥೆಗೆ ಇದು ಮತ್ತೊಂದು ನಿದರ್ಶನ. ಕಳೆದ ವರ್ಷವೂ ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ಸಂದರ್ಭದಲ್ಲಿ ಇಂತಹುದೇ ಘಟನೆ ನಡೆದಿದ್ದರೂ, ಈ ಬಾರಿ, ಪೊಲೀಸರು ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದು ಕಾಂಗ್ರೆಸ್ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಶಾಂತಿಯುತವಾಗಿ ಸಾಗುತ್ತಿದ್ದ ಗಣೇಶ ವಿಸರ್ಜನೆ ಮೆರವಣಿಗೆಗೆ ಅಡ್ಡಿಪಡಿಸುವ ದುರುದ್ದೇಶದಿಂದ ಮತಾಂಧ ಪುಂಡರು ನಡೆಸಿದ ದಾಂಧಲೆ ಪೂರ್ವನಿಯೋಜಿತವಾಗಿದ್ದು ಸಾರ್ವಜನಿಕರು ಹಾಗೂ ಪೊಲೀಸರ ಮೇಲೆ ಕಲ್ಲು ತೂರಾಟ ಮಾಡುವುದು, ಚಪ್ಪಲಿ ಎಸೆಯುವುದು, ಪೆಟ್ರೋಲ್ ಬಾಂಬ್ ಸ್ಫೋಟಿಸುವುದು, ತಲ್ವಾರ್ ಝಳಪಿಸುವಂತಹ ದುಸ್ಸಾಹಸಕ್ಕೆ ಮುಂದಾಗುತ್ತಾರೆ ಎಂದರೆ ರಾಜ್ಯದಲ್ಲಿ ಇಂತಹ ಮತಾಂಧ ಪುಂಡರಿಗೆ, ಮುಸ್ಲಿಂ ಮೂಲಭೂತವಾದಿಗಳಿಗೆ ಕಾನೂನಿನ ಭಯವೇ ಇಲ್ಲವೆಂಬುದು ಸ್ಪಷ್ಟವಾಗುತ್ತದೆ ಎಂದು ಬಿಜೆಪಿ ಕಟುವಾಗಿ ಟೀಕಿಸಿದೆ.

ರಕ್ಷಣೆ ಕೋರಿ ಪೊಲೀಸ್ ಠಾಣೆಗೆ ಬಂದವರ ಮೇಲೆಯೇ ಮತಾಂಧ ಪುಂಡರು ಹಲ್ಲೆ, ದಬ್ಬಾಳಿಕೆ ನಡೆಸುತ್ತಾರೆಂದರೆ ಇಂತಹ ಮನಸ್ಥಿತಿಗೆ ಕಾಂಗ್ರೆಸ್ ಸರ್ಕಾರದಲ್ಲಿ ಎಷ್ಟು ಪ್ರೋತ್ಸಾಹ, ಪೋಷಣೆ ದೊರಕುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ರಾಜ್ಯ ಸರ್ಕಾರದ ವೋಟ್ ಬ್ಯಾಂಕ್ ಓಲೈಕೆ ರಾಜಕಾರಣ, ತುಷ್ಟೀಕರಣವೇ ಇಂತಹ ಘಟನೆಗಳು ಪದೇ ಪದೆ ಮರುಕಳಿಸುತ್ತಿರುವುದಕ್ಕೆ ಕಾರಣ. ಇಂತಹ ಪುಂಡರ ಬಾಲ ಕತ್ತರಿಸದೆ ಹೀಗೇ ಬಿಟ್ಟರೆ ಇಂತಹವರು ನಾಳೆ ಉಗ್ರವಾದಿಗಳಾಗುವುದರಲ್ಲಿ ಸಂಶಯವೇ ಇಲ್ಲ. ಗಲಭೆಗೆ ಕಾರಣರಾದ ಸಮಾಜಘಾತುಕ ಶಕ್ತಿಗಳನ್ನು ಕೂಡಲೇ ಬಂಧಿಸಿ ಕಾನೂನು ವಶಕ್ಕೆ ಒಪ್ಪಿಸಿ ಕರ್ನಾಟಕದಲ್ಲಿ ಜಿಹಾದಿ ಮಾನಸಿಕತೆಗೆ ಜಾಗವಿಲ್ಲ ಎಂಬ ದಿಟ್ಟ ಸಂದೇಶ ರವಾನಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರನ್ನು ಬಿಜೆಪಿ ಒತ್ತಾಯಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಯಿಂದ 3.16 ಎಕರೆ ಜಮೀನಿನ ಪರಿತ್ಯಾಜನ ಪತ್ರ ನೋಂದಾಯಿಸಿಕೊಂಡಿದ್ದು ಮುಡಾ ಗುಮಾಸ್ತ!

- ಮುಡಾದಲ್ಲಿ ಎಸ್‌ಎಲ್‌ಎಓ, ಸ್ಪೆಷಲ್ ತಹಸೀಲ್ದಾರ್, ಇಂಜಿನಿಯರ್‌ಗಳಂತಹ ಗೆಜೆಟೆಡ್ ಅಧಿಕಾರಿಗಳಿದ್ದಾಗ್ಯೂ ಪ್ರಥಮ ದರ್ಜೆ ಸಹಾಯಕನಿಗೆ ರಿಲಿಂಕ್ವಿಷ್ ಡೀಡ್ ಮಾಡಿಕೊಳ್ಳಲು ಅಧಿಕಾರ ಕೊಟ್ಟಿದ್ದ ಆಯುಕ್ತ
- ಬಿ.ಎಂ.ಪಾರ್ವತಿ ಅವರು ಬರೆದುಕೊಟ್ಟ ಪರಿತ್ಯಾಜನ ಪತ್ರವನ್ನು ರಾಜ್ಯಪಾಲರ ಪರವಾಗಿ ಮುಡಾ ಆಯುಕ್ತರ ಪ್ರತಿನಿಧಿಯಾಗಿ ಪ್ರಥಮ ದರ್ಜೆ ಸಹಾಯಕ ಕೆ.ಸಿ.ಉಮೇಶ್ ನೋಂದಣಿ ಮಾಡಿಕೊಂಡಿದ್ದಾರೆ
- ಮುಡಾ ರೆಕಾರ್ಡ್ ಕೀಪರ್ ಆಗಿದ್ದ ತಂದೆ ಚಿಕ್ಕಣ್ಣೇಗೌಡರ ನಿಧನದಿಂದ ಅನುಕಂಪದ ಆಧಾರದಲ್ಲಿ ನೇಮಕಗೊಂಡು ಎಸ್‌ಎಲ್‌ಎಓ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಿದ್ದ ಉಮೇಶ್; ಈ ಪ್ರಕ್ರಿಯೆ ನಂತರ ಬೆಂಗಳೂರಿನ ಸಿಎಂ ಕಚೇರಿಯಲ್ಲಿ ಕೆಲಸ ಮಾಡುವ ಭಾಗ್ಯ; ಈಗ ಮತ್ತೆ ಮುಡಾಗೇ ವರ್ಗ

ಎಸ್.ಟಿ. ರವಿಕುಮಾರ್

ಮೈಸೂರು, ಸೆ.12–ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡ ಬೇಕಾಗಿ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಬಿ.ಎಂ.ಪಾರ್ವತಿ ಅವರ ಭೂಮಿಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಹೆಸರಿಗೆ ಬಿಟ್ಟುಕೊಡುವ ಸಲುವಾಗಿ 'ಪರಿತ್ಯಾಜನ ಪತ್ರ' (ರಿಲಿಂಕ್ವಿಷ್ ಡೀಡ್) ವನ್ನು ನೋಂದಾಯಿಸಿಕೊಂಡಿದ್ದು ಯಕಶ್ಚಿತ್ ಒಬ್ಬ ಪ್ರಥಮ ದರ್ಜೆ ಸಹಾಯಕ (FDA) ಎಂಬ ಸಂಗತಿ ಬೆಳಕಿಗೆ ಬಂದಿದೆ.



ಕೆ.ಸಿ.ಉಮೇಶ್

ಮುಡಾ ಕಚೇರಿಯ ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿ (SLAO Section)ಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೆ.ಸಿ.ಉಮೇಶ್ ಅವರು 2021ರ ನವೆಂಬರ್ 25ರಂದು ಮುಡಾ ಕಚೇರಿಯ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ಕಚೇರಿಯಲ್ಲಿ ಪಾರ್ವತಿ ಅವರ ಹೆಸರಿನಲ್ಲಿದ್ದ ಮೈಸೂರು ತಾಲೂಕು ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ನಂಬರ್ 464ರ 3 ಎಕರೆ 16 ಗುಂಟೆ ಖುಷ್ಕಿ ಜಮೀನನ್ನು ಪರಿತ್ಯಾಜನ ಪತ್ರದ ಮೂಲಕ ಪ್ರಾಧಿಕಾರದ ಹೆಸರಿಗೆ ವರ್ಗಾಯಿಸಿಕೊಂಡಿದ್ದು, ಅಂದು ಉಪ ನೋಂದಣಾಧಿಕಾರಿ ಕಾವ್ಯ, ರಿಲಿಂಕ್ವಿಷ್ ಡೀಡ್ ಅನ್ನು ನೋಂದಣಿ ಮಾಡಿಕೊಟ್ಟಿದ್ದಾರೆ.

ಮುಡಾದಲ್ಲಿ ಗೆಜೆಟೆಡ್ ಅಧಿಕಾರಿಗಳು ಇರಲಿಲ್ಲವೇ?: ಭೂ ಸ್ವಾಧೀನಕ್ಕೆ ಸಂಬಂಧ ಪಟ್ಟಂತೆ ಸೇಲ್ ಅಗ್ರಿಮೆಂಟ್, ಕ್ರಯ ಪತ್ರ, ಪರಿತ್ಯಾಜನ ಪತ್ರ, ಟೈಟಲ್ ಡೀಡ್ ನಂತಹ ಪ್ರಮುಖ ಆಸ್ತಿಗಳ ದಾಖಲಾತಿ ನೋಂದಣಿ ಮಾಡಲು (ಬರೆದು ಕೊಡಲು ಅಥವಾ ಪಡೆದುಕೊಳ್ಳಲು) ಗೆಜೆಟೆಡ್ ಅಧಿಕಾರಿಗಳಿಗೆ ಮಾತ್ರ ಅಧಿಕಾರವಿರುತ್ತದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಆಯುಕ್ತರು, ಕಾರ್ಯದರ್ಶಿ, ನಗರ ಯೋಜನಾ ಶಾಖೆ (TPM)ಯ ನಿರ್ದೇಶಕ, ಉಪ ನಿರ್ದೇಶಕ, ಸಹಾಯಕ ನಿರ್ದೇಶಕ, ವಿಶೇಷ ತಹಶೀಲ್ದಾರ್, ವಿಶೇಷ ಭೂ ಸ್ವಾಧೀನಾಧಿಕಾರಿ, ಸೂಪರಿಂಟೆಂಡಿಂಗ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸೇರಿದಂತೆ 30ಕ್ಕೂ ಹೆಚ್ಚು ಗೆಜೆಟೆಡ್ ಆಫೀಸರ್ ಗಳಿದ್ದರೂ, ಎಲ್ಲರನ್ನೂ ಬಿಟ್ಟು ಬಿ.ಎಂ. ಪಾರ್ವತಿ ಅವರ ಜಮೀನಿನ ಪರಿತ್ಯಾಜನ ಪತ್ರ ನೋಂದಣಿ ಮಾಡಿಸಿಕೊಳ್ಳಲು ವಿಶೇಷ ಭೂ ಸ್ವಾಧೀನಾಧಿಕಾರಿ ಕಚೇರಿಯ ಪ್ರಥಮ ದರ್ಜೆ ಸಹಾಯಕ ಕೆ.ಸಿ.ಉಮೇಶ್‌ಗೆ ಏಕೆ ಅಂದಿನ ಆಯುಕ್ತ ಡಾ. ಡಿ.ಬಿ. ನಟೇಶ್ ಅಧಿಕಾರ ಪತ್ರ (Authorization Letter) ಕೊಟ್ಟಿದ್ದರೆ ಎಂಬ ಪ್ರಶ್ನೆ ಮುಡಾ ಅಧಿಕಾರಿ ವರ್ಗವನ್ನು ಕಾಡುತ್ತಿದೆ.

ರಾಜ್ಯಪಾಲರ ಪರವಾಗಿ...: ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರ ಪರವಾಗಿ ಮುಡಾ ಆಯುಕ್ತರನ್ನು ಪ್ರತಿನಿಧಿಸುವ ಕೆ.ಸಿ.ಉಮೇಶ್ ಅವರು (ಈ ಅಭಿವ್ಯಕ್ತಿಯು ಅದರ ಪದದಲ್ಲಿನ ಉತ್ತರಾಧಿಕಾರಿಗಳನ್ನು ಹಾಗೂ ಇವರ ಕಾನೂನುಬದ್ಧ ಪ್ರತಿನಿಧಿಗಳನ್ನು ಒಳಗೊಂಡಂತೆ ಸ್ವತ್ತನ್ನು ಹಸ್ತಾಂತರಿಸಿಕೊಳ್ಳುವವರು) ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಎಡಗೈ ಹೆಬ್ಬೆಟ್ಟಿನ ಗುರುತು ಸಹಿ ಹಾಕಿ ಭಾವಚಿತ್ರ ನೀಡುವ ಮೂಲಕ ರಿಲಿಂಕ್ವಿಷ್ ಡೀಡ್ ಅನ್ನು ನೋಂದಣಿ ಮಾಡಿಸಿಕೊಂಡಿದ್ದಾರೆ.



ಮುಡಾ ಕಚೇರಿ

ಎಸ್‌ಎಲ್‌ಎಓ ಗಮನಕ್ಕೇ ಬಂದಿರಲಿಲ್ಲ!: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರು ಜಮೀನು ಹಸ್ತಾಂತರಿಸಿದ ಪರಿತ್ಯಾಜನ ಪತ್ರ ಪಡೆದುಕೊಳ್ಳಲು ತಮ್ಮ ಕಚೇರಿಯಲ್ಲೇ ಕೆಲಸ ಮಾಡುವ ಎಫ್‌ಡಿಎಗೆ ಕಮಿಷ್ನರ್ ಅಧಿಕಾರ ಪತ್ರ ನೀಡಿರುವ ವಿಷಯ ಅಂದು ಕರ್ತವ್ಯದಲ್ಲಿದ್ದ ವಿಶೇಷ ಭೂ ಸ್ವಾಧೀನಾಧಿಕಾರಿ ಹರ್ಷವರ್ಧನ ಅವರ ಗಮನಕ್ಕೇ ಬಂದಿರಲಿಲ್ಲವಂತೆ. ಕೆ.ಸಿ.ಉಮೇಶ್ ಪರಿತ್ಯಾಜನ ಪತ್ರ ಪಡೆದುಕೊಂಡ ವಿಷಯ ತಿಳಿದು ಅಚ್ಚರಿಗೊಂಡ ಮುಡಾದಲ್ಲಿನ ಗೆಜೆಟೆಡ್ ಅಧಿಕಾರಿಗಳಿಗೆ ಇಲ್ಲಿ ಏನು ನಡೆಯುತ್ತಿದೆ ಎಂದು ಅಚ್ಚರಿ, ಜೊತೆಗೆ ಒಂದು ರೀತಿಯ ಗೊಂದಲಕಾರಿ ಪರಿಸ್ಥಿತಿ.


ಸಿಎಂ ಕಚೇರಿಗೆ ವರ್ಗ: ರಿಲಿಂಕ್ವಿಷ್ ಡೀಡ್ ನೋಂದಣಿ, ನಂತರ ಬದಲಿಯಾಗಿ ಪಾರ್ವತಿ ಅವರಿಗೆ 14 ನಿವೇಶನಗಳ ಹಂಚಿಕೆ, ಕ್ರಯಪತ್ರ ನೀಡುವ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಕೆ.ಸಿ.ಉಮೇಶ್‌ರಿಗೆ ಸಿದ್ದರಾಮಯ್ಯ ಎರಡನೇ ಬಾರಿ ಮುಖ್ಯಮಂತ್ರಿಗಳಾದಾಗ ವಿಧಾನಸೌಧದ ಸಿಎಂ ಕಚೇರಿಯಲ್ಲಿ ಕೆಲಸ ಮಾಡುವ ಸದವಕಾಶ ಸಿಕ್ಕಿತ್ತು.

ಈ ಭೂಮಿಯ ವಿವಾದ ಆರಂಭವಾಗುತ್ತಿದ್ದಂತೆಯೇ ಇತ್ತೀಚೆಗೆ ಉಮೇಶ್‌ರನ್ನು ಮತ್ತೆ ಮುಡಾದ ಸೈಟ್ ಸೆಕ್ಷನ್‌ಗೆ ವರ್ಗ ಮಾಡಲಾಗಿತ್ತು. ವಾರದ ಹಿಂದಷ್ಟೇ ಅವರನ್ನು ಸಿಬ್ಬಂದಿ (ಎಸ್ಟಾಬ್ಲಿಷ್‌ಮೆಂಟ್) ಶಾಖೆಗೆ ವರ್ಗಾವಣೆ ಮಾಡಲಾಗಿದೆ.

ಅನುಕಂಪದ ಆಧಾರದಲ್ಲಿ ಕೆಲಸ: ಈ ಹಿಂದೆ ಮುಡಾ ಕಚೇರಿಯಲ್ಲಿ ರೆಕಾರ್ಡ್ ಕೀಪರ್ ಆಗಿ ಕೆಲಸ ಮಾಡುತ್ತಿದ್ದ ಚಿಕ್ಕಣ್ಣೇಗೌಡರು ಸೇವೆಯಲ್ಲಿದ್ದಾಗಲೇ ಮರಣ ಹೊಂದಿದ ಹಿನ್ನೆಲೆಯಲ್ಲಿ ಅನುಕಂಪದ ಆಧಾರದ ಮೇಲೆ ಅವರ ಪುತ್ರ ಉಮೇಶ್‌ಗೆ ಮುಡಾದಲ್ಲೇ ಕೆಲಸ ಸಿಕ್ಕಿತ್ತು. ಗೆಜೆಟೆಡ್ ಆಫೀಸರ್ ಅಲ್ಲದವರೂ ಹಿರಿಯ ಅಧಿಕಾರಿಗಳ ಕೃಪಾ ಕಟಾಕ್ಷವಿದ್ದರೆ ಎಂತಹ ಉನ್ನತ ಸ್ತರದ ಜವಾಬ್ದಾರಿಯನ್ನೂ ಗಿಟ್ಟಿಸಿಕೊಂಡು, ವಹಿಸಿದ ಕಾರ್ಯ ನಿಭಾಯಿಸಬಹುದು ಎಂಬುದಕ್ಕೆ ಬಿ.ಎಂ.ಪಾರ್ವತಿ ಅವರ ರಿಲಿಂಕ್ವಿಷ್ ಡೀಡ್ ರಿಜಿಸ್ಟ್ರೇಷನ್ ತಾಜಾ ನಿದರ್ಶನವಾಗಿದೆ.

ಸರ್ಕಾರಿ ಅತಿಥಿಗೃಹದಲ್ಲಿ ದಾಖಲೆಗಳಿಗೆ ಪಾರ್ವತಿ ಸಹಿ; ಭಾವಚಿತ್ರ ಪಡೆದ ನೋಂದಣಾಧಿಕಾರಿ!

ಮೈಸೂರು, ಸೆ.12 (ಆರ್‌ಕೆ)–ಕೆಸರೆ ಗ್ರಾಮದ ಸರ್ವೆ ನಂಬರ್ 464ರ 3.16 ಎಕರೆ ಖುಷ್ಕಿ ಜಮೀನನ್ನು ಮುಡಾಗೆ ಹಸ್ತಾಂತರಿಸಲು ಸಿದ್ಧಪಡಿಸಿದ್ದ ಪರಿತ್ಯಾಜನ ಪತ್ರ (ರಿಲಿಂಕ್ವಿಷ್ ಡೀಡ್)ಕ್ಕೆ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿ ಕಾವ್ಯ, ಮೈಸೂರಿನ ನಜರ್‌ಬಾದ್‌ನಲ್ಲಿರುವ ಸರ್ಕಾರಿ ಅತಿಥಿ ಗೃಹದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ.ಪಾರ್ವತಿ ಅವರ ಎಡಗೈ ಹೆಬ್ಬೆಟ್ಟಿನ ಗುರುತು, ಸಹಿ ಹಾಗೂ ಭಾವಚಿತ್ರ ಪಡೆದು ನೋಂದಣಿ ಪ್ರಕ್ರಿಯೆ ಪೂರೈಸಿದ್ದಾರೆ.



ನನ್ನ ಸಮಕ್ಷಮದಲ್ಲಿ ದಿನಾಂಕ 25/11/2021 ರಂದು ಅರ್ಜಿದಾರರ ಕೋರಿಕೆಯ ಮೇರೆಗೆ ಸರ್ಕಾರಿ ಅತಿಥಿ ಗೃಹ ಮಿನಿ ವಿಧಾನ ಸೌಧದ ಹತ್ತಿರ, ನಜರಬಾದ್, ಮೈಸೂರು ಇಲ್ಲಿ ಇಬ್ಬರು ಸಾಕ್ಷಿಗಳ ಸಮಕ್ಷಮದಲ್ಲಿ ಶ್ರೀಮತಿ ಬಿ.ಎಂ. ಪಾರ್ವತಿ ಕೋಂ. ಶ್ರೀ ಸಿದ್ದರಾಮಯ್ಯ ಇವರ ಎಡಗೈ ಹೆಬ್ಬೆಟ್ಟಿನ ಗುರುತು, ಸಹಿ ಹಾಗೂ ಭಾವಚಿತ್ರವನ್ನು ಪಡೆಯಲಾಯಿತು.

ಮೈ.ತಾ., ಮೈಸೂರು.

Parvathi

ಬೆಂಗಳೂರಿನ ವಿಜಯನಗರ 16ನೇ ಕ್ರಾಸ್‌ನ ಮನೆ ನಂಬರ್ 206ರ ನಿವಾಸಿ ಸಿದ್ದರಾಮಯ್ಯ ಅವರ ಧರ್ಮಪತ್ನಿ ಬಿ.ಎಂ.ಪಾರ್ವತಿ ಅವರು ಉಳಿದುಕೊಂಡಿದ್ದ ಮೈಸೂರಿನ ಸರ್ಕಾರಿ ಅತಿಥಿ ಗೃಹಕ್ಕೆ ತೆರಳಿ, ಪರಿತ್ಯಾಜನ ಪತ್ರಕ್ಕೆ ಸಹಿ, ಭಾವಚಿತ್ರ ಪಡೆಯಲಾಗಿದೆ ಎಂದು ಕಾವ್ಯ, ನೋಂದಾಯಿಸಿದ ಪತ್ರದಲ್ಲಿ ನಮೂದಿಸಿದ್ದಾರೆ.

ಕರ್ನಾಟಕ ನೋಂದಣಿ ಕಾಯ್ದೆ 1909ರ ಕಲಂ 88 ಕ್ಲಾಸ್ 1ರ ಪ್ರಕಾರ ವಯಸ್ಸಾದವರು, ಅಂಗವಿಕಲರು, ಅನಾರೋಗ್ಯದಿಂದ ಹಾಸಿಗೆ ಹಿಡಿದವರು, ಪರ್ದ ಮಹಿಳೆಯರು, ರಾಜ್ಯಪಾಲರು, ಜೈಲುವಾಸಿಗಳು, ಸರ್ಕಾರಿ ಅಧಿಕಾರಿಗಳು ಕೋರಿಕೊಂಡರೆ ವಿಶೇಷ ಪ್ರಕರಣ ಎಂದು ಪರಿಗಣಿಸಿ ಅವರು ಇರುವಲ್ಲಿಯೇ ನೋಂದಣಿ ಪ್ರಕ್ರಿಯೆ ನಡೆಸುವ ಅವಕಾಶವಿದೆ ಎಂದು ಉಪ ನೋಂದಣಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕರ್ನಾಟಕ ರಿಜಿಸ್ಟ್ರೇಷನ್ ನಿಯಮ 1965 ಸೆಕ್ಷನ್ 25(1) ಪ್ರಕಾರ ಅದಕ್ಕೆ ಸಕಾರಣ ದೃಢಪಡಿಸಿಕೊಂಡು ಹಾಗೆ ಸ್ವತ್ತುಗಳ ನೋಂದಣಿ ಮಾಡಬೇಕಾಗುತ್ತದೆ.

ಹಾಗಾದರೆ ದೈಹಿಕವಾಗಿ ಸಮರ್ಥರು, ಸಾಮಾನ್ಯ ಪ್ರಜೆಗಳು ಮನವಿ ಮಾಡಿದರೆ ಈ ರೀತಿ ನೋಂದಣಿ ಪ್ರಕ್ರಿಯೆ ಹೇಗೆ ಮಾಡಲು ಸಾಧ್ಯ? ಹಾಗಾಗಿ ಮುಖ್ಯಮಂತ್ರಿ ಪತ್ನಿಯವರ ವಿಚಾರದಲ್ಲೂ ನಿಯಮಾವಳಿ ಸ್ಪಷ್ಟ ಉಲ್ಲಂಘನೆ ಆಗಿದೆ ಎಂಬುದು ಮುಡಾ ಅಧಿಕಾರಿ ವರ್ಗದ ಅಭಿಮತವೂ ಆಗಿದೆ.

ಖಾಸಗಿ ವ್ಯಕ್ತಿ, ತಾವು ತಂಗಿರುವ ಸರ್ಕಾರಿ ಅತಿಥಿ ಗೃಹದಲ್ಲಿ ಪ್ರಭಾವ ಬಳಸಿ ಆಸ್ತಿ ನೋಂದಣಿ ಮಾಡಿಕೊಂಡರೆ ಇದೊಂದು ರೀತಿ ಅಧಿಕಾರ– ಅಧಿಕಾರಿಗಳ ದುರ್ಬಳಕೆ ಎಂದೇ ಹೇಳಬಹುದು ಎಂಬುದೂ ಅವರ ಅಭಿಪ್ರಾಯವೂ ಆಗಿದೆ.

ಚಾಮುಂಡಿಬೆಟ್ಟದ ತಪ್ಪಲಿನ ಅನಿಲ ಚಿತಾಗಾರದ ದುರಸ್ತಿ: ಸೆ.17ರವರೆಗೆ ತಾತ್ಕಾಲಿಕ ಬಂದ್

ಮೈಸೂರು, ಸೆ.12(ಎಸ್‌ಪಿಎನ್)– ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್ ಸುಡುವ ಸ್ಮಶಾನದ ಅನಿಲ ಚಿತಾಗಾರದ ತುರ್ತು ದುರಸ್ತಿ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಹಾಗಾಗಿ ಗುರುವಾರ(ಸೆ.12)ದಿಂದ ಸೆ.17ರವರೆಗೆ ತಾತ್ಕಾಲಿಕವಾಗಿ ಮುಚ್ಚಲಾಗಿದೆ. ಸಾರ್ವಜನಿಕರು ಈ ಅವಧಿಯಲ್ಲಿ ನಗರಪಾಲಿಕೆಯೊಂದಿಗೆ ಸಹಕರಿಸುವಂತೆ ಪಾಲಿಕೆ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಶಾಸಕ ನಾಗೇಂದ್ರರಿಗೆ ಸನ್ಮಾನ



ಮೈಸೂರಿನ ವಿಜಯನಗರ ವಾಟರ್ ಟ್ಯಾಂಕ್ ಬಳಿ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಾಜಿ ಶಾಸಕ ನಾಗೇಂದ್ರ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ನಗರ ಕಾರ್ಯದರ್ಶಿ ಕಿರಣ್‌ಗೌಡ, ಚಾಮರಾಜ ಕ್ಷೇತ್ರದ ಉಪಾಧ್ಯಕ್ಷ ರಾಕೇಶ್, ಬುದ್ಧ ಪ್ರವೀಣ್, ಉಮೇಶ್, ವಿನೀತ್ ಮಧು, ಅಶೋಕ ಇತರರಿದ್ದರು.

ಕುರಿ ಮೇಯಿಸುತ್ತಿದ್ದವರ ಮೇಲೆ ಚಿರತೆ ದಾಳಿ


ಮೈಸೂರು,ಸೆ.12(ಎಂಟಿವೈ)–ಕುರಿ ಮೇಯಿಸುತ್ತಿದ್ದ ವ್ಯಕ್ತಿಯೊಬ್ಬರ ಮೇಲೆ ಚಿರತೆ ದಾಳಿ ನಡೆಸಿ ಗಾಯಗೊಳಿಸಿರುವ ಘಟನೆ ಮೈಸೂರು ತಾಲೂಕಿನ ಮೂಡಲಹುಂಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮಾರೇಗೌಡ(62) ಎಂಬುವರ ಮೇಲೆ ಗುರುವಾರ ಸಂಜೆ ಕಾಲುವೆ ಏರಿ ಬಳಿ ಕುರಿ ಮೇಯಿಸಿಕೊಂಡು ಬರುವಾಗ ಮರಿಯೊಂದಿಗೆ ಬರುತ್ತಿದ್ದ ಚಿರತೆ ಏಕಾಏಕಿ ದಾಳಿ ಮಾಡಿದೆ. ಇದರಿಂದ ಮಾರೇಗೌಡರ ತಲೆ ಹಾಗೂ ಕಿವಿಗೆ ಗಾಯವಾಗಿದೆ. ದಾಳಿ ಬಳಿಕ ಚಿರತೆ ಒಂದು ಕುರಿಯನ್ನು ಹೊತ್ತೊಯ್ದಿದೆ. ಘಟನೆ ನಂತರ ಗಾಬರಿಗೊಂಡ ಮಾರೇಗೌಡ ಕಿರುಚಿಕೊಂಡಿದ್ದಾರೆ. ಸುತ್ತಮುತ್ತಲಿನ ತೋಟ, ಹೊಲದಲ್ಲಿದ್ದ ಜನ ದಾವಿಸಿ ಬಂದು, ಗಾಯಾಳುವಿಗೆ ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ.ಘಟನೆಯಿಂದ ಗ್ರಾಮಸ್ಥರು ಆತಂಕಗೊಂಡಿದ್ದು, ಚಿರತೆ ಸೆರೆಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ಇಂದು ಚಿರತೆ ದಾಳಿ ನಡೆಸಿದ ಸ್ಥಳದಿಂದ ಸ್ವಲ್ಪ ದೂರದಲ್ಲಿಯೇ ಕಳೆದ ಎರಡು ತಿಂಗಳ ಹಿಂದಷ್ಟೇ ಹುಲಿ ಕಾಣಿಸಿಕೊಂಡಿತ್ತು. ಇದೀಗ ಚಿರತೆ ದಾಳಿ ಮಾಡಿರುವುದು ಆತಂಕ ಇನ್ನಷ್ಟು ಹೆಚ್ಚಿಸಿದೆ.



ಯುಪಿಎಸ್‌ಸಿ ಮುಖ್ಯಪರೀಕ್ಷೆ ಹಿನ್ನೆಲೆ: ಪಿಎಸ್‌ಐ ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ಸೆ.12– ರಾಜ್ಯ ಸರ್ಕಾರದಲ್ಲಿ ಖಾಲಿಯಿದ್ದ 402 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಸೆ.22ರ ಬದಲಾಗಿ ಸೆ.28ರ ಶನಿವಾರದಂದು ನಡೆಸಲು ತೀರ್ಮಾನಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ಈ ಕುರಿತು ಮಾಧ್ಯಮಗಳೊಂದಿಗೆ ಗುರುವಾರ ಮಾತನಾಡಿದ ಅವರು, ರಾಜ್ಯದ ನೂರಕ್ಕೂ ಹೆಚ್ಚು ಆಕಾಂಕ್ಷಿಗಳು ಯುಪಿಎಸ್‌ಸಿ ಪ್ರಿಲಿಮ್ಸ್ ಪರೀಕ್ಷೆ ಬರೆದು, ಮುಖ್ಯ ಪರೀಕ್ಷೆಗೆ ಅರ್ಹತೆ ಹೊಂದಿದ್ದಾರೆ. ಮುಖ್ಯ ಪರೀಕ್ಷೆಗೆ ಮತ್ತು ಪಿಎಸ್‌ಐ ಪರೀಕ್ಷೆ ಸೆ.22 ರಂದು ನಿಗದಿಯಾಗಿರುವುದರಿಂದ ಎರಡು ಪರೀಕ್ಷೆ ಬರೆಯಲು ಆಗುವುದಿಲ್ಲ. ಯಾವುದಾದರು ಒಂದು ಪರೀಕ್ಷೆ ಅವಕಾಶ ಕೈ ತಪ್ಪುತ್ತದೆ. ಹೀಗಾಗಿ ಪಿಎಸ್‌ಐ ಪರೀಕ್ಷೆ ಮುಂದೂಡುವಂತೆ ಆಕಾಂಕ್ಷಿಗಳು ಮನವಿ ಸಲ್ಲಿಸಿದ್ದರು. ಇದರ ಜೊತೆಗೆ ವಿಪಕ್ಷವಾದ ಬಿಜೆಪಿಯ ನಾಯಕರ ನಿಯೋಗವು ಮನವಿ ನೀಡಿತ್ತು. ಈ ಹಿನ್ನೆಲೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅಧಿಕಾರಿಗಳೊಂದಿಗೆ ಚರ್ಚಿಸಿದಾಗ ಡಿಸೆಂಬರ್‌ವರೆಗೆ ಪರೀಕ್ಷೆ ನಡೆಸಲು ದಿನ ಖಾಲಿ ಇಲ್ಲ ಎಂದು ತಿಳಿಸಿದ್ದರು.



ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರೊಂದಿಗೆ ಮಾತನಾಡಿ, ಶನಿವಾರದಂದು ಒಂದು ದಿನ ಪರೀಕ್ಷೆ ನಡೆಸಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದ್ದೆವು. ಪರೀಕ್ಷೆ ನಡೆಸಲು ಶಿಕ್ಷಕರು ಬೇಕಾಗುತ್ತಾರೆ ಎಂದು ಮನವಿಯನ್ನೂ ಮಾಡಲಾಗಿತ್ತು. ಎಲ್ಲ ಆಕಾಂಕ್ಷಿಗಳ ಮನವಿಗೆ ಮನ್ನಣೆ ಕೊಟ್ಟು, ಅನುಕೂಲಕರವಾಗುವ ನಿಟ್ಟಿನಲ್ಲಿ ಸೆ.28ರಂದು ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ಎಲ್ಲ ಪಿಎಸ್‌ಐ ಅಭ್ಯರ್ಥಿಗಳ ಒಳಿತಿನಿಂದ ಸರ್ಕಾರದಿಂದ ಈ ತೀರ್ಮಾನ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಪೇದೆಗಳ ನೇಮಕಾತಿ ವಯೋಮಿತಿ: ರಾಜ್ಯದಲ್ಲಿ ಪೊಲೀಸ್ ಪೇದೆ ನೇಮಕಾತಿಗೆ ವಯೋಮಿತಿ ಹೆಚ್ಚಳದ ಕುರಿತು ಬೇರೆ ರಾಜ್ಯಗಳಿಂದ ಮಾಹಿತಿ ಕಲೆ ಹಾಕಿದ್ದೇವೆ. ಇಲಾಖೆಯ ಉನ್ನತ ಅಧಿಕಾರಿಗಳ ಜೊತೆ ಚರ್ಚಿಸಿ, ವರದಿಯನ್ನು ಗಮನಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು. ಮತ್ತೊಂದೆಡೆ ರಾಜ್ಯದಲ್ಲಿ ಒಟ್ಟು 1000ಕ್ಕೂ ಅಧಿಕ ಪಿಎಸ್‌ಐ ಹುದ್ದೆಗಳು ಖಾಲಿಯಿವೆ. ಕಳೆದ ನಾಲ್ಕು ವರ್ಷಗಳಿಂದ ಪಿಎಸ್‌ಐ ನೇಮಕಾತಿ ನಡೆದಿಲ್ಲ. ಸಿಂಧುತ್ವ, ದಾಖಲಾತಿ ಪರಿಶೀಲನೆ, ತರಬೇತಿ ಪಡೆದು ಇಲಾಖೆಗೆ ಸೇರಲು ಒಂದು ವರ್ಷ ಬೇಕಾಗುತ್ತದೆ. ಎರಡು ವರ್ಷ ಪ್ರೊಬೆಷನರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ, 402 ಪಿಎಸ್‌ಐ ಹುದ್ದೆಗಳಿಗೆ ಆದಷ್ಟು ಬೇಗ ಪರೀಕ್ಷೆ ನಡೆಸಲು ಮುಂದಾಗಿದ್ದೇವೆ. ಉಳಿದಂತೆ ಶೀಘ್ರವೇ ಪುನಃ 600 ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ನಾಗಮಂಗಲ ಗಲಭೆ ಪ್ರಕರಣ; ಮೈಸೂರಲ್ಲೂ ಎಚ್ಚರಿಕಾ ಕ್ರಮ


ಮೈಸೂರು, ಸೆ.12– ನಾಗಮಂಗಲದಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಘರ್ಷಣೆ ನಡೆದ ಹಿನ್ನೆಲೆಯಲ್ಲಿ ಮೈಸೂರಿನಲ್ಲೂ ಮುಂಜಾಗ್ರತಾ ಕ್ರಮವಾಗಿ ಮಂಗಳವಾರ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ನಾಗಮಂಗಲದಲ್ಲಿ ಘರ್ಷಣೆಯಿಂದಾಗಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಇದೇ ಸಂದರ್ಭದಲ್ಲಿ ಕಿಡಿಗೇಡಿಗಳು ಪ್ರಚೋದಾನಾತ್ಮಕ ಸಂದೇಶ ಹರಿಬಿಟ್ಟು, ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಸಾಧ್ಯತೆ ಇರುತ್ತದೆ. ಅಲ್ಲದೆ ಮೈಸೂರಿನಲ್ಲಿ ನಿತ್ಯ ಒಂದಿಲ್ಲೊಂದು ಕಡೆ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆಗಳು ನಡೆಯುತ್ತಿವೆ. ಈ ವೇಳೆ ಯಾರಾದರೂ ಕುಚೇಷ್ಟೆ ಮಾಡಿದರೂ ಗಲಾಟೆಯಾಗಬಹುದು. ಅಲ್ಲದೆ ಮುಡಾ ನಿವೇಶನ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಕರಣದ ವಿಚಾರಣೆ ಇದ್ದ ಕಾರಣ ಮುಂಜಾಗ್ರತಾ ಕ್ರಮವಾಗಿ ಮುಡಾ ಕಚೇರಿ ಹಾಗೂ ಹೆಚ್ಚು ಜನಸಂದಣಿಯುಳ್ಳ ಪ್ರದೇಶಗಳಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಪ್ರಮುಖ, ವೃತ್ತ, ಜಂಕ್ಷನ್‌ಗಳಲ್ಲಿ ರಿಸರ್ವ್ ಪೊಲೀಸ್ ಪಡೆಗಳನ್ನು ನಿಯೋಜನೆ ಮಾಡಲಾಗಿತ್ತು.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಅಧಿಕ ಜನಸಂದಣಿಯುಳ್ಳ ಪ್ರದೇಶಗಳಲ್ಲಿ ಹೆಚ್ಚುವರಿ ಸಿಬ್ಬಂದಿ, ಪ್ರಮುಖ ವೃತ್ತ, ಜಂಕ್ಷನ್‌ಗಳಲ್ಲಿ ಕೆಎಸ್‌ಆರ್‌ಪಿ, ಸಿಎಆರ್, ಮೌಂಟೆಡ್, ಕಮಾಂಡೋ ಪಡೆಗಳನ್ನು ನಿಯೋಜಿಸಲಾಗಿತ್ತು. ಹಾಗೆಯೇ ಸಾಮಾಜಿಕ ಜಾಲತಾಣಗಳ ಮೇಲೂ ತೀವ್ರ ನಿಗಾ ಇಡಲಾಗಿದೆ ಎಂದು ತಿಳಿಸಿದ್ದಾರೆ.

ಡಾ.ಶಿವರಾಮ ಕಾರಂತ ಹುಟ್ಟೂರ ಪುರಸ್ಕಾರಕ್ಕೆ ಪ್ರೊ.ಕೃಷ್ಣೇಗೌಡ ಆಯ್ಕೆ

ಮೈಸೂರು, ಸೆ.12(ಎಂಕೆ)– ಉಡುಪಿ ಜಿಲ್ಲೆ ಕೋಟತಟ್ಟು ಗ್ರಾಮ ಪಂಚಾಯತ್, ಡಾ.ಕಾರಂತ ಹುಟ್ಟೂರ ಪ್ರತಿಷ್ಠಾನ ಇವರ ಸಹಭಾಗಿತ್ವದಲ್ಲಿ ಕೊಡಮಾಡುವ 2024ನೇ ಸಾಲಿನ ಡಾ.ಶಿವರಾಮ ಕಾರಂತ ಹುಟ್ಟೂರ ಪುರಸ್ಕಾರಕ್ಕೆ ಮೈಸೂರಿನ ವಾಗ್ಮಿ, ಸಾಹಿತಿ ಪ್ರೊ.ಕೃಷ್ಣೇಗೌಡ ಆಯ್ಕೆಯಾಗಿದ್ದಾರೆ.



ಕನ್ನಡ ಮಾತುಗಾರಿಕೆಗೆ ಹೊಸ ನೆಲೆಕಟ್ಟು ಮತ್ತು ಚೌಕಟ್ಟು ನೀಡಿರುವ ಪ್ರೊ.ಕೃಷ್ಣೇಗೌಡ ಅವರ ಅಮೂಲ್ಯ ಸೇವೆಯನ್ನು ಪರಿಗಣಿಸಿ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದ್ದು, ಅ.10 ರಂದು ಡಾ.ಕೋಟ ಶಿವರಾಮ ಕಾರಂತರ ಜನ್ಮ ದಿನದಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಡಾ.ಶಿವರಾಮ ಕಾರಂತ ಪ್ರತಿಷ್ಠಾನ(ರಿ) ಕೋಟದ ಕಾರ್ಯಾಧ್ಯಕ್ಷ ಆನಂದ ಸಿ. ಕುಂದರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಳೆದ 19 ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಇದುವರೆಗೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ನ್ಯಾ.ವೆಂಕಟಾಚಲ, ಕೆ.ರಾಮಕೃಷ್ಣ ಹಂದೆ, ಪತ್ರಕರ್ತ ರವಿ ಬೆಳಗೆರೆ, ಚಿತ್ರ ನಿರ್ದೇಶಕ ಗಿರೀಶ ಕಾಸರವಳ್ಳಿ, ನಟಿ ಜಯಶ್ರೀ, ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮೋಹನ ಆಳ್ವ, ಸಾಲು ಮರದ ತಿಮ್ಮಕ್ಕ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಜಯಂತ ಕಾಯ್ಕಿಣಿ, ಸದಾನಂದ ಸುವರ್ಣ, ಡಾ.ಬಿ.ಎಂ ಹೆಗ್ಡೆ, ಪ್ರಕಾಶ್ ರೈ, ಶ್ರೀಪಡ್ರೆ, ಕವಿತಾ ಮಿಶ್ರ, ನಾಡೋಜ ಡಾ.ಎಸ್.ಎಲ್. ಭೈರಪ್ಪ, ಗಿರೀಶ್ ಭಾರಧ್ವಾಜ್, ನಟ ರಮೇಶ್ ಅರವಿಂದ್, ಡಾ.ವಿದ್ಯಾಭೂಷಣ್ ಅವರು ಭಾಜನರಾಗಿದ್ದರು.

ಕದಸಂಸ ಹುಣಸೂರು ತಾಲೂಕು ಅಧ್ಯಕ್ಷರಾಗಿ ಸಿ.ಶ್ರೀನಿವಾಸ್ ನೇಮಕ

ಮೈಸೂರು, ಸೆ.12– ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಅಧ್ಯಕ್ಷರನ್ನಾಗಿ ಕರಿಮುದ್ದನಹಳ್ಳಿಯ ಸಿ. ಶ್ರೀನಿವಾಸ್ ಅವರನ್ನು ನೇಮಕ ಮಾಡಲಾಗಿದೆ ಎಂದು ಕದಸಂಸ ಜಿಲ್ಲಾಧ್ಯಕ್ಷ ಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ದೇಶ - ವಿದೇಶ

ಅನುಚಿತ ಸಂಬಂಧ; ಭಾರತೀಯ ಮೂಲದ ವಕೀಲೆ ವಜಾ

ನ್ಯೂಯಾರ್ಕ್: ಕೆಲಸ ಮಾಡುವ ಸ್ಥಳದಲ್ಲಿ ಸಿಇಒ ಜೊತೆಗೆ ಅನುಚಿತ ಸಂಬಂಧ ಹೊಂದಿದ್ದ ಆರೋಪದ ಮೇಲೆ ಭಾರತೀಯ ಮೂಲದ ವಕೀಲರೊಬ್ಬರನ್ನು ಅಮೆರಿಕದ ಕಂಪನಿ ಕೆಲಸದಿಂದ ವಜಾ ಮಾಡಿದೆ. ನಾರ್ಫೋಕ್ ಸದರ್ನ್ ಕಾರ್ಪೊರೇಷನ್ ಸಂಸ್ಥೆಯಲ್ಲಿ ಮುಖ್ಯ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ನಬನೀತಾ ನಾಗ್ ಎಂಬುವರನ್ನು ಸಂಸ್ಥೆ ಕೆಲಸದಿಂದ ಕಿತ್ತು ಹಾಕಿದೆ. ಅಷ್ಟೇ ಅಲ್ಲ, ಈ ಸಂಬಂಧ ಸೂಕ್ತ ತನಿಖೆ ಕೈಗೊಂಡ ಬಳಿಕವೇ ತೀರ್ಮಾನ ಕೈಗೊಂಡಿರುವುದಾಗಿ ಮಾಹಿತಿ ನೀಡಿದೆ. ಕೆಲಸದಿಂದ ವಜಾಗೊಂಡ ನಬನೀತಾ ನಾಗ್ ಅವರು ತಮ್ಮ ಸಂಸ್ಥೆಯ ಮುಖ್ಯಸ್ಥರಾದ ಸಿಇಒ ಅಲನ್ ಶಾ ಅವರ ಜೊತೆಗೆ ಸಮ್ಮತದ ಸಂಬಂಧ ಹೊಂದಿದ್ದು ದೃಢಪಟ್ಟ ಹಿನ್ನೆಲೆಯಲ್ಲಿ ಅಲನ್ ಶಾ ಅವರಿಗೂ ಕೆಲಸದಿಂದ ಗೇಟ್ ಪಾಸ್ ಕೊಡಲಾಗಿದೆ.



ಇವರಿಬ್ಬರ ನಡುವಣ ಸಂಬಂಧ ಒಮ್ಮತದಿಂದ ಏರ್ಪಟ್ಟಿತ್ತಾದರೂ ಸಂಸ್ಥೆಯ ನಿಯಮಾವಳಿಗಳಿಗೆ ವಿರುದ್ಧವಾಗಿದ್ದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಂಡಿರುವುದಾಗಿ ನಾರ್ಫೋಕ್ ಸದರ್ನ್ ಕಾರ್ಪೊರೇಷನ್ ತನ್ನ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಶಾಲಾ ಶಿಕ್ಷಕಿಯ ಮಗಳಿಗೆ 60 ಲಕ್ಷದ ಗೂಗಲ್ ಬಂಪರ್ ಪ್ಯಾಕೇಜ್

ಬಿಹಾರ: ಖಾಸಗಿ ಶಿಕ್ಷಕಿಯ ಮಗಳಿಗೆ ಗೂಗಲ್‌ನಿಂದ 60 ಲಕ್ಷದ ಬಂಪರ್ ಪ್ಯಾಕೇಜ್ ದೊರೆತಿದ್ದು, ಹೆಣ್ಣು ಹುಟ್ಟಿದ್ದೇ ಒಳ್ಳೇದಾಯ್ತು ಎಂದು ಆಕೆಯ ಪಾಲಕರು ಹರ್ಷ ವ್ಯಕ್ತಪಡಿಸಿದ್ದಾರೆ. ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದ ತಂದೆ, ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿರುವ ತಾಯಿಯ ಮಗಳು ಅಲಂಕೃತಾ ಮಿಶ್ರಾ ಗೂಗಲ್ ಕಂಪನಿಯಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದಾರೆ. ಸದ್ಯ ಇಡೀ ಊರಿಗೆ ಊರೇ ಈ ಯುವತಿಯ ಸಾಧನೆಗೆ ಹರ್ಷ ವ್ಯಕ್ತಪಡಿಸುತ್ತಿದೆ.



ಬಿಹಾರದ ಭಾಗಲ್ಪುರದ ನವಾಗಚಿಯಾ ನಿವಾಸಿ ಅಲಂಕೃತ ಮಿಶ್ರಾ ಈ ಮೂಲಕ ತಮ್ಮ ಕುಟುಂಬ ಮತ್ತು ಪ್ರದೇಶದ ಹೆಸರನ್ನು ಬೆಳಗಿಸಿದ್ದಾರೆ. ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಅವರಿಗೆ ಗೂಗಲ್ 60 ಲಕ್ಷ ರೂ. ಬೃಹತ್ ಪ್ಯಾಕೇಜ್ ನೀಡಿದೆ. ಈ ಯಶಸ್ಸಿನ ಬಗ್ಗೆ ಅಲಂಕೃತಾ ಅವರ ತಂದೆ ಶಂಕರ್ ಮಿಶ್ರಾ, ಇದು ಮಗಳ ಪರಿಶ್ರಮದ ಫಲವಾಗಿದೆ. ಇದು ನನಗೆ ಹೆಮ್ಮೆಯ ಸಂಗತಿಯಾಗಿದೆ ಎಂದರು. ಗಂಡು–ಹೆಣ್ಣು ಎಂಬ ಭೇದ ಇರಬಾರದು, ಗಂಡು ಮಕ್ಕಳಂತೆ ಹೆಣ್ಣು ಮಕ್ಕಳಿಗೆ ಅವಕಾಶ ನೀಡಿ ಪ್ರೋತ್ಸಾಹಿಸಬೇಕು ಎಂದರು. ಅಲಂಕೃತಾ ವಿಪ್ರೋ, ಸ್ಯಾಮ್ ಸಂಗ್‌ನಂತಹ ಹಲವಾರು ಕಂಪನಿಗಳಲ್ಲಿ ಅವರು ಈ ಹಿಂದೆ ಕೆಲಸ ಮಾಡಿದ್ದಾರೆ.

ಒಂದೇ ದಿನ 23 ಹಲ್ಲು ಕಿತ್ತ ವೈದ್ಯ; ನೋವಿನಿಂದ ರೋಗಿ ಸಾವು!

ಚೀನಾ: ಹುಳುಕು ಹಲ್ಲಿನ ಚಿಕಿತ್ಸೆಗೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿ ಏಕಾಏಕಿ ಸಾವನ್ನಪ್ಪಿರುವ ಘಟನೆ ಪೂರ್ವ ಚೀನಾದ ಝುಜಿಯಾಂಗ್ ಪ್ರಾಂತ್ಯದ ಜಿನ್ಹುವಾದಲ್ಲಿ ನಡೆದಿದೆ. ಹಲ್ಲಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದ ವ್ಯಕ್ತಿಗೆ ದಂತ ವೈದ್ಯರು ದೋಷಮುಕ್ತ ಹಲ್ಲು ತೆಗೆದು ಹೊಸ ಹಲ್ಲು ಅಳವಡಿಸುವುದಾಗಿ ಹೇಳಿದ್ದರು. ಅದರಂತೆ ವೈದ್ಯರು ಒಂದೇ ದಿನ 23 ಹಲ್ಲು ಕಿತ್ತಿದ್ದಾರೆ. ಇದೀಗ ಹಲ್ಲು ಕಿತ್ತ 13 ದಿನಗಳ ಬಳಿಕ ವ್ಯಕ್ತಿ ಸಾವನ್ನಪ್ಪಿದ್ದು, ತೀವ್ರ ರಕ್ತಸ್ರಾವ ಹಾಗೂ ನೋವಿನಿಂದಾಗಿ ಸಾವನ್ನಪ್ಪಿದ್ದಾರೆ ಎಂದು ಮೃತನ ಮಗಳು ಆರೋಪಿಸಿದ್ದಾಳೆ. ಘಟನೆಯ ಕುರಿತು ಯುವತಿ ಸೋಶಿಯಲ್ ಮೀಡಿಯಾಗಳಲ್ಲಿ ಹಂಚಿಕೊಂಡಿದ್ದು, ಸದ್ಯ ಪೋಸ್ಟ್ ಎಲ್ಲೆಡೆ ವೈರಲ್ ಆಗಿದೆ. 'ನನ್ನ ತಂದೆ ಹುವಾಂಗ್ ಆಗಸ್ಟ್ 14 ರಂದು ಯೋಂಗ್‌ಕಾಂಗ್ ಡ್ಯೂ ಡೆಂಟಲ್ ಆಸ್ಪತ್ರೆಯಲ್ಲಿ ದಂತ ಚಿಕಿತ್ಸೆಗೆ ಒಳಗಾಗಿದ್ದರು. ದಂತ ವೈದ್ಯರು ತಂದೆಯ 23 ಹಲ್ಲುಗಳನ್ನು ಹೊರತೆಗೆದು, ಆ ದಿನವೇ 12 ಹೊಸ ಹಲ್ಲುಗಳನ್ನು ಅಳವಡಿಸಿದರು. ಆದರೆ ಚಿಕಿತ್ಸೆಯ ನಂತರ, ತಂದೆ ತುಂಬಾ ನೋವಿನಿಂದ ಬಳಲುತ್ತಿದ್ದರು. ಇದೀಗ ಹದಿಮೂರು ದಿನಗಳ ನಂತರ ಅವರು ಹಠಾತ್ ಹೃದಯಾಘಾತದಿಂದ ನಿಧನರಾದರು' ಎಂದು ಯುವತಿ ಹೇಳಿಕೊಂಡಿದ್ದಾಳೆ.



ತರಬೇತಿ ಸೇನಾಧಿಕಾರಿಗಳ ಮೇಲೆ ದಾಳಿ; ಗರ್ಲ್ ಫ್ರೆಂಡ್ ಮೇಲೆ ಸಾಮೂಹಿಕ ಅತ್ಯಾಚಾರ

ಭೋಪಾಲ್: ಪ್ರವಾಸಕ್ಕೆಂದು ಬಂದಿದ್ದ ಇಬ್ಬರು ತರಬೇತಿ ನಿರತ ಸೇನಾಧಿಕಾರಿಗಳ ಮೇಲೆ ಡಕಾಯಿತರು ದಾಳಿ ನಡೆಸಿದ್ದು ಮಾತ್ರವಲ್ಲದೇ ಜೊತೆಗಿದ್ದ ಅವರ ಸ್ನೇಹಿತೆಯರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವ ಆಘಾತಕಾರಿ ಘಟನೆ ಮಧ್ಯ ಪ್ರದೇಶದಲ್ಲಿ ನಡೆದಿದೆ. ಮಧ್ಯಪ್ರದೇಶದ ಇಂಧೋರ್ ಜಿಲ್ಲೆಯಲ್ಲಿ ಬುಧವಾರ ಈ ಘಟನೆ ನಡೆದಿದ್ದು, ಪೊಲೀಸ್ ಮೂಲಗಳ ಪ್ರಕಾರ, ಬುಧವಾರ ನಸುಕಿನ 2 ಗಂಟೆಯ ವೇಳೆಗೆ ಏಳು ಮಂದಿ ಅಪರಿಚಿತರು ಮಹೌ– ಮಂಡಲೇಶ್ವರ ರಸ್ತೆಯ ಈ ಪಿಕ್ನಿಕ್ ತಾಣಕ್ಕೆ ಬಂದು, ಅಲ್ಲಿ ಕಾರಿನಲ್ಲಿ ಕುಳಿತಿದ್ದ ಅಧಿಕಾರಿ ಹಾಗೂ ಯುವತಿಯನ್ನು ಥಳಿಸಿದರು. ಈ ವೇಳೆ ಓರ್ವ ಯುವತಿಯ ಮೇಲೆ ದುಷ್ಕರ್ಮಿಗಳು ಗನ್ ತೋರಿಸಿ ಬೆದರಿಸಿ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಬಳಿಕ ಇಬ್ಬರು ಯುವತಿಯರನ್ನು ವಶದಲ್ಲಿಟ್ಟುಕೊಂಡು ಹಣ ತರಲು ಅಧಿಕಾರಿಗಳಿಗೆ ಬೆದರಿಕೆ ಹಾಕಿದ್ದಾರೆ. ಕೂಡಲೇ ಮತ್ತೋರ್ವ ಅಧಿಕಾರಿ ಸಮೀಪದಲ್ಲೇ ಇದ್ದ ಸೇನಾ ಕ್ಯಾಂಪ್‌ಗೆ ಓಡಿ ಬಂದು ಮಾಹಿತಿ ತಿಳಿಸಿದ್ದಾರೆ. ವಿಚಾರ ತಿಳಿಯುತ್ತಲೇ ಸ್ಥಳಕ್ಕೆ ಪೊಲೀಸರು ದೌಡಾಯಿಸಿದ್ದು, ಪೊಲೀಸರನ್ನು ನೋಡಿದ ತಕ್ಷಣ ಕಿಡಿಗೇಡಿಗಳು ಪರಾರಿಯಾಗಿದ್ದಾರೆ.

ಪಾಕಿಸ್ತಾನದಲ್ಲಿ ಭಾರಿ ತೈಲ ನಿಕ್ಷೇಪ ಪತ್ತೆ

ಇಸ್ಲಾಮಾಬಾದ್: ಪಾಕಿಸ್ತಾನ ವ್ಯಾಪ್ತಿಯ ಸಮುದ್ರದಲ್ಲಿ ಅಪಾರ ಪ್ರಮಾಣದ ಪೆಟ್ರೋಲಿಯಂ ತೈಲ ಹಾಗೂ ಅನಿಲ ನಿಕ್ಷೇಪ ಪತ್ತೆಯಾಗಿದೆ. ಪಾಕಿಸ್ತಾನದ ಡಾನ್ ನ್ಯೂಸ್‌ಗೆ ಈ ಕುರಿತು ಪ್ರತಿಕ್ರಿಯೆ ನೀಡಿರುವ ಪಾಕಿಸ್ತಾನ ಸೇನೆಯ ಹಿರಿಯ ಭದ್ರತಾ ಅಧಿಕಾರಿಯೊಬ್ಬರು, ತಮ್ಮ ದೇಶದಲ್ಲಿ ಸಿಕ್ಕಿರುವ ಈ ಪೆಟ್ರೋಲಿಯಂ ನಿಕ್ಷೇಪವು ದೇಶದ ಭಾಗ್ಯವನ್ನೇ ಬದಲಿಸಬಲ್ಲದು ಎಂದು ಹೇಳಿಕೊಂಡಿದ್ದಾರೆ. ಪಾಕಿಸ್ತಾನ ತನ್ನ ಮಿತ್ರ ರಾಷ್ಟ್ರಗಳ ಜೊತೆ ಮೂರು ವರ್ಷಗಳ ಕಾಲ ನಡೆಸಿದ ಸಮೀಕ್ಷೆ ವೇಳೆ ಈ ನಿಕ್ಷೇಪ ಪತ್ತೆಯಾಗಿದೆ. ವೆನೆಜುವೆಲಾ, ಸೌದಿ ಅರೇಬಿಯಾ, ಇರಾನ್, ಕೆನಡಾ ಹಾಗೂ ಇರಾಕ್ ದೇಶಗಳಲ್ಲಿ ಭಾರಿ ಪ್ರಮಾಣದ ತೈಲ ನಿಕ್ಷೇಪಗಳಿವೆ. ಅಮೆರಿಕದಲ್ಲೂ ಪೆಟ್ರೋಲಿಯಂ ತೈಲವಿದೆ. ಆದರೆ ಅಮೆರಿಕ ತನ್ನ ಗಣಿಗಳಲ್ಲಿ ತೈಲ ಉತ್ಪಾದನೆ ಆರಂಭಿಸದೆ ಅದನ್ನು ಕಾಯ್ದಿರಿಸಿದೆ. ಇದೀಗ ಪಾಕಿಸ್ತಾನದಲ್ಲಿ ಸಿಕ್ಕಿರುವ ತೈಲ ನಿಕ್ಷೇಪ, ವಿಶ್ವದಲ್ಲೇ 4ನೇ ಅತಿ ದೊಡ್ಡ ಗಣಿ ಎಂದು ಬಣ್ಣಿಸಲಾಗಿದ್ದು, ಇಲ್ಲಿ ತೈಲ ಉತ್ಪಾದನೆ ಆರಂಭವಾದರೆ ಪಾಕಿಸ್ತಾನದ ಆರ್ಥಿಕತೆ ಸುಧಾರಿಸುವ ಆಶಯ ಇದೆ. ಏಕೆಂದರೆ ಪಾಕಿಸ್ತಾನ ಪೆಟ್ರೋಲಿಯಂ ಇಂಧನಕ್ಕಾಗಿಯೇ ಸಾಕಷ್ಟು ವಿದೇಶಿ ವಿನಿಮಯ ವೆಚ್ಚ ಮಾಡುತ್ತದೆ.



ಪ್ರಜಾಪ್ರಭುತ್ವ ದಿನಾಚರಣೆಯ ಮಾನವ ಸರಪಳಿಯಲ್ಲಿ ಭಾಗವಹಿಸುವವರ

ಸುರಕ್ಷತೆಗೆ ಪೊಲೀಸ್ ಸಿಬ್ಬಂದಿ ನಿಯೋಜನೆ

ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾಹಿತಿ



ಮಡಿಕೇರಿ ಜಿಪಂ ಕಚೇರಿಯಲ್ಲಿ ನಡೆದ ಮಾನವ ಸರಪಳಿ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿದರು.

ಮಡಿಕೇರಿ, ಸೆ12–ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಸೆ.15ರಂದು ಜಿಲ್ಲೆಯಾದ್ಯಂತ ಏಕಕಾಲದಲ್ಲಿ ನಡೆಯುವ ಮಾನವ ಸರಪಳಿಯಲ್ಲಿ ಭಾಗವಹಿಸುವವರ ಸುರಕ್ಷತೆಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುವುದು ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಮಾನವ ಸರಪಳಿ ರಚಿಸುವ ಸಂಬಂಧ ಶಾಲಾ–ಕಾಲೇಜಿನ ಮುಖ್ಯಸ್ಥರು, ಅಧಿಕಾರಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳ 2ನೇ ಸುತ್ತಿನ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಂಪಾಜೆಯಿಂದ ಶಿರಂಗಾಲ ಬಳಿಯ ಗಡಿಪ್ರದೇಶದವರೆಗೆ ಸುಮಾರು 77 ಕಿಮೀ ಮಾನವ ಸರಪಳಿ, ರಿಲೇ ನಡೆಯಲಿದೆ. ಪ್ರತಿ 100 ಮೀ.ಗೆ ಒಬ್ಬರಂತೆ ವಿಭಾಗಾಧಿಕಾರಿ, ಪ್ರತಿ ಒಂದು ಕಿ.ಮೀ.ಗೆ ಒಬ್ಬರಂತೆ ಪ್ರದೇಶಾಧಿಕಾರಿ, 3 ರಿಂದ 5 ಕಿ.ಮೀವರೆಗೆ ಒಬ್ಬರಂತೆ ತಾಲೂಕು ಮಟ್ಟದ ಅಧಿಕಾರಿ ಜೊತೆಗೆ ಮಾನವ ಸರಪಳಿಯಲ್ಲಿ ಭಾಗವಹಿಸುವವರ ಸುರಕ್ಷತೆಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುವುದು ಎಂದರು.

ಸೆ.15ರಂದು ಬೆಳಗ್ಗೆ 9 ರಿಂದ 10 ಗಂಟೆವರೆಗೆ ಮಾನವ ಸರಪಳಿ ಆಯೋಜಿಸಬೇಕಿದೆ. ಆ ನಿಟ್ಟಿನಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಅಧಿಕಾರಿಗಳು ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡು ಕಾರ್ಯಕ್ರಮ ಯಶಸ್ಸಿಗೆ ಸಹಕರಿಸಬೇಕು. ಸರ್ಕಾರ ಬೀದರ್ ಜಿಲ್ಲೆಯ ಬಸವ ಕಲ್ಯಾಣದಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ಏರ್ಪಡಿಸುತ್ತಿದ್ದು, ಆ ನಿಟ್ಟಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಪಾಜೆಯಿಂದ ಶಿರಂಗಾಲ ಬಳಿಯ ಗಡಿಪ್ರದೇಶದವರೆಗೆ ಮಾನವ ಸರಪಳಿ ಏರ್ಪಡಿಸಬೇಕಿದೆ. ಈ ನಿಟ್ಟಿನಲ್ಲಿ ಆಯಾ ಗ್ರಾಮ ಪಂಚಾಯಿತಿ, ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಎಲ್ಲರೂ ಪಾಲ್ಗೊಂಡು ಸಹಕರಿಸುವಂತೆ ಮನವಿ ಮಾಡಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್ ಮಾತನಾಡಿ, ಸಂಪಾಜೆಯಿಂದ ಶಿರಂಗಾಲ ಗಡಿ ಪ್ರದೇಶದವರೆಗೆ 12 ಗ್ರಾಮ ಪಂಚಾಯಿತಿ, 1 ನಗರಸಭೆ, 1 ಪುರಸಭೆ ಬರಲಿದ್ದು, ಆಯಾ ವ್ಯಾಪ್ತಿಯಲ್ಲಿ ಜಿಲ್ಲಾ, ತಾಲೂಕು ಹಾಗೂ ಗ್ರಾಮ ಮಟ್ಟದ ಅಧಿಕಾರಿಗಳನ್ನು ನಿಯೋಜಿಸಲಾಗುವುದು ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಮಾನವ ಸರಪಳಿಯಲ್ಲಿ ಸುಮಾರು 30 ಸಾವಿರ ಜನರು ಪಾಲ್ಗೊಳ್ಳುವ ಸಾಧ್ಯತೆ ಇದ್ದು, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಎಲ್ಲರೂ ಸೆ.15ರಂದು ಬೆಳಗ್ಗೆ 8.30ಕ್ಕೆ ಆಗಮಿಸಬೇಕು. ವಿವಿಧ ಕಡೆಗಳಲ್ಲಿ ಆರೋಗ್ಯ ಸಿಬ್ಬಂದಿ ನಿಯೋಜಿಸಬೇಕು. ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಎಲ್ಲರೂ ಆನ್‌ಲೈನ್ ಮೂಲಕ ಹೆಸರು ನೋಂದಾಯಿಸುವಂತೆ ತಿಳಿಸಿದರು. ಇದೇ ವೇಳೆ ಪ್ರಜಾಪ್ರಭುತ್ವ ದಿನಾಚರಣೆ ಮಹತ್ವ ಕುರಿತ ಭಿತ್ತಿಪತ್ರವನ್ನು ಡಿಸಿ ವೆಂಕಟ್ ರಾಜಾ ಬಿಡುಗಡೆ ಮಾಡಿದರು. ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಜಿಪಂ ಉಪಕಾರ್ಯದರ್ಶಿ ಎಸ್.ಧನರಾಜ್, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ವಿವಿಧ ವಿದ್ಯಾಸಂಸ್ಥೆ ಹಾಗೂ ಶಾಲಾ–ಕಾಲೇಜಿನ ಮುಖ್ಯಸ್ಥರು ಹಾಜರಿದ್ದರು.

ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ಗಲಭೆ ಖಂಡಿಸಿ

ಮಡಿಕೇರಿಯಲ್ಲಿ ಹಿಂದೂಪರ ಸಂಘಟನೆಗಳ ಪ್ರತಿಭಟನೆ



ಮಡಿಕೇರಿಯಲ್ಲಿ ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಸೆ.12–ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಗಣೇಶ ಮೂರ್ತಿ ವಿಸರ್ಜನೆ ವೇಳೆ ನಡೆದ ಗಲಭೆ ಖಂಡಿಸಿ, ಘಟನೆಗೆ ಕಾರಣರಾದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ಸಾರ್ವಜನಿಕ ಗಣೇಶೋತ್ಸವ ಸಮಿತಿಗಳ ಒಕ್ಕೂಟ ಹಾಗೂ ವಿವಿಧ ಹಿಂದೂಪರ ಸಂಘಟನೆಗಳ ವತಿಯಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಗಲಭೆಗೆ ಕಾರಣರಾದವರನ್ನು ಕೂಡಲೇ ಬಂಧಿಸಿ, ಈ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಯಿಸಿದರು.

ವಿಶ್ವ ಹಿಂದೂ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಡಿ.ನರಸಿಂಹ ಹಾಗೂ ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಂಯೋಜಕ ಕುಕ್ಕೇರ ಅಜಿತ್ ಮಾತನಾಡಿ, ಇದೊಂದು ಪೂರ್ವ ಯೋಜಿತ ಕೃತ್ಯವಾಗಿದೆ. ಇಂತಹ ಘಟನೆಯಿಂದ ಹಿಂದೂ ಸಮಾಜ ಜಾಗೃತಗೊಳ್ಳಬೇಕು ಎಂದರು.

ಪ್ರತಿಭಟನೆಯಲ್ಲಿ ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣ ವೇದಿಕೆ, ಬಜರಂಗ ದಳ ಸೇರಿದಂತೆ ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಎಲ್ಕ್ ಹಿಲ್ ಎಸ್ಟೇಟ್‌ನಿಂದ ಬಸ್ ನಿಲ್ದಾಣ ಉದ್ಘಾಟನೆ



ಕೊಡಗಿನ ಎಲ್ಕ್ ಹಿಲ್ ಎಸ್ಟೇಟ್ ವತಿಯಿಂದ ತೂಬೆಕೊಲ್ಲಿ ಬಸ್ ನಿಲ್ದಾಣವನ್ನು ಹೊಸದಾಗಿ ಮರು ನಿರ್ಮಾಣ ಮಾಡಿ ಉದ್ಘಾಟಿಸಿದರು.

ಮಡಿಕೇರಿ, ಸೆ.12– ಆರೆಂಜ್ ಕೌಂಟಿ ರೆಸಾರ್ಟ್ಸ್ ಮತ್ತು ಹೋಟೆಲ್ಸ್ ಲಿಮಿಟೆಡ್ (ಓಸಿಆರ್‌ಎಚ್‌ಎಲ್)ನ ಅಧೀನದಲ್ಲಿರುವ ಕೊಡಗಿನ ಎಲ್ಕ್ ಹಿಲ್ ಎಸ್ಟೇಟ್ ವತಿಯಿಂದ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಎಸ್ಟೇಟ್ ಸಮೀಪದಲ್ಲಿರುವ ತೂಬೆಕೊಲ್ಲಿ ಬಸ್ ನಿಲ್ದಾಣವನ್ನು ಹೊಸದಾಗಿ ಮರು ನಿರ್ಮಾಣ ಮಾಡಿದ್ದು, ಅದನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಮಾಲ್ದಾರೆ ಪಂಚಾಯತ್‌ನ ಪಿಡಿಓ ಎಂ.ಚಂದ್ರಶೇಖರ, ಪಂಚಾಯಿತಿ ಅಧ್ಯಕ್ಷೆ ಮಾಲತಿ ಸಿ.ಎನ್, ಪಂಚಾಯತ್ ಉಪಾಧ್ಯಕ್ಷ ಜಿ.ಬಿ. ಕುಂಜಣ್ಣ, ಸಿದ್ದಾಪುರ ಪಂಚಾಯಿತಿ ಪಿಡಿಓ ಶಫೀಕ್, ಪಂಚಾಯಿತಿ ಅಧ್ಯಕ್ಷೆ ಪ್ರೇಮಾ ಗೋಪಾಲ್, ಪಂಚಾಯಿತಿ ಉಪಾಧ್ಯಕ್ಷ ಪಳನಿ ಸ್ವಾಮಿ ಮತ್ತು ಸದಸ್ಯರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಆರೆಂಜ್ ಕೌಂಟಿ ರೆಸಾರ್ಟ್ಸ್ ಮತ್ತು ಹೋಟೆಲ್ಸ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಎಲ್ಕ್ ಹಿಲ್ ಎಸ್ಟೇಟ್‌ನ ಸಿಇಓ ಡಾ.ಜಾನ್ ರಾಮಪುರಂ, 'ಎಸ್ಟೇಟ್ ಖರೀದಿಸಿದ ಬಳಿಕ ನಾವು ಈ ಎಸ್ಟೇಟ್ ಅನ್ನು ಹಾದು ಹೋಗುವ ಮುಖ್ಯ ರಸ್ತೆಯ ಬಳಿ ಇದ್ದ ಈ ಬಸ್ ನಿಲ್ದಾಣದ ಅಡಿಪಾಯವನ್ನು ಗಮನಿಸಿದ್ದೆವು. ನಂತರ ಅದರ ಪುನರ್ ನಿರ್ಮಾಣಕ್ಕೆ ಮುಂದಾದಾಗ ಕೊಡಗಿನ ಶ್ರೀಮಂತ ವಾಸ್ತುಶಿಲ್ಪದ ಪರಂಪರೆಯನ್ನು ಸಂರಕ್ಷಿಸುವ, ಮುಂದಿನ ಪೀಳಿಗೆಗೆ ತಲುಪಿಸುವಂತಹ ಕೆಲಸ ಮಾಡಬೇಕು ಎಂದುಕೊಂಡಿದ್ದೆವು. ಅದಕ್ಕೆ ಪೂರಕವಾಗಿಯೇ ಈ ಹೊಸ ಬಸ್ ನಿಲ್ದಾಣ ನಿರ್ಮಾಣಗೊಂಡಿದೆ ಎಂದು ಹೇಳಿದರು.

ಬ್ಯಾಂಕ್‌ನಲ್ಲೇ ಮ್ಯಾನೇಜರ್ ಆತ್ಮಹತ್ಯೆ



ವಿಜು

ನಾಪೋಕ್ಲು, ಸೆ.12–ರಾಷ್ಟ್ರೀಕೃತ ಬ್ಯಾಂಕ್‌ವೊಂದರ ವ್ಯವಸ್ಥಾಪಕರೊಬ್ಬರು ಬ್ಯಾಂಕ್‌ನಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಸಮೀಪದ ಕಕ್ಕಬ್ಬೆಯಲ್ಲಿ ಬುಧವಾರ ಸಂಜೆ ನಡೆದಿದೆ.

ಕಕ್ಕಬ್ಬೆ ಶಾಖೆಯ ವ್ಯವಸ್ಥಾಪಕ ವಿಜು(46) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರು ಮೂಲತಃ ಕೇರಳದ ಕೊಲ್ಲಂ ಜಿಲ್ಲೆಯ ಆಲಪುಳ ಆಯಿಕ್ಕಾಡ್ ಚಿಂಗೋಲಿ ಗ್ರಾಮದ ರಾಜೇಂದ್ರನ್ ಅವರ ಪುತ್ರರಾಗಿದ್ದಾರೆ. ವಿಜು ಅವರ ಪತ್ನಿ ಆಶಾ ಇದೇ ಬ್ಯಾಂಕ್‌ನ ಬೆಟ್ಟಗೇರಿ ಶಾಖೆಯ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪತಿ ವಿಜು ಮತ್ತು ಪತ್ನಿ ಆಶಾ ಅವರು ಪುತ್ರನೊಂದಿಗೆ ನಾಪೋಕ್ಲುವಿನ ಇಂದಿರಾನಗರದ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಎಂದಿನಂತೆ ದಂಪತಿ ಬುಧವಾರ ಬೆಳಗ್ಗೆ ಕರ್ತವ್ಯಕ್ಕೆ ತೆರಳಿದ್ದರು. ಆದರೆ, ಪತ್ನಿ ಆಶಾ ಕೆಲಸ ಮುಗಿಸಿ ಸಂಜೆ ಮನೆಗೆ ಬಂದಾಗ ಪತಿ ವಿಜು ಬಾರದ ಹಿನ್ನೆಲೆಯಲ್ಲಿ ಕಕ್ಕಬ್ಬೆ ಬ್ಯಾಂಕ್ ಶಾಖೆ ಸಹೋದ್ಯೋಗಿಗಳನ್ನು ಸಂಪರ್ಕಿಸಿ, ವಿಚಾರಿಸಿದಾಗ ಬ್ಯಾಂಕ್‌ನಲ್ಲೇ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ತಿಳಿದು ಬಂದಿದೆ.

ಕೆಲ ದಿನಗಳಿಂದ ವಿಜು ಮಾನಸಿಕ ಒತ್ತಡದಿಂದ ಇದ್ದರು ಎಂದು ಪತ್ನಿ ಆಶಾ ಪೊಲೀಸರಿಗೆ ತಿಳಿಸಿದ್ದಾರೆ. ಈ ಸಂಬಂಧ ನಾಪೋಕ್ಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣ



ಗುಂಡಿಕೆರೆ ಸರ್ಕಾರಿ ಶಾಲೆಯಲ್ಲಿ ಆಯೋಜಿಸಿದ್ದ ದತ್ತಿನಿಧಿ ಉಪನ್ಯಾಸ ಕಾರ್ಯಕ್ರಮವನ್ನು ಡಾ.ಕೆ.ಬಸವರಾಜ್ ಉದ್ಘಾಟಿಸಿದರು.

ವಿರಾಜಪೇಟೆ, ಸೆ.12–ಇಂಗ್ಲಿಷ್ ಮತ್ತು ಹಿಂದಿಯಿಂದ ಮಾತೃಭಾಷೆ ಕನ್ನಡ ನಲುಗುತ್ತಿದ್ದು, ಅಭಿಮಾನ ಶೂನ್ಯತೆಯಿಂದ ಕನ್ನಡ ಮಾತನಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ವಿರಾಜಪೇಟೆ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕೆ.ಬಸವರಾಜ್ ಬೇಸರ ವ್ಯಕ್ತಪಡಿಸಿದರು.

ಸಮೀಪದ ಬೇಟೋಳಿ ಗ್ರಾಪಂ ವ್ಯಾಪ್ತಿಯ ಗುಂಡಿಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ಕಸಾಪ ವತಿಯಿಂದ ಆಯೋಜಿಸಿದ್ದ ಎನ್.ಮಹಾಬಲೇಶ್ವರ ಭಟ್ ಅವರ ದತ್ತಿನಿಧಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆಗೆ ಶ್ರೀಮಂತಿಕೆ ಸತ್ವವಿದೆ. ಇಂಗ್ಲಿಷ್ ಉದ್ಯೋಗದ ಭಾಷೆ ಆದರೂ ಭಾವ ಅಭಿವ್ಯಕ್ತಿಗೆ ಹೃದ್ಯವಾದುದು ಕನ್ನಡ ಭಾಷೆ ಮಾತ್ರ ಎಂದರು.

ಪಂಪ, ರನ್ನ, ಹೊನ್ನರು ರಚಿಸಿದ ಕಾವ್ಯಗಳು ಇಂದಿಗೂ ಜೀವಂತ ಸಾರ್ವಕಾಲಿಕ ಸಂದೇಶ ನೀಡುತ್ತಿವೆ. ವಚನ ಸಾಹಿತ್ಯ ವಿಶ್ವ ಮಾನ್ಯವಾಗಿದ್ದು, ಸಾರ್ವತ್ರಿಕವಾಗಿ ಜನರ ಮನಸೆಳಿದಿದೆ. ಭಕ್ತಿರಸ ಚೆಲ್ಲಿದ ದಾಸ ಸಾಹಿತ್ಯದ ಕೀರ್ತನೆಗಳು ಎಂದೆಂದಿಗೂ ಜನಪ್ರಿಯ ಎಂದು ತಿಳಿಸಿದರು.

ಗ್ರಾಪಂ ಸದಸ್ಯ ಮೀತಲತಂಡ ಇಸ್ಮಾಯಿಲ್ ಮಾತನಾಡಿ, ಕನ್ನಡ ಭಾಷೆಯಲ್ಲಿ ಮಾತನಾಡಬೇಕಾದ ನಾವು ಬೇರೆ ಭಾಷೆಗಳಿಗೆ ಹೆಚ್ಚು ಆಸಕ್ತಿ ತೋರುತ್ತಿದ್ದೇವೆ. ಕೇರಳದಲ್ಲಿ ಮೊಬೈಲ್ ಸಂಖ್ಯೆ ಕೇಳಿದರೆ ಅವರು ಮಲೆಯಾಳಂ ಭಾಷೆಯಲ್ಲಿ ಹೇಳುತ್ತಾರೆ. ಆದರೆ, ನಮ್ಮ ರಾಜ್ಯದಲ್ಲಿ ಇಂಗ್ಲಿಷ್‌ನಲ್ಲಿ ಹೇಳುತ್ತಾರೆ. ನಾವು ನಮ್ಮ ಮಾತೃ ಭಾಷೆಯನ್ನು ಮಾತನಾಡುವ ಮೂಲಕ ಕನ್ನಡವನ್ನು ಬೆಳೆಸಲು ಮುಂದಾಗಬೇಕು ಎಂದರು.

ಕಸಾಪ ತಾಲೂಕು ಅಧ್ಯಕ್ಷ ಡಿ.ಪಿ.ರಾಜೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿ ಹೆಚ್.ಜಿ.ಸಾವಿತ್ರಿ, ಮುಖ್ಯ ಶಿಕ್ಷಕಿ ಸೀತಾ, ಶಿಕ್ಷಕರು ಹಾಜರಿದ್ದರು.

ನವಸಾಕ್ಷರರಿಗೆ ಸನ್ಮಾನ...



ಮಡಿಕೇರಿಯ ಜೂನಿಯರ್ ಕಾಲೇಜು ಆವರಣದಲ್ಲಿ ಗುರುವಾರ ಜಿಲ್ಲಾ ವಯಸ್ಕರ ಶಿಕ್ಷಣ ಸಹಯೋಗದಲ್ಲಿ ನಡೆದ ಸಾಕ್ಷರತಾ ದಿನಾಚರಣೆ ಹಾಗೂ ಸಪ್ತಾಹ ಕಾರ್ಯಕ್ರಮದಲ್ಲಿ ನವಸಾಕ್ಷರರನ್ನು ಸನ್ಮಾನಿಸಲಾಯಿತು. ಕೂಡಿಗೆ ಪ್ರಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಎಂ.ಚಂದ್ರಕಾಂತ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ಡಿವೈಎಸ್‌ಪಿ ಮಹೇಶ್ ಕುಮಾರ್, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಎಚ್.ಟಿ.ಶಶಿಕಲಾ, ಕೃಷ್ಣಪ್ಪ ಇದ್ದರು.

ಸುಕುಮಾರ್ ನಿಧನ



ನಾಪೋಕ್ಲು, ಸೆ.12– ಸಮೀಪದ ಕೈಕಾಡು ಗ್ರಾಮದ ಮೂಕಂಡ ಬಾಣೆ ಪೈಸಾರಿ ನಿವಾಸಿ ಟ್ರ್ಯಾಕ್ಟರ್ ಚಾಲಕ ಸುಕುಮಾರ್ (ಸುಗು)(50) ಹೃದಯಾಘಾತದಿಂದ ಬುಧವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಅಗಲಿದ್ದಾರೆ. ಸ್ವಗ್ರಾಮ ಮೂಕಂಡ ಬಾಣೆಯಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು.

ನಕ್ಷತ್ರ ಆಮೆ ಸಾಗಿಸುತ್ತಿದ್ದ ಮೂವರ ಬಂಧನ



ವಶಕ್ಕೆ ಪಡೆದ ನಕ್ಷತ್ರ ಆಮೆಗಳು.

ಕೊಳ್ಳೇಗಾಲ, ಸೆ.12–ಜೀವಂತ ನಕ್ಷತ್ರ ಆಮೆ ಸಾಗಿಸುತ್ತಿದ್ದ ಮೂವರನ್ನು ಬಂಧಿಸಿರುವ ಅರಣ್ಯ ಸಂಚಾರ ದಳದ ಪೊಲೀಸರು ಕಾರು ಹಾಗೂ ಎರಡು ಆಮೆಗಳನ್ನು ವಶಪಡಿಸಿಕೊಂಡಿದ್ದಾರೆ.

ಹನೂರು ತಾಲೂಕಿನ ಗುಂಡಿಮಾಳ ಗ್ರಾಮದ ಪ್ರಕಾಶ್, ಮಳವಳ್ಳಿ ತಾಲೂಕಿನ ರಾಗಿಬೊಮ್ಮನಹಳ್ಳಿ ಗ್ರಾಮದ ನಾಗರಾಜು ಹಾಗೂ ಮಾಗನೂರು ಗ್ರಾಮದ ನಾಗೇಂದ್ರಸ್ವಾಮಿ ಬಂಧಿತರು.

ಈ ಮೂವರು ಕಾರಿನಲ್ಲಿ ಹನೂರು ತಾಲೂಕಿನ ಗುಂಡಿಮಾಳ ಮಾರ್ಗವಾಗಿ ಮಾರಾಟಕ್ಕಾಗಿ ಆಮೆಗಳನ್ನು ಸಾಗಿಸುತ್ತಿದ್ದರು. ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಹುಲುಸುಗುಡ್ಡೆ ಬಳಿ ಮೂವರನ್ನು ಬಂಧಿಸಿ, ಕಾರು ಹಾಗೂ ಆಮೆಗಳನ್ನು ವಶಪಡಿಸಿಕೊಂಡರು. ಕಾರ್ಯಾಚರಣೆಯಲ್ಲಿ ಅರಣ್ಯ ಸಂಚಾರ ದಳದ ಸಬ್‌ಇನ್ಸ್‌ಪೆಕ್ಟರ್ ವಿಜಯರಾಜ್, ಹೆಚ್.ಸಿ.ಶಂಕರ್, ಮುಖ್ಯ ಪೇದೆಗಳಾದ ರಾಮಚಂದ್ರ, ಸ್ವಾಮಿ, ಬಸವರಾಜ್, ಸಿಬ್ಬಂದಿ ಲತಾ, ಬಸವರಾಜ್, ಪ್ರಭಾಕರ್ ಭಾಗವಹಿಸಿದ್ದರು.

ಪಡಿತರ ಅಕ್ಕಿ ಸಾಗಿಸುತ್ತಿದ್ದ ಇಬ್ಬರ ಬಂಧನ

ಚಾಮರಾಜನಗರ, ಸೆ.12–ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ಚಾಮರಾಜನಗರ ಠಾಣೆ ಪೊಲೀಸರು, 32,655 ರೂ. ಮೌಲ್ಯದ 933 ಕೆಜಿ ಅಕ್ಕಿ ವಶಪಡಿಸಿಕೊಂಡಿದ್ದಾರೆ.

ವಾಹನ ಚಾಲಕ ಇಮ್ರಾನ್ ಹಾಗೂ ಮಹಮ್ಮದ್ ಸಲ್ಮಾನ್ ಬಂಧಿತರು. ಈ ಇಬ್ಬರು ಬುಧವಾರ ಮಧ್ಯಾಹ್ನ ನಗರದ ಗಾಳಿಪುರ ಕಡೆಯಿಂದ ತಿ.ನರಸೀಪುರ ಕಡೆಗೆ ಗೂಡ್ಸ್ ವಾಹನದಲ್ಲಿ 19 ಪ್ಲಾಸ್ಟಿಕ್ ಚೀಲಗಳಲ್ಲಿ ಪಡಿತರ ಅಕ್ಕಿ ಸಾಗಿಸುತ್ತಿದ್ದರು. ಈ ವೇಳೆ ಪೊಲೀಸರು ದಾಳಿ ನಡೆಸಿ, ಇಬ್ಬರನ್ನು ಬಂಧಿಸಿ ಅಕ್ಕಿ ಹಾಗೂ ಗೂಡ್ಸ್ ವಾಹನ ವಶಪಡಿಸಿಕೊಂಡಿದ್ದಾರೆ.

ಈ ಸಂಬಂಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಯಳಂದೂರು, ಸೆ.12– ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಸೆ.13ರಂದು ತಾಲೂಕಿನ ಉಪವಿಭಾಗದ ಗುಂಬಳ್ಳಿ ಐಪಿ ಫೀಡರ್ ಹಾಗೂ ಸೆ.14ರಂದು ತಾಲೂಕಿನ ಕುಂತೂರು ಕೇಂದ್ರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸೆ.13ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಗುಂಬಳ್ಳಿ ಐಪಿ ಫೀಡರ್ ವ್ಯಾಪ್ತಿಯ ಯರಗಂಬಳ್ಳಿ, ಚಂಗಚಹಳ್ಳಿ, ಹೆಗ್ಗಡೆಹುಂಡಿ, ಕೃಷ್ಣಾಪುರ, ಕೆ.ದೇವರಹಳ್ಳಿ, ಗಂಗವಾಡಿ, ವೈ.ಕೆ. ಮೋಳೆ, ಗ್ರಾಮ ಹಾಗೂ ಸೆ.14ರಂದು ಕುಂತೂರು ಕೇಂದ್ರ ವ್ಯಾಪ್ತಿಯ ಯಳಂದೂರು ಟೌನ್, ಯರಿಯೂರು, ಮದ್ದೂರು, ಆಲ್ಕೆರೆ ಅಗ್ರಹಾರ, ಬೂದಿತಿಟ್ಟು, ಎ. ದೇವರಹಳ್ಳಿ, ಟಿ.ಹೊಸೂರು, ಶಿವಕಹಳ್ಳಿ, ಅಗರ ಮಾಂಬಳ್ಳಿ, ಬನ್ನಿಸಾರಿಗೆ, ಕಿನಕಹಳ್ಳಿ, ಕೆಸ್ತೂರು, ಮಲ್ಲಿಗೆಹಳ್ಳಿ, ಕೆ.ಹೊಸೂರು, ಬಿಳಿಗಿರಿರಂಗನಬೆಟ್ಟ, ಗೌಡಹಳ್ಳಿ, ಗಣಿಗನೂರು, ವಡಗೆರೆ, ಕೊಮಾರನಪುರ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಇಂಜಿನಿಯರ್ ಲಿಂಗರಾಜು ತಿಳಿಸಿದ್ದಾರೆ.

ಯಳಂದೂರಲ್ಲಿ ಪೊಲೀಸ್ ಪಥ ಸಂಚಲನ...



ಗಣೇಶ ಮೂರ್ತಿ ವಿಸರ್ಜನೆ ಹಾಗೂ ಈದ್–ಮಿಲಾದ್ ಅಂಗವಾಗಿ ಯಳಂದೂರಿನಲ್ಲಿ ಆರಕ್ಷಕ ವೃತ್ತ ನಿರೀಕ್ಷಕ ಶ್ರೀಕಾಂತ್, ಆರಕ್ಷಕ ಉಪನಿರೀಕ್ಷಕರಾದ ಹನುಮಂತ ಉಪ್ಪಾರ, ಕರಿಬಸಪ್ಪ ನೇತೃತ್ವದಲ್ಲಿ ಪೊಲೀಸ್ ಪಥ ಸಂಚಲನ ನಡೆಸಲಾಯಿತು.

ಪಕ್ಷದ ವಿಪ್ ಉಲ್ಲಂಘಿಸಿದವರ ಸದಸ್ಯತ್ವ ರದ್ದುಗೊಳಿಸುವಂತೆ ಒತ್ತಾಯಿಸಿ

ಪುರಸಭೆ ಮುಖ್ಯಾಧಿಕಾರಿಗೆ ಬಿಜೆಪಿ ನಿಯೋಗ ದೂರು



ಐವರು ಬಿಜೆಪಿ ಸದಸ್ಯರ ಸದಸ್ಯತ್ವ ರದ್ದುಗೊಳಿಸುವಂತೆ ಬಿಜೆಪಿ ನಿಯೋಗ ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ ಅವರಿಗೆ ದೂರು ಸಲ್ಲಿಸಿತು.

ಗುಂಡ್ಲುಪೇಟೆ, ಸೆ.12–ಇಲ್ಲಿನ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಬೆಂಬಲಿಸಿದ ಐವರು ಬಿಜೆಪಿ ಸದಸ್ಯರ ಸದಸ್ಯತ್ವ ರದ್ದುಗೊಳಿಸುವಂತೆ ಬಿಜೆಪಿ ನಿಯೋಗ ಗುರುವಾರ ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ ಅವರಿಗೆ ದೂರು ಸಲ್ಲಿಸಿತು.

ಪುರಸಭೆ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಹಾಲಿ ಸದಸ್ಯ ಪಿ.ಗಿರೀಶ್ ನೇತೃತ್ವದಲ್ಲಿ ಪುರಸಭೆಗೆ ತೆರಳಿದ ನಿಯೋಗ, ಕಿರಣ್‌ಗೌಡ, ಹೀನಾ ಕೌಸರ್, ವೀಣಾ, ರಮೇಶ್ ಹಾಗೂ ಲಕ್ಷ್ಮಿದೇವಿ ಅವರ ಸದಸ್ಯತ್ವ ರದ್ದುಗೊಳಿಸು ವಂತೆ ದೂರು ಸಲ್ಲಿಸಿತು. ಇತ್ತೀಚೆಗೆ ನಡೆದ ಪುರಸಭೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಿರಣ್‌ಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಹೀನಾ ಕೌಸರ್ ಆಯ್ಕೆಗೆ ಚುನಾವಣೆಯಲ್ಲಿ ಗೈರಾಗುವ ಮೂಲಕ ಪರೋಕ್ಷವಾಗಿ ಬೆಂಬಲ ನೀಡಿದ್ದಾರೆ. ಜೊತೆಗೆ ಪಕ್ಷದ ವಿಪ್ ಉಲ್ಲಂಘಿಸಿದ್ದಾರೆ. ಆದ್ದರಿಂದ ಇವರ ಸದಸ್ಯತ್ವ ರದ್ದುಗೊಳಿಸಬೇಕು ಎಂದು ದೂರಿನಲ್ಲಿ ಮನವಿ ಮಾಡಲಾಗಿದೆ.

ಇದಕ್ಕೂ ಮೊದಲು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪುರಸಭೆ ಮಾಜಿ ಅಧ್ಯಕ್ಷ ಪಿ.ಗಿರೀಶ್, ಬಹುಮತ ಇಲ್ಲದಿದ್ದರೂ ಕಾಂಗ್ರೆಸ್ ಬಿಜೆಪಿ ಸದಸ್ಯರನ್ನು ಹೆದರಿಸಿ, ಆಮಿಷವೊಡ್ಡಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಆಯ್ಕೆಯಾಗಿ ಅಧಿಕಾರಕ್ಕೆ ಬಂದಿದೆ. ಪಕ್ಷದ ವಿಪ್ ಉಲ್ಲಂಘಿಸಿರುವ ಬಿಜೆಪಿಯ ಐವರು ಸದಸ್ಯರು ಪಕ್ಷಾಂತರ ನಿಷೇಧ ಕಾಯ್ದೆಯನ್ವಯ ಸದಸ್ಯತ್ವ ರದ್ದುಗೊಳಿಸುವಂತೆ ಮುಖ್ಯಾಧಿಕಾರಿ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಕಾನೂನು ಬಹಳ ಪರಿಣಾಮಕಾರಿಯಾಗಿದ್ದು, ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಜಿಲ್ಲಾಧಿಕಾರಿ ಅರ್ಜಿ ಸ್ವೀಕರಿಸಿದ 30 ದಿನಗಳಲ್ಲಿ ಪಕ್ಷಾಂತರ ಮಾಡಿದ ಸದಸ್ಯರ ಸದಸ್ಯತ್ವ ರದ್ದುಗೊಳಿಸಬೇಕಾಗಿದೆ. ಆಕಸ್ಮಾತ್ ಅಧಿಕಾರಿಗಳು ಪ್ರಭಾವಿಗಳ ಪ್ರಭಾವದಿಂದ ಸಕಾಲದಲ್ಲಿ ಕಾನೂನು ಕ್ರಮಕೈಗೊಳ್ಳದಿದ್ದರೆ ನ್ಯಾಯಾಲಯದ ಮೊರೆ ಹೋಗಲಾಗುವುದು ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರಾದ ನಾಗೇಶ್, ಕುಮಾರ್, ರಂಗಸ್ವಾಮಿ, ದೀಪಿಕಾ, ಪಟ್ಟಾಭಿ, ಮಹದೇವಮ್ಮ, ಸಾಜಿದಾ ಬೇಗಂ ಮತ್ತು ಮುಖಂಡ ಎಲ್.ಸುರೇಶ್ ಇತರರು ಇದ್ದರು.

ರಾಹುಲ್ ಗಾಂಧಿ ಹೇಳಿಕೆ ಖಂಡಿಸಿ ಇಂದು ಬಿಜೆಪಿ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿದರು.

ಚಾಮರಾಜನಗರ, ಸೆ12–ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೀಸಲಾತಿ ರದ್ದುಪಡಿಸುತ್ತೇವೆ ಎಂಬ ಸಂಸದ ರಾಹುಲ್ ಗಾಂಧಿ ಹೇಳಿಕೆ ಖಂಡಿಸಿ ನಗರದಲ್ಲಿ ಶುಕ್ರವಾರ (ಸೆ.13) ಜಿಲ್ಲಾ ಬಿಜೆಪಿ ವತಿಯಿಂದ ಕಾಂಗ್ರೆಸ್ ಹಠವೋ ಮೀಸಲಾತಿ ಬಚಾವೋ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಹಾಗೂ ಮಾಜಿ ಸಚಿವ ಎನ್.ಮಹೇಶ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಜವಾದ ಮೀಸಲಾತಿ ಹಾಗೂ ಸಂವಿಧಾನ ವಿರೋಧಿಗಳು ಕಾಂಗ್ರೆಸ್‌ನವರು ಎಂಬುವುದು ಅಮೆರಿಕಾದಲ್ಲಿ ರಾಹುಲ್ ಗಾಂಧಿ ನೀಡಿರುವ ಹೇಳಿಕೆಯಿಂದ ಸಾಬೀತಾಗಿದೆ. ರಾಹುಲ್ ಗಾಂಧಿ ಅವರ ತಾತ ಜವಾಹರಲಾಲ್ ನೆಹರು ಸಹ ಇದೇ ಹೇಳಿಕೆ ನೀಡಿದ್ದರು. ಕಾಂಗ್ರೆಸ್ ಹಾಗೂ ನೆಹರು ಕುಟುಂಬ ಅಂಬೇಡ್ಕರ್ ಹಾಗೂ ಸಂವಿಧಾನ ವಿರೋಧಿಯಾಗಿದ್ದು, ಮೀಸಲಾತಿ ನೀಡುವುದು ಕಾಂಗ್ರೆಸ್‌ಗೆ ಇಷ್ಟವಿಲ್ಲ ಎಂದು ದೂರಿದರು.

ಅಮೆರಿಕಾ ಪ್ರವಾಸದಲ್ಲಿರುವ ರಾಹುಲ್ ಗಾಂಧಿ, ಜಾರ್ಜ್‌ಟೌನ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳೊಂದಿಗೆ ನಡೆಸಿರುವ ಸಂವಾದದಲ್ಲಿ ಭಾರತದಲ್ಲಿರುವ ಮೀಸಲಾತಿ ವಿಚಾರ ಪ್ರಸ್ತಾಪಿಸಿದ್ದಾರೆ. ಅಲ್ಲದೆ, ಕಾಂಗ್ರೆಸ್‌ನಿಂದ ಮೀಸಲಾತಿ ತೆಗೆಯಲು ಸಾಧ್ಯ ಎಂಬ ಹೇಳಿಕೆ ನೀಡಿರುವುದು ದುರದೃಷ್ಟಕರ. ರಾಹುಲ್ ಗಾಂಧಿ ವಿರುದ್ಧ ಜಿಲ್ಲಾ ಬಿಜೆಪಿ ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಬುಲೆಟ್ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಎಸ್ಸಿ ಮೋರ್ಚಾ ತಾಲೂಕು ಅಧ್ಯಕ್ಷ ಮಾಂಬಳ್ಳಿ ರಾಮಣ್ಣ, ಅಗರರಾಜು ಇದ್ದರು.

ಯಡಿಯೂರು ಮಂಗಲದಲ್ಲಿ ವಿಜೃಂಭಣೆಯ ಶಂಕರೇಶ್ವರ ಜಾತ್ರೆ

ಚಾಮರಾಜನಗರ, ಸೆ.12– ತಾಲೂಕಿನ ಯಡಿಯೂರು ಮಂಗಲ ಗ್ರಾಮದ ಶ್ರೀ ಶಂಕರೇಶ್ವರಸ್ವಾಮಿ ಬೆಟ್ಟದಲ್ಲಿ ಬುಧವಾರ ವಿಜೃಂಭಣೆಯಿಂದ ಜಾತ್ರೆ ನಡೆಯಿತು.

ಜಾತ್ರೆ ಪ್ರಯುಕ್ತ ಸ್ವಾಮಿಗೆ ಮುಂಜಾನೆ ರುದ್ರಾಭಿಷೇಕ, ಕುಂಕುಮಾರ್ಚನೆ, ಪಂಚಾಮೃತ ಅಭಿಷೇಕ ಹಾಗೂ ವಿವಿಧ ಪೂಜಾ ಕಾರ್ಯ ನೆರವೇರಿಸಲಾಯಿತು. ನಂತರ ದೇವರಿಗೆ ವಿವಿಧ ಹೂವುಗಳಿಂದ ಅಲಂಕಾರ, ಮಹಾಮಂಗಳಾರತಿ ನಡೆಯಿತು.

ಉತ್ಸವ ಮೂರ್ತಿಯನ್ನು ಬೆಟ್ಟದ ತಪ್ಪಲಿನಿಂದ ಯಡಿಯೂರು ಗ್ರಾಮದ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ಮಂಗಲದಿಂದ ಶಂಕರೇಶ್ವರಸ್ವಾಮಿ ಹಾಗೂ ಬೀರೇಶ್ವರ ಉತ್ಸವ ಮೂರ್ತಿಯೊಂದಿಗೆ ಬಂದ ಗ್ರಾಮಸ್ಥರು, ವೀರಭದ್ರೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ನಂತರ ಬೀರೇಶ್ವರ ದೇವರನ್ನು ಹೊತ್ತು ಕುಣಿದರು.

ಸಂಜೆ ಗಣೇಶ ಮೂರ್ತಿಯೊಂದಿಗೆ ಶಂಕರೇಶ್ವರ ಹಾಗೂ ಬೀರೇಶ್ವರ ದೇವರನ್ನು ಮಂಗಳವಾದ್ಯದೊಂದಿಗೆ ಮೆರವಣಿಗೆ ನಡೆಸಲಾಯಿತು. ಯಡಿಯೂರು ಮಂಗಲ, ಹುಲ್ಲೇಪುರ, ಮಂತಾಳಪುರ, ಕರಡಿಮೋಳೆ, ಮಂಗಲ ಹೊಸೂರು ಗ್ರಾಮಸ್ಥರು ಜಾತ್ರೆಯಲ್ಲಿ ಭಾಗಹಿಸಿದ್ದರು.



ಯಡಿಯೂರು ಮಂಗಲ ಗ್ರಾಮದಲ್ಲಿ ಶಂಕರೇಶ್ವರಸ್ವಾಮಿ ಹಾಗೂ ಬೀರೇಶ್ವರ ಉತ್ಸವ ಮೂರ್ತಿಯನ್ನು ಮೆರವಣಿಗೆ ನಡೆಸಲಾಯಿತು.







ನೂರಾರು ಕೋಟಿ ಸುರಿದ್ರೆ ಸಿನಿಮಾನಾ?

~ಶಿವರಾಜ್‌ಕುಮಾರ್

ಈ ಜಗತ್ತಿನಲ್ಲಿ ಚಿಕ್ಕ ಸಿನಿಮಾ ಅಂತ ಯಾವುದೂ ಇಲ್ಲ. ಸಣ್ಣ, ದೊಡ್ಡ ಬಜೆಟ್ ಮುಖ್ಯ ಅಲ್ಲ. ಸಣ್ಣ ಬಜೆಟ್‌ನಲ್ಲಿ ಮಾಡಿರೋ ಸಿನಿಮಾನೂ ಚಿತ್ರವೇ. ನೂರಾರು ಕೋಟಿ ಹಾಕಿದರಷ್ಟೇ ಅದು ಒಳ್ಳೆ ಸಿನಿಮಾನಾ? ಇಲ್ಲ. ಹಿಂದೆ ನಾವು ಜನುಮದ ಜೋಡಿ ಚಿತ್ರವನ್ನು 60 ಲಕ್ಷದಲ್ಲಿ ಮಾಡಿದ್ದೆವು. ಅದು ಅಷ್ಟರಮಟ್ಟಿಗೆ ಹಿಟ್ ಆಗುತ್ತೆ ಅಂತ ಯಾರೂ ಸಹ ನಿರೀಕ್ಷಿಸಿರಲಿಲ್ಲ. ನಮ್ಮ ಚಿತ್ರದ ಮೂಲಕ ನಾವು ಏನು ಹೇಳೋಕೆ ಹೊರಟಿದ್ದೀವಿ ಅನ್ನೋದು ಮುಖ್ಯವೇ ಹೊರತು, ಖರ್ಚು ಮಾಡೋದು ಮುಖ್ಯ ಅಲ್ಲ. ಸಿನಿಮಾ ನೋಡಿದಾಗ ಅಬ್ಬಾ ಅಂತ ಅನಿಸಬೇಕು. ಆ ಸಿನಿಮಾ ಜನರನ್ನು ಥೇಟರಿನಲ್ಲಿ ಕೂರಿಸಬೇಕು ಎಂದು ನಟ ಶಿವರಾಜ್‌ಕುಮಾರ್ ಚಿಕ್ಕ ದೊಡ್ಡ ಸಿನಿಮಾ ಅಂತ ಹೇಳುವವರ ಬಗ್ಗೆ ತೀಕ್ಷ್ಣವಾಗಿ ಮಾತನಾಡಿದರು.

ಕಾಲಾಪತ್ಥರ್ ಚಿತ್ರದ ಸಮಾರಂಭದಲ್ಲಿ ಟ್ರೇಲರ್ ಬಿಡುಗಡೆ ಮಾಡಿದ ಅವರು ಚಿತ್ರರಂಗದಲ್ಲಿ ನಮ್ಮದು ಬಿಗ್ ಸಿನಿಮಾ ಅಂತ ಹೇಳಿಕೊಳ್ಳುವವರ ಬಗ್ಗೆ ಮಾತನಾಡುತ್ತ ಮೇಲಿನ ಮಾತನ್ನು ಹೇಳಿದರು. ಕಾಲಾಪತ್ಥರ್ ನನ್ನ ಮೆಚ್ಚಿನ ಟೈಟಲ್. ನಾನು ಅಮಿತಾಬ್‌ಬಚ್ಚನ್ ಅವರ ಅಭಿಮಾನಿ. ಇದೇ ಹೆಸರಿನಲ್ಲಿ ಬಂದಿದ್ದ ಅವರ ಸಿನಿಮಾನ ಐದಾರು ಸಲ ಥೇಟರಿಗೆ ಹೋಗಿ ನೋಡಿದ್ದೆ. ಆ ಸಿನಿಮಾದ ಲೆವೆಲ್‌ಗೆ ಈ ಚಿತ್ರವೂ ಹೋಗಲೆಂದು ಆಸೆ ಪಡುತ್ತೇನೆ. ಈ ಟ್ರೇಲರ್ ನಿರೀಕ್ಷೆಗೂ ಮೀರಿ ಇನ್ನೊಂದು ಲೆವೆಲ್‌ನಲ್ಲಿದೆ. ವಿಕ್ಕಿ ಪ್ರತಿಭಾವಂತ ಹುಡುಗ, ನಟಿಸುವ ಜೊತೆಗೆ ನಿರ್ದೇಶನ ಕೂಡ ಮಾಡಿದ್ದಾರೆ. ಕೆಂಡಸಂಪಿಗೆ, ಕಾಲೇಜ್‌ಕುಮಾರ್ ಚಿತ್ರದಲ್ಲಿ ನಟಿಸಿ, ಈಗ ಕಾಲಾಪತ್ಥರ್ ಮೂಲಕ ನಿರ್ದೇಶಕನಾಗಿದ್ದಾರೆ. ಈ ಮೂರೂ ಚಿತ್ರಗಳಲ್ಲಿ ಕೆ ಎನ್ನುವ ಅಕ್ಷರವನ್ನು ಬಿಟ್ಟಿಲ್ಲ, ಕಿಂಗ್ ಆಟಿಟ್ಯೂಡ್ ಇರುವವರಿಗೆ ಕೆ ಅಕ್ಷರ ಸಲ್ಲುತ್ತದೆ. ನಾಯಕಿ ಧನ್ಯಾ ಬೇರೆ ಥರನೇ ಕಾಣುತ್ತಾಳೆ. ಅವಳನ್ನು ನಾನು ಚಿಕ್ಕ ಮಗುವಾಗಿದ್ದಾಗಿನಿಂದ ನೋಡಿದ್ದೇನೆ. ಇವತ್ತು ಈ ರೀತಿ ನಟಿಸುತ್ತಾಳೆ ಎಂದರೆ ಹೆಮ್ಮೆ ಅನಿಸುತ್ತದೆ ಎಂದರು.

ಯಾವುದೇ ಚಿತ್ರವನ್ನಾದರೂ ಒಮ್ಮೆ ನೋಡಿ ಆನಂತರ ಅದು ಚೆನ್ನಾಗಿದೆ, ಇಲ್ಲ ಅಂತ ನಿರ್ಧರಿಸಿ, ಒಳ್ಳೆಯ ಅಂಶಗಳನ್ನು ಗುರುತಿಸಿ ಅದರ ಬಗ್ಗೆ ಮಾತನಾಡಿ ಎಂದರು. ಭುವನ್ ಸುರೇಶ್ ಹಾಗೂ ನಾಗರಾಜ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ವಿಕ್ಕಿ ವರುಣ್, ಧನ್ಯಾ ರಾಮ್‌ಕುಮಾರ್ ಚಿತ್ರದ ನಾಯಕ, ನಾಯಕಿಯಾಗಿ ನಟಿಸಿದ್ದಾರೆ

'#ಪಾರು ಪಾರ್ವತಿ' ಚಿತ್ರದಲ್ಲಿ ದೀಪಿಕಾದಾಸ್




ಸಾಹಸಿ ಯುವತಿಯೊಬ್ಬಳ ಅಡ್ವೆಂಚರಸ್ ಜರ್ನಿ ಕಥಾನಕ ಒಳಗೊಂಡ ಚಿತ್ರ "#ಪಾರು ಪಾರ್ವತಿ". ರೋಹಿತ್ ಕೀರ್ತಿ ನಿರ್ದೇಶನದ ಈ ಚಿತ್ರದಲ್ಲಿ ಬಿಗ್‌ಬಾಸ್ ಖ್ಯಾತಿಯ ದೀಪಿಕಾದಾಸ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ "#ಪಾರು ಪಾರ್ವತಿ" ಚಿತ್ರದ ಶೀರ್ಷಿಕೆ ಅನಾವರಣ ಸಮಾರಂಭ ನೆರವೇರಿತು. ಪ್ರೇಮನಾಥ್ ಅವರ 1836 ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರದಲ್ಲಿ ದೀಪಿಕಾದಾಸ್, ಪೂನಂ ಹಾಗೂ ಫವಾಜ್ ಅಶ್ರಫ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಟೈಟಲ್ ಲಾಂಚ್ ನಂತರ ನಿರ್ಮಾಪಕ ಪ್ರೇಮನಾಥ್ ಮಾತನಾಡುತ್ತ, ಚಿಕ್ಕ ವಯಸ್ಸಿನಿಂದಲೂ ನನಗೆ ಸಿನಿಮಾ ನೋಡುವ ಹವ್ಯಾಸವಿತ್ತು, ಒಂದು ಸಿನಿಮಾ ನಿರ್ಮಿಸಬೇಕೆಂದು ಮೊದಲಿಂದಲೂ ಕನಸಿತ್ತು. ಅದೀಗ ನೆರವೇರಿದೆ. ನಾನು ಕೆಲಸದ ಮೇಲೆ ಅನೇಕ ಊರುಗಳ ಪ್ರವಾಸ ಮಾಡಿದ್ದೇನೆ, ಇದು ಕೂಡ ಒಂದು ಪ್ರವಾಸದ ಕಥೆಯಾಗಿರುವುದರಿಂದ ಕಾನ್ಸೆಪ್ಟ್ ನನಗೆ ಇಷ್ಟವಾಯಿತು. 9 ನನ್ನ ಲಕ್ಕಿ ನಂಬರ್ ಹಾಗಾಗಿ ನಮ್ಮ ಸಂಸ್ಥೆಯ ಹೆಸರನ್ನೂ ಅದೇ ಕಾನ್ಸೆಪ್ಟ್ ಮೇಲೆ ಇಟ್ಟಿದ್ದೇನೆ ಎಂದರು. ನಾಯಕಿ ದೀಪಿಕಾದಾಸ್ ಮಾತನಾಡಿ, ನನಗೆ ಮೊದಲಿನಿಂದಲೂ ಪ್ರವಾಸ ಹಾಗೂ ಅಡ್ವೆಂಚರ್ಸ್‌ನಲ್ಲಿ ಆಸಕ್ತಿ. ಈ ಚಿತ್ರದಲ್ಲೂ ನಾನು ಏಕಾಂಗಿ ಸಂಚಾರಿಯಾಗಿದ್ದು, ಪ್ರಯಾಣದಲ್ಲೇ ಹೆಚ್ಚು ಕಥೆ ನಡೆಯುತ್ತದೆ. ಚಿತ್ರಕ್ಕಾಗಿ ಒಂದು ತಿಂಗಳಲ್ಲಿ ಹತ್ತು ಕೆಜಿ ತೂಕ ಇಳಿಸಿಕೊಂಡಿದ್ದೇನೆ ಎಂದರು.

ನಿರ್ದೇಶಕ ರೋಹಿತ್ ಮಾತನಾಡಿ, ಇದೊಂದು ಅಡ್ವೆಂಚರ್ಸ್ ಮತ್ತು ಪ್ರವಾಸ ಕಥನ. ಬೆಂಗಳೂರು, ಗೋವಾ, ಮಹಾರಾಷ್ಟ್ರ, ರಾಜಸ್ಥಾನ ಹಾಗೂ ಉತ್ತರಖಾಂಡ್‌ನಲ್ಲಿ ಚಿತ್ರೀಕರಣ ನಡೆದಿದೆ. ಮೂರು ಮುಖ್ಯ ಪಾತ್ರಗಳ ಸುತ್ತ ಸಿನಿಮಾದ ಕಥೆ ಸಾಗುತ್ತದೆ. ಪಾಯಲ್ ಎಂಬ ಪಾತ್ರದಲ್ಲಿ ದೀಪಿಕಾದಾಸ್ ಅವರು ಕಾಣಿಸಿಕೊಂಡಿದ್ದಾರೆ. ನಿಜ ಜೀವನದಲ್ಲೂ ಅಡ್ವೆಂಚರ್ಸ್ ಹಾಗೂ ಜರ್ನಿಯಲ್ಲಿ ಆಸಕ್ತಿಯಿರುವ ದೀಪಿಕಾದಾಸ್ ಅವರಿಗೆ ಇದು ಹೇಳಿ ಮಾಡಿಸಿದ ಪಾತ್ರ. ಈವರೆಗೂ ನೀವು ನೋಡಿರದ ದೀಪಿಕಾದಾಸ್ ಅವರನ್ನು ಈ ಚಿತ್ರದಲ್ಲಿ ನೋಡಬಹುದು. ನಮ್ಮ ಚಿತ್ರವೀಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ ಎಂದರು.


ಸತ್ಯಘಟನೆಗಳ ಸುರುಳಿ 'ಚಾಕ್ನ'



ಇತ್ತೀಚಿನ ದಿನಗಳಲ್ಲಿ ಸತ್ಯಘಟನೆಗಳನ್ನಾಧರಿಸಿದ ಚಿತ್ರಗಳನ್ನು ಪ್ರೇಕ್ಷಕರು ಹೆಚ್ಚು ಇಷ್ಟಪಡುತ್ತಿದ್ದಾರೆ. ಆ ಸಾಲಿಗೆ ಸೇರಲಿರುವ ಮತ್ತೊಂದು ಚಿತ್ರ 'ಚಾಕ್ನ'. ಬೂದಿಯೊಳಗಿನ ಕೆಂಡಗಳ ಕಥೆ ಎಂಬ ಟ್ಯಾಗ್‌ಲೈನ್ ಹೊಂದಿರುವ ಈ ಚಿತ್ರಕ್ಕೆ ಕೆ.ಪಳನಿ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಫಸ್ಟ್‌ಲುಕ್ ಅನಾವರಣ ಕಾರ್ಯಕ್ರಮ ನಡೆಯಿತು. ಜಂಭದಹುಡುಗಿ ಖ್ಯಾತಿಯ ಪ್ರಿಯಾಹಾಸನ್ ಟೀಸರ್ ರಿಲೀಸ್ ಮಾಡಿ ಮಾತನಾಡುತ್ತಾ, ಸಿನಿಮಾದಲ್ಲಿ ಪಾಸಿಟಿವ್, ನೆಗೆಟಿವ್ ಅಂಶಗಳನ್ನು ತೋರಿಸಿದಾಗ ಅದು ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ನಾವು ಒಳ್ಳೆಯ ಸಂದೇಶವನ್ನು ಹೇಳಿದಾಗ ಮಾತ್ರ ಸಮಾಜ ಹಾಗೂ ಸುತ್ತಮುತ್ತ ಇರೋರಿಗೆ ಅನುಕೂಲವಾಗುತ್ತದೆ ಎಂದರು.

ನಾವು ಒಳ್ಳೆಯದನ್ನು ಮಾಡಿದ್ರೆ ದೇವರು ಕಾಯ್ತಾನೆ. ಕೆಟ್ಟದ್ದನ್ನು ಮಾಡಿದಾಗ ಯಮನೇ ಶಿಕ್ಷೆ ಕೊಡಲು ಮುಂದೆ ಬರುತ್ತಾನೆ ಎಂಬ ಕಾನ್ಸೆಪ್ಟ್ ಮೇಲೆ ನಡೆಯುವ ಕಥೆಯಿದು. ಆರು ತಿಂಗಳ ಹಿಂದೆ ಪಾಂಡಿಚೇರಿಯಲ್ಲಿ ನಡೆದ ಘೋರ ಘಟನೆಯೊಂದು ಈ ಚಿತ್ರಕ್ಕೆ ಪ್ರೇರಣೆ, ಅಲ್ಲದೆ ನಾನು ಕಣ್ಣಾರೆ ಕಂಡಂಥ ಅನೇಕ ಸತ್ಯ ಸಂಗತಿಗಳನ್ನು ಈ ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದೇನೆ. ಗಾಂಜಾ ಸೇದುವವನು, ಒಬ್ಬ ಮದ್ಯವ್ಯಸನಿ, ಕಳ್ಳ, ಅತ್ಯಾಚಾರಿ ಹೀಗೆ ನಾಲ್ಕು ನಕಾರಾತ್ಮಕ ಪಾತ್ರಗಳು ಒಂದಡೆ ಸೇರಿದಾಗ ಏನಾಗುತ್ತದೆ. ಚಾಕ್ನ ಅಂಗಡಿ ಮಾಲೀಕನ ಕುಟುಂಬದಲ್ಲಿ ನಡೆಯುವ ಸನ್ನಿವೇಶಗಳು. ಪರಿಸ್ಥಿತಿ, ಸಂದರ್ಭಗಳಿಗೆ ತಕ್ಕಂತೆ ಮನುಷ್ಯ ಬದಲಾವಣೆಯಾಗದಿದ್ರೆ ಆತ ಯಾವ ರೀತಿ ಸಮಾಜಕ್ಕೆ ಮಾರಕವಾಗುತ್ತಾನೆ. ಕ್ರೈಂ ಅನ್ನೋದು ರಕ್ತ ಬೀಜಾಕ್ಷರ ಇದ್ದಂತೆ. ಅದನ್ನು ಮಾಡಿದವರಿಗೆ ದಂಡನೆ ಕೊಡಬೇಕು. ಮುಂದೆ ಬೇರೆಯವರು ಇಂತಹದನ್ನು ಮಾಡಲು ಭಯಪಡಬೇಕು ಎನ್ನುವಂತ ಶಿಕ್ಷೆ ನೀಡಿದಾಗ ಮಾತ್ರ ಅಪರಾಧಗಳು ಕಡಿಮೆಯಾಗುತ್ತವೆ. ಯಾವುದೇ ಗ್ರಾಫಿಕ್ಸ್ ಬಳಸದೆ, ಕಲಾವಿದರುಗಳಿಗೆ ಮೇಕಪ್ ಹಾಕದೆ, ರಿಯಲ್ ಲೊಕೇಶನ್‌ಗಳಲ್ಲಿ ಚಿತ್ರದ ಶೂಟಿಂಗ್ ನಡೆಸುತ್ತಿರುವುದು ವಿಶೇಷ. ಒಂದು ಪ್ರಮುಖ ಪಾತ್ರಕ್ಕೆ ಭೀಮ ಖ್ಯಾತಿಯ ಡ್ರ್ಯಾಗನ್ ಮಂಜು ನಟಿಸುತ್ತಿದ್ದಾರೆ ಎಂದು ಹೇಳಿದರು.

ಸಿನಿಪದಬಂಧ-542



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಬಿ. ಸಿ. ಪಾಟೀಲ್ ಅಭಿನಯದಲ್ಲಿ ಅರೆ ಬರೆಯಾಗಿರದ 'ದಿಟ'ವಿದೆ 4
3.ಮತ್ತೇ ಹೆಡೆ ಬಿಚ್ಚಿದ "ಸರ್ಪ" 5
5.ಪ್ರಜ್ವಲ್ ದೇವರಾಜ್ – ಮೇಘನಾ ರಾಜ್ ಅಭಿನಯಕ್ಕೆ ಜೀವಾ ನಿರ್ದೇಶಕ 3
6.ಕುಂಚ ಹಿಡಿದ ರವಿಚಂದ್ರನ್ ಸಾವಿರಕ್ಕೆ ಒಬ್ಬನು 4
7.ಚೌಕದ ದೀಪ ಹಚ್ಚಿದ ಹಿರಿಯ ನಿರ್ದೇಶಕ 5
8.ಮೃದಂಗ ಬಾರಿಸಿದಾಗ ಬಂದ ಸಾವು 3
10." ನಾನೇ ವೀಣೆ ನೀನೇ ತಂತಿ ಅವನೇ ವೈಣಿಕ..... ", ಗೀತೆಯ ಕರ್ತೃ! 3
11.ರವಿಚಂದ್ರನ್ ಕಂಡ ವದನ ಒಂದಲ್ಲ.. ಎರಡಲ್ಲ... ಹತ್ತು! 4
13.ಸ್ವರ್ಗದ ನಡುವೆ ಅಂಬಿಗ ಇದ್ದಾನೆ 3
14.ನವರಸ ನಾಯಕ ಜಗ್ಗೇಶ್ ಹಳ್ಳಿಯ ಮುಖ್ಯಸ್ಥ ! 3
15.ಪದವೀಧರ ಹಾಡಿದ ಹಾಡು 2
16.ಬಂಗಾರದ ಕಳಸ ಚಿತ್ರದ ನಾಯಕಿ 3
17.ಶ್ರೀಮುರಳಿಯ ಬಲದ ವೇಗದಲ್ಲಿ ರಾಟೆ ಇದೆ 3

ಮೇಲಿನಿಂದ ಕೆಳಕ್ಕೆ

1.ಅಂಬರೀಷ್ – ಅಂಬಿಕಾಳ "ಹುಣ್ಣಿಮೆ" ಪಂಚು ಅರುಣಾಚಲಂ ಕಥೆ ಆಧರಿಸಿದೆ 4
2.ಇಲ್ಲಿ ಇನ್ಸಿಲ್ ಕಳೆದುಕೊಂಡಿರುವ "ಕಿತ್ತೂರು ಚೆನ್ನಮ್ಮ" 5
3.ವಿಷ್ಣುವರ್ಧನ್ ಅಭಿನಯದಲ್ಲಿ ಕಾಣಿಸಿಕೊಂಡ ಸರ್ಪ ಸ್ತ್ರೀ 4
4.ಪುನೀತ್ ರಾಜ್‌ಕುಮಾರ್ "ಯುದ್ಧ ಶೂರ" 5
5.ಲೋಕೇಶ್ ಹತ್ತು ವೇಷ ತೊಟ್ಟಿದ್ದಾನೆ 10
7.ಓಹಿಲೇಶ್ವರ ಚಿತ್ರದ ಸಂಗೀತ ನಿರ್ದೇಶಕ 6
9.ಹಾಸ್ಯನಟ ಅರವಿಂದ ದಾಸಯ್ಯನಾಗಿ ಊದಿ ಹೊರ ಹೊಮ್ಮಿಸಿದ್ದಾನೆ ! 4
12.ಬುಡಕಟ್ಟು ಜನರ ಶೋಷಣೆ ತಡೆಯುವಲ್ಲಿ ನೆರವಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಕಥೆಯಿರುವ ಚಿತ್ರ 5

ಸಿನಿ ಪದಬಂಧ 541ರ ಉತ್ತರ

ಸ್ವ	ರ್ಣ	ಗೌ	ರಿ			ಗೌ	ರಿ	ಗ	ಣೇ	ಶ
ರ್ಣ		ರ		ಗ		ರಿ				
ಸಂ		ಮ್ಮ		ಣೇ		ಗಂ	ಗೆ	ಗೌ	ರಿ	
ಸಾ				ಶ		ಡ		ರೀ		
ರ	ವಿ	ಮೂ	ಡಿ	ಬಂ	ದ			ಶ	ರ್ವಾ	ಣಿ
	ಘ್ನ			ದ			ಶಾಂ			
ಈ	ಶ್ವ	ರ		ಏ	ಕ	ದಂ	ತ		ಶಂ	
	ರ			ನೇ			ಸ್ವ	ಸ್ತಿ	ಕ	
ಶಿ	ವಾ	ನಿ		ನ್		ಪಾ	ರೂ		ರಿ	
	ಹ		ಮಾ	ತಂ	ಗಿ		ಪಿ			
	ನ			ದ		ರಾ	ಣಿ	ಹೊ	ನ್ನ	ಮ್ಮ

ವಿಜೇತರು: ಮೀನಾಕ್ಷಿ, ಭಾರತೀಯ ಜೀವ ವಿಮಾ ನಿಗಮ, ಸಿಎ ಬ್ರಾಂಚ್, ಕೆಆರ್‌ಎಸ್ ರೋಡ್, ಯಾದವಗಿರಿ, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಸಂಧ್ಯಾ ಹಿಂದೆ ಬಿದ್ದಿರುವ ರಮೇಶ್-ಗಣೇಶ್!



ರಮೇಶ್ ಅರವಿಂದ್ ಮತ್ತು ಗಣೇಶ್ ಇಬ್ಬರೂ ಕನ್ನಡ ಚಿತ್ರರಂಗದಲ್ಲಿ ತ್ಯಾಗ ರಾಜರೆಂದೇ ಗುರುತಿಸಿಕೊಂಡವರು. ಈಗ ಇವರಿಬ್ಬರೂ Your's Sincerely ರಾವ್' ಚಿತ್ರದಲ್ಲಿ ಜೊತೆಯಾ ಗಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್, ಹಲವು ವರ್ಷಗಳ ಹಿಂದೆ ನಾನು ಭೂಮಿಕಾ ಎಂಬ ಹುಡುಗಿಯ ಪ್ರೀತಿಯಲ್ಲಿ ಬಿದ್ದಿದ್ದೆ. ಅವಳು ಬಿಟ್ಟು ಹೋಗಿದ್ದರಿಂದ ತ್ಯಾಗರಾಜನಾಗಿದ್ದೆ. ಕೆಲವು ವರ್ಷಗಳ ಹಿಂದೆ ನಂದಿನಿ ಎಂಬ ಹುಡುಗಿಯ ಹಿಂದೆ ಇವರು ಬಿದ್ದು, ಪರಪರ ಅಂತ ಪರಚಿಕೊಂಡಿದ್ದರು. ಈಗ ಸಂಧ್ಯಾ ಎಂಬ ಇನ್ನೊಂದು ಹುಡುಗಿಯ ಹಿಂದೆ ನಾವು ಬಿದ್ದಿದ್ದೀವಿ. ಆ ಸಂಧ್ಯಾ ಯಾರು? ಅವಳಿಗೂ ನಮಗೂ ಏನು ಸಂಬಂಧ? ಕಥೆಯೇನು? ಎಂಬುದೇ ಈ ಚಿತ್ರ. ಇಲ್ಲಿ ಸಂಧ್ಯಾಳಿಂದ ನನಗೆ ಸಮಸ್ಯೆ ಆದರೆ ಪಂಚರ್ ಹಾಕೋಕೆ ಗಣೇಶ್ ಇದ್ದಾರೆ. ಅವರಿಗೇನಾದರೂ ಸಮಸ್ಯೆಯಾದರೆ ಆಪ್ತಮಿತ್ರನಾಗಿ ನಾನಿರುತ್ತೇನೆ ಎಂದರು.

ಗಣೇಶ್ ನನಗೆ ಗೋಲ್ಡನ್‌ಸ್ಟಾರ್ ಆಗುವುದಕ್ಕಿಂತ ಮುಂಚಿನಿಂದ ಪರಿಚಯ. ರಿಯಾಲಿಟಿ ಶೋನಲ್ಲಿ ಅವರು ಶಂಕರ್ ನಾಗ್‌ರ ಮಿಮಿಕ್ರಿ ಮಾಡಿದ್ದು ನೋಡಿ, ಮುಂದೆ ಇವರು ಸ್ಟಾರ್ ಆಗುತ್ತಾರೆ ಎಂದಿದ್ದೆ. ಅದರಂತೆ ಸ್ಟಾರ್ ಆದರು. ನಂತರ ವೀಕೆಂಡ್ ವಿತ್ ರಮೇಶ್‌ಗೂ ಬಂದಿದ್ದರು. ಈ ಕಾಂಬಿನೇಷನ್ ಪ್ರೇಕ್ಷಕರಿಗೆ ಎಷ್ಟು ಖುಷಿ ಕೊಡುತ್ತದೆ, ನನಗೂ ಅಷ್ಟೇ ಖುಷಿ ಕೊಡುತ್ತದೆ ಎಂಬ ನಂಬಿಕೆಯಿದೆ. ಈ ತಂಡದ ಉದ್ದೇಶ ಚೆನ್ನಾಗಿದೆ. ಇಲ್ಲಿ ಪ್ರಾಮಾಣಿಕತೆ ಇದೆ ಎಂದು ಅವರು ಹೇಳಿದರು. ನಂತರ ಮಾತನಾಡಿದ ಗಣೇಶ್, ಈ ಚಿತ್ರದಲ್ಲಿ ನಮ್ಮಿಬ್ಬರ ನಡುವಿನ ಸಂಬಂಧ ಬೇರೆಯೇ ರೀತಿಯ ಫೀಲ್ ಕೊಡುತ್ತದೆ. ಬೇರೆ ಪ್ರಪಂಚಕ್ಕೆ ಕರೆದುಕೊಂಡು ಹೋಗುವಂತಹ ಕಥೆ ಚಿತ್ರದಲ್ಲಿದೆ ಎಂದರು. ಈ ಹಿಂದೆ ಪುಷ್ಪಕ ವಿಮಾನ ಮಾಡಿದ್ದ ವಿಖ್ಯಾತ್ ಈ ಚಿತ್ರದ ನಿರ್ದೇಶಕರು.

ಮೈಸೂರು ಮಿತ್ರ

ಸಂತೆಕೆರೆಕೋಡಿಯಲ್ಲಿ ಬಿಸಿಎಂ ಕೇಂದ್ರ ಉದ್ಘಾಟನೆ



ಸಂತೆಕೆರೆಕೋಡಿ ಡೈರಿ ಬಿಎಂಸಿ ಕೇಂದ್ರವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹುಣಸೂರು, ಸೆ.12– ತಾಲೂಕಿನ ಸಂತೆಕೆರೆಕೋಡಿ ಹಾಲು ಉತ್ಪಾದಕರ ಸಹಕಾರ ಸಂಘದ ಬಿಎಂಸಿ ಕೇಂದ್ರವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಮಳೆಯನ್ನೇ ನಂಬಿ ವ್ಯವಸಾಯ ಮಾಡುವವರ ಪರಿಸ್ಥಿತಿ ಕಷ್ಟಕರವಾಗಿದ್ದು, ಈ ಸಂದರ್ಭ ಹೈನುಗಾರಿಕೆ ಅವರಿಗೆ ನೆರವಾಗಲಿದೆ. ಹೈನುಗಾರಿಕೆ ದೊಡ್ಡ ಉದ್ಯಮವಾಗಿ ಬೆಳೆದು ಲಕ್ಷಾಂತರ ಜನರಿಗೆ ಉದ್ಯೋಗ ಕಲ್ಪಿಸಿದೆ. ಹೈನುಗಾರಿಕೆಯಿಂದ ಆದಾಯ ಕಾಣಬಹುದಾಗಿದ್ದು, ಈ ಅವಕಾಶ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಮೈಮುಲ್ ನಿರ್ದೇಶಕ ಕೆ.ಎಸ್.ಕುಮಾರ್ ಮಾತನಾಡಿ, ಸರ್ಕಾರವು ಹಾಲು ಉತ್ಪಾದಕರಿಗೆ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಅದನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಮಾಜಿ ಶಾಸಕ ವಿ.ಪಾಪಣ್ಣ ಅವರ ಪತ್ನಿ ಪಾರ್ವತಮ್ಮ, ಸಂಘದ ಅಧ್ಯಕ್ಷ ಸತೀಶ್ ಪಾಪಣ್ಣ, ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ, ಜಿಪಂ ಮಾಜಿ ಸದಸ್ಯ ಸುರೇಂದ್ರ, ತಾಪಂ ಮಾಜಿ ಸದಸ್ಯ ಪ್ರಭಾಕರ್, ಗ್ರಾಪಂ ಅಧ್ಯಕ್ಷ ಮಲ್ಲೇಶ್, ಗವಿನಾಯ್ಕ ಮತ್ತು ಅಧಿಕಾರಿಗಳು ಹಾಜರಿದ್ದರು.

ಶ್ರೇಷ್ಠ ಭಾರತ ನಿರ್ಮಾಣಕ್ಕಾಗಿ ಬಿಜೆಪಿ ಬಲಪಡಿಸಿ

ಬಿಜೆಪಿ ಸದಸ್ಯತ್ವ ಅಭಿಯಾನದಲ್ಲಿ ಸಂಸದ ಯದುವೀರ್ ಮನವಿ

ನಂಜನಗೂಡು, ಸೆ.12–ದೇಶದ ಪ್ರಜೆಗಳ ಬದುಕನ್ನು ಅಭಿವೃದ್ಧಿಪಡಿಸುವ ದೂರದೃಷ್ಟಿ ಇಟ್ಟುಕೊಂಡು ಸಂವಿಧಾನದ ಆಶಯಗಳಿಗೆ ತಕ್ಕಂತೆ, ತತ್ವ ಸಿದ್ಧಾಂತ ಅಳವಡಿಸಿಕೊಂಡು ಕೆಲಸ ಮಾಡುತ್ತಿರುವ ಏಕೈಕ ಪಕ್ಷ ಬಿಜೆಪಿ. ಹೀಗಾಗಿ ಶ್ರೇಷ್ಠ ಭಾರತ ನಿರ್ಮಾಣಕ್ಕಾಗಿ ಬಿಜೆಪಿ ಸದಸ್ಯರಾಗಿ ಪಕ್ಷ ಬಲಪಡಿಸಿ ಎಂದು ಸಂಸದ ಯದುವೀರ್ ಮನವಿ ಮಾಡಿದರು.

ನಗರದ ಅಶೋಕಪುರಂ, ರಾಜಾಜಿ ಕಾಲೋನಿ, ಶ್ರೀರಾಂಪುರ ಬಡಾವಣೆಗಳಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಂಜನಗೂಡಿಗೂ ಅರಮನೆಗೂ ಮೊದಲಿನಿಂದಲೂ ನಿಕಟ ಸಂಬಂಧವಿದೆ. ಆದ್ದರಿಂದ ಬಿಜೆಪಿ ಸದಸ್ಯತ್ವಕ್ಕೆ ನಂಜನಗೂಡಿನಲ್ಲಿ ಅಧಿಕೃತವಾಗಿ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಈ ಸಂಬಂಧ ಇನ್ನೂ ಗಟ್ಟಿಯಾಗಲಿದೆ. ಮೈಸೂರು ಸಂಸ್ಥಾನದ ರಾಜರು ಮುಂದಿನ ತಲೆಮಾರಿನ ದೂರದೃಷ್ಟಿಯನ್ನಿಟ್ಟುಕೊಂಡು ಕಟ್ಟಿದ ಸಂಸ್ಥೆಗಳು ಈಗಲೂ ಸಹ ಸಮಾಜಕ್ಕೆ ಸೇವೆ ನೀಡುತ್ತಾ ಬಂದಿವೆ. ಆದ್ದರಿಂದಲೇ ಮೈಸೂರು ರಾಜರ ಮೇಲೆ ಈಗಲೂ



ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಸಂಸದ ಯದುವೀರ್ ಚಾಲನೆ ನೀಡಿದರು.

ಜನರು ಗೌರವಿಟ್ಟುಕೊಂಡಿದ್ದಾರೆ. ಕೆಲವರು ತಮ್ಮ ವೈಯಕ್ತಿಕ ಲಾಭಕ್ಕಾಗಿ ಅಧಿಕಾರದ ಹಿಂದೆ ಬೀಳುತ್ತಾರೆ. ಇದಕ್ಕೆಲ್ಲಾ ಪರಿಹಾರ ಬಿಜೆಪಿ ಪಕ್ಷವೊಂದೆ. ಬಿಜೆಪಿ ಒಂದು ಜವಾಬ್ದಾರಿಯುತ ಪಕ್ಷವಾಗಿದ್ದು, ಮುಂದಿನ 23 ವರ್ಷಗಳಲ್ಲಿ ಜನರ ಬದುಕನ್ನು ಅಭಿವೃದ್ಧಿಪಡಿಸಿ ವಿಕಸಿತ ಭಾರತವನ್ನಾಗಿ ರೂಪಿಸಬೇಕೆಂಬ ದೂರದೃಷ್ಟಿಯನ್ನು ಪ್ರಧಾನಿ ಮೋದಿ ಹೊಂದಿದ್ದಾರೆ. ದೇಶದ ಪರಂಪರೆ ಸಂರಕ್ಷಣೆ, ನಮ್ಮ ಮುಂದಿನ ತಲೆಮಾರುಗಳಿಗೆ ಲಾಭದಾಯಕವಾಗುವ ಕೆಲಸ ಮಾಡುವ ಸಲುವಾಗಿ ಎಲ್ಲರೂ ಬಿಜೆಪಿ ಪಕ್ಷದ ಲಿಂಕ್ ಮೂಲಕ ಸದಸ್ಯತ್ವ ಪಡೆದು ದೇಶವನ್ನು ಜಗತ್ತಿನಲ್ಲೇ ಶ್ರೇಷ್ಠ ಭಾರತವನ್ನಾಗಿ ನಿರ್ಮಿಸಲು ಕೈ ಜೋಡಿಸಿ ಎಂದು ಕರೆ ನೀಡಿದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಪ್ರಧಾನಿ ಮೋದಿ ಅವರ ಸ್ವಚ್ಛ ಭಾರತ್ ಅಭಿಯಾನ ಇಡೀ ಪ್ರಪಂಚದಲ್ಲೇ ಸಂಚಲನ ಮೂಡಿಸಿದೆ. ಅಲ್ಲದೆ ಭಾರತವನ್ನು ವಿಶ್ವಗುರುವನ್ನಾಗಿ ರೂಪಿಸಲು ದುಡಿಯುತ್ತಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲೂ ಬಿಜೆಪಿ ಪಕ್ಷ ಅಧಿಕಾರ ಹಿಡಿಯಲಿದೆ. ಆದ್ದರಿಂದ ಪ್ರಧಾನಿ ಮೋದಿ ಅವರ ಕೈ ಬಲಪಡಿಸಲು ಹಾಗೂ ಪಕ್ಷ ಬಲಗೊಳಿಸಲು ಹೆಚ್ಚು ಸದಸ್ಯರನ್ನು ನೋಂದಾಯಿಸಿ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಪ್ರತಿ 6 ವರ್ಷಗಳಿಗೊಮ್ಮೆ ಸದಸ್ಯರನ್ನು ಹೆಚ್ಚಿಸುವ ಕೆಲಸವಾಗಲಿದೆ. ಕಳೆದ 6 ದಿನಗಳಲ್ಲಿ 2.5 ಕೋಟಿ ಸದಸ್ಯರನ್ನು ನೋಂದಣಿ ಮಾಡಲಾಗಿದೆ. ಪ್ರತಿ ಬೂತ್‌ನಲ್ಲಿ 300ಕ್ಕೂ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿ ಪಕ್ಷಕ್ಕೆ ಬಲತುಂಬಿ ಎಂದರು.

ಇದೇ ವೇಳೆ ಬಿಜೆಪಿ ಮುಖಂಡರಾದ ಎಸ್.ಮಹದೇವಯ್ಯ, ಸುಬ್ಬಣ್ಣ, ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು, ನಗರಸಭಾ ಸದಸ್ಯರಾದ ದೇವು, ಮಹದೇವಪ್ರಸಾದ್, ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಬಾಲಚಂದ್ರ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಮಂಗಳಾ ಸೋಮಶೇಖರ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎನ್.ಸಿ.ಬಸವಣ್ಣ ಮುಖಂಡರಾದ ಶ್ರೀನಿವಾಸರೆಡ್ಡಿ, ಶಂಕರಪ್ಪ ಜಗದೀಶ್, ಗುರುಸ್ವಾಮಿ, ಸಂಜಯ್‌ಶರ್ಮ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ಆರೋಗ್ಯ, ಸ್ವಚ್ಛತೆ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ

ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೂಚನೆ

ಸಾಲಿಗ್ರಾಮ, ಸೆ.12– ಆಶಾ ಕಾರ್ಯಕರ್ತೆಯರು ಮನೆ ಮನೆ ಭೇಟಿ ನೀಡಿ ಆರೋಗ್ಯ ಮತ್ತು ಸ್ವಚ್ಛತೆ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ, ಜನತೆಯ ಆರೋಗ್ಯದ ಬಗ್ಗೆ ಸಮೀಕ್ಷೆ ನಡೆಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕಾಧಿಕಾರಿ ಕೆ.ಎಂ.ಗಾಯತ್ರಿ ಸೂಚನೆ ನೀಡಿದರು.

ಸಾಲಿಗ್ರಾಮ ತಾಲೂಕಿನ ಶೀಗೆವಾಳು ಗ್ರಾಪಂ ವ್ಯಾಪ್ತಿಯ ಬೆಟ್ಟಹಳ್ಳಿ ಗ್ರಾಮದಲ್ಲಿ ವಾಂತಿ–ಭೇದಿಯಿಂದಾಗಿ ಅಸ್ವಸ್ಥಗೊಂಡವರು ಚಿಕಿತ್ಸೆ ಪಡೆಯುತ್ತಿರುವ ತಾತ್ಕಾಲಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಆಶಾ ಕಾರ್ಯಕರ್ತೆಯರು ತಂಡ ರಚಿಸಿ ಗ್ರಾಮದ ಪ್ರತಿಯೊಂದು ಮನೆ ಮನೆಗೆ ಭೇಟಿ ನೀಡಬೇಕು. ಮಕ್ಕಳಿಂದ ವೃದ್ಧರವರೆಗೂ ಆರೋಗ್ಯ ವಿಚಾರಿಸಿ, ಮನೆಯ ಶುಚಿತ್ವ, ಶುದ್ಧ ಕುಡಿಯುವ ನೀರು ಹಾಗೂ ಓಆರ್‌ಎಸ್ ಪುಡಿಯನ್ನು ಸೇವಿಸುವ ಬಗ್ಗೆ ಮಾಹಿತಿ ನೀಡಬೇಕು ಎಂದರು.

ಮುಂಜಾಗ್ರತಾ ಕ್ರಮವಾಗಿ ಗ್ರಾಮದ



ಬೆಟ್ಟಹಳ್ಳಿ ಗ್ರಾಮಕ್ಕೆ ಜಿಪಂ ಸಿಇಓ ಗಾಯತ್ರಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರ್ಕಾರಿ ಶಾಲೆಯಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆದು ಜನರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಈಗಾಗಲೇ ವಾಂತಿ ಭೇದಿ ಕಂಡು ಬಂದವರು ಆರೋಗ್ಯವಾಗಿದ್ದಾರೆ. ಕಲುಷಿತ ನೀರು ಸೇವಿಸಿ ಗ್ರಾಮದಲ್ಲಿ ಓರ್ವ ಮೃತಪಟ್ಟಿದ್ದಾರೆ. ಸದರಿ ಪ್ರಕರಣದಲ್ಲಿ ಆರೋಗ್ಯಾಧಿಕಾರಿ ವರದಿ ಪ್ರಕಾರ ಅವರು ಅನಾರೋಗ್ಯದಿಂದ ಸಾವಿಗೀಡಾಗಿದ್ದಾರೆ ಎಂದು ಮಾಹಿತಿ ನೀಡಿದರು.

ಗ್ರಾಪಂ ವ್ಯಾಪ್ತಿಯ ಚರಂಡಿ, ನೀರಿನ ಟ್ಯಾಂಕ್ ಮತ್ತು ಸ್ಥಾವರಗಳನ್ನು ಕೂಡಲೇ ಸ್ವಚ್ಛಗೊಳಿಸಿ. ಶುದ್ಧ ಕುಡಿಯುವ ನೀರನ್ನು ಪೂರೈಸುವಂತೆ ಹಾಗೂ ಆರೋಗ್ಯ ಕೇಂದ್ರದ ಬಗ್ಗೆ ನಿಗಾ ವಹಿಸುವಂತೆ ಪಿಡಿಓಗೆ ಸೂಚಿಸಿದರು. ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸುವ ಕೊಟ್ಟಿಗೆ, ಕೆರೆ, ನೀರುಗಾಲುವೆ, ಮನೆ ನಿರ್ಮಾಣದ ಕಾಮಗಾರಿಯನ್ನು ಕೈಗೆತ್ತಿಕೊಂಡು ಗ್ರಾಮದ ಅಭಿವೃದ್ಧಿಗೆ ಸಹಕರಿಸುವಂತೆ ಅಧ್ಯಕ್ಷರಿಗೆ ಸಲಹೆ ನೀಡಿದರು.

ಬಳಿಕ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿನ ಮೂಲಸೌಕರ್ಯದ ಬಗ್ಗೆ ಮಾಹಿತಿ ಪಡೆದು, ಅಡುಗೆ ಮನೆಗೆ ತೆರಳಿ ಆಹಾರದ ಗುಣಮಟ್ಟ ಪರಿಶೀಲಿಸಿದರು. ಅಡುಗೆ ಮನೆ ಶುಚಿಯಾಗಿಟ್ಟುಕೊಳ್ಳಬೇಕು. ಮಕ್ಕಳಿಗೆ ಪೌಷ್ಟಿಕಾಂಶವುಳ್ಳ ಆಹಾರ ನೀಡಬೇಕು ಎಂದು ಸೂಚಿಸಿದರು.

ಈ ವೇಳೆ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್, ತಹಸೀಲ್ದಾರ್ ನರಗುಂದ, ತಾಪಂ ಇಓ ಕುಲ್ ದೀಪ್, ಪಿಡಿಓ ಶ್ರೀಧರ್, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಸ್ಥರು ಹಾಜರಿದ್ದರು.

ನಾರಾಯಣಪುರ ಪಿಎಸಿಎಸ್‌ಗೆ 9 ಲಕ್ಷ ನಿವ್ವಳ ಲಾಭ



ನಾರಾಯಣಪುರ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಎನ್.ಎಸ್.ವಿಠಲ ಮಾತನಾಡಿದರು.

ಕೆ.ಆರ್.ನಗರ, ಸೆ.12– ನಾರಾಯಣಪುರ ಕೃಷಿ ಪತ್ತಿನ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 9 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಎನ್.ಎಸ್.ವಿಠಲ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಮತ್ತಷ್ಟು ಲಾಭ ಗಳಿಕೆಯ ಗುರಿ ಹೊಂದಲಾಗಿದೆ ಎಂದರು. ಸಂಘದ ಸದಸ್ಯರಿಗೆ ಆದ್ಯತೆ ಮೇರೆಗೆ ಸಾಲ ನೀಡುತ್ತಿದ್ದು, ಹೊಸ ಸದಸ್ಯರಿಗೂ ಅವಕಾಶ ಕೊಡಲಾಗಿದೆ. ರೈತರು ನಮ್ಮೊಂದಿಗೆ ಕೈ ಜೋಡಿಸಿ ಉತ್ತಮ ಕೆಲಸ ಮಾಡಲು ಸಲಹೆ ಮತ್ತು ಸಹಕಾರ ನೀಡಬೇಕು ಎಂದು ಕೋರಿದರು.

ಪ್ರತಿಯೊಬ್ಬ ಸದಸ್ಯರು ತಪ್ಪದೇ ಯಶಸ್ವಿನಿ ಕಾರ್ಡ್ ಮಾಡಿಸಿಕೊಳ್ಳಬೇಕು. ಸರ್ಕಾರದಿಂದ ಸಹಕಾರ ಇಲಾಖೆ ಮೂಲಕ ದೊರೆಯುವ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಲು ಕಡ್ಡಾಯವಾಗಿ ಸಂಘದ ಷೇರು ಸದಸ್ಯರಾಗಿ ಬಡ್ಡಿ ರಹಿತ ಸಾಲ ಪಡೆದುಕೊಂಡು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂದರು. ಸಂಘದ ಮಾಜಿ ಅಧ್ಯಕ್ಷರಾದ ಅಣ್ಣಯ್ಯ, ಅಪ್ಪಾಜಿಗೌಡ, ರೈತ ಸದಸ್ಯರಾದ ಕೆ.ಎಂ.ಶ್ರೀನಿವಾಸ್, ಗೋವಿಂದರಾಜು, ಕಾಂತರಾಜು, ಶಶಿಕುಮಾರ್, ಕಾರ್ಯಪ್ಪ, ಸಣ್ಣೇಗೌಡ, ಸುಂದರ್ ಮತ್ತಿತರರು ಹಲವು ಸಲಹೆ ಮತ್ತು ಸೂಚನೆ ನೀಡಿದರು.

ಸಂಘದ ಉಪಾಧ್ಯಕ್ಷ ಎನ್.ಎಸ್.ಮಂಜುನಾಥ್, ನಿರ್ದೇಶಕರಾದ ಎನ್.ಹೆಚ್.ರುದ್ರಸ್ವಾಮಿ, ಡಿ.ಎಸ್.ದಿವಾಕರ್, ಎಸ್.ಕೆ.ಶಶಿಕುಮಾರ್, ಎನ್.ಯೋಗೇಶ್, ಎನ್.ಎಂ.ಪ್ರಸನ್ನಕುಮಾರ್, ಶಿವಶಂಕರ್, ರುದ್ರ ನಾಯಕ, ಮಹಾಲಿಂಗಯ್ಯ, ಹೇಮಾವತಿ, ಅನುರಾಧ, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಉಮೇಶ್, ಸಿಇಓ ಕೆ.ಜಯಣ್ಣ, ಸಿಬ್ಬಂದಿಗಳಾದ ಎಸ್.ಶ್ರೀನಿವಾಸ್, ಎಸ್.ಆರ್.ಯೋಗೇಶ್, ಎಂ.ಮಹದೇವ, ಎನ್.ಟಿ.ರೇವಣ್ಣ ಮತ್ತಿತರರಿದ್ದರು.

ಸರ್ಕಾರಿ ಶಾಲೆ ಮಕ್ಕಳು ಶೈಕ್ಷಣಿಕ ಪ್ರಗತಿ ಸಾಧಿಸಿ

ಆರ್ಯಭಟ ಪ್ರಶಸ್ತಿ ಪುರಸ್ಕೃತ ರವಿ ಸಂತು



ಬಿ.ಮಟಕೆರೆ ಕರ್ನಾಟಕ ಪಬ್ಲಿಕ್ ಶಾಲೆಗೆ ವಾಟರ್ ಪ್ಯೂರಿಫೈಯರ್ ವಿತರಿಸಲಾಯಿತು.

ಸರಗೂರು, ಸೆ.12– ಸರ್ಕಾರಿ ಶಾಲೆ ಮಕ್ಕಳು ಶೈಕ್ಷಣಿಕ ಪ್ರಗತಿ ಸಾಧಿಸಬೇಕು ಎಂದು ಆರ್ಯಭಟ ಪ್ರಶಸ್ತಿ ಪುರಸ್ಕೃತ ರವಿ ಸಂತು ತಿಳಿಸಿದರು.

ತಾಲೂಕಿನ ಬಿ.ಮಟಕೆರೆ ಕರ್ನಾಟಕ ಪಬ್ಲಿಕ್ ಶಾಲೆಗೆ ಪ್ರಿಂಟರ್, ವಾಟರ್ ಪ್ಯೂರಿಫೈಯರ್, ಕ್ರೀಡಾ ಹಾಗೂ ಕಲಿಕಾ ಸಾಮಗ್ರಿ ವಿತರಿಸಿ ಮಾತನಾಡಿದ ಅವರು, ಸೇವೆ ಎಂಬ ಪದವೇ ನಿಸ್ವಾರ್ಥ. ದಯೆ ಎಂಬ ಪದವೇ ಪರಮಾರ್ಥ. ಇದನ್ನು ಮನಗೊಂಡ ಪ್ರತಿಯೊಬ್ಬರೂ ಬಡ ವಿದ್ಯಾರ್ಥಿಗಳ ನೆರವಿಗೆ ಧಾವಿಸೋಣ. ಮಟ್ಟಿ ಕಲಾವಿದರಾಗಿ ಅದರಲ್ಲಿ ಬಳಗ ಕಟ್ಟಿ ತಮ್ಮ ಕೈಲಾದ ಸೇವೆ ಮಾಡುತ್ತಾ 32 ಸರ್ಕಾರಿ ಶಾಲೆಗೆ ಉಪಯುಕ್ತವಾದ ಡೈರಿ, ಶಿಕ್ಷಣ ಕಲಿಸಿದ ಗುರುಗಳಿಗೆ, ಮಕ್ಕಳಿಗೆ ಸೇವಾ ಪ್ರಶಸ್ತಿ ಹಾಗೂ ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಿಸಲಾಗಿದೆ. ಇದನ್ನು 100 ಶಾಲೆಗಳಿಗೆ ನಮ್ಮ ಬಳಗದಿಂದ ವಿಸ್ತರಿಸುವ ಗುರಿ ಹೊಂದಲಾಗಿದೆ. ಪ್ರತಿಯೊಬ್ಬರೂ ಇಂತಹ ಸೇವಾ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಇದೇ ವೇಳೆ ದಾನಿ ದುಬೈ ವಿಜಯ್ ಗುಚ್ಚ ಹಾಗೂ ಸರಗೂರು ಠಾಣೆ ಎಸ್‌ಐ ನಂದೀಶ್ ಕುಮಾರ್, ರವಿ ಸಂತು ಬಳಗವನ್ನು ಶಾಲೆ ವತಿಯಿಂದ ಅಭಿನಂದಿಸಲಾಯಿತು. ಕರ್ನಾಟಕ ಸರ್ಕಾರಿ ಪಬ್ಲಿಕ್ ಶಾಲೆಯ ಎಲ್ಲಾ ಶಿಕ್ಷಕರನ್ನು ರವಿ ಸಂತು ಬಳಗದಿಂದ ಸನ್ಮಾನಿಸಲಾಯಿತು. ಕಲಾವಿದರಾದ ನಾಗಶ್ರೀ, ಶ್ರೀಕಂಠ, ಕಿರಣ್, ನವೀನ್, ಲೋಕಿ, ಸುರೇಶ್‌ಗೌಡ, ರವಿಹಂಸ, ಸುಧಾಕರ್ ಹಾಗೂ ಶಾಲೆ ಉಪ ಪ್ರಾಂಶುಪಾಲ ಮಾರುತಿಗೌಡ, ಸಹ ಶಿಕ್ಷಕರಾದ ಪ್ರಸಾದ್, ಹರೀಶ್, ಗುತ್ತಲೆಗೌಡ, ಮೋಹನ್ ಕುಮಾರ್, ರಕ್ಷಿತ್, ಅಶೋಕ್, ಅಥಿತಿ ಶಿಕ್ಷಕರಾದ ವಿನೋದ್, ಸುರೇಶ್, ಉದಯ್ ಕುಮಾರ್, ವಿಜಯಲಕ್ಷ್ಮೀ ಹಾಗೂ ಶಾಲಾ ಮಕ್ಕಳು ಇದ್ದರು.

ಹೆಗ್ಗಡಹಳ್ಳಿ ಪಿಎಸಿಎಸ್‌ಗೆ 3.84 ಲಕ್ಷ ಲಾಭ



ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಪ್ರಕಾಶ್ ಮಾತನಾಡಿದರು.

ನಂಜನಗೂಡು, ಸೆ.12– ತಾಲೂಕಿನ ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 3.84 ಲಕ್ಷ ರೂ. ಲಾಭದಲ್ಲಿ ಮುನ್ನಡೆದಿದ್ದು, ಸಂಘ ಆರ್ಥಿಕವಾಗಿ ಸದೃಢವಾಗಿ ಬೆಳೆಯಲು ರೈತರು ಸಕಾಲದಲ್ಲಿ ಸಾಲ ಮರು ಪಾವತಿಸಬೇಕು ಎಂದು ಸಂಘದ ಅಧ್ಯಕ್ಷ ಡಿ.ಎಂ.ಪ್ರಕಾಶ್ ತಿಳಿಸಿದರು.

ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘದಲ್ಲಿ ಈಗಾಗಲೇ 2000ಕ್ಕೂ ಹೆಚ್ಚು ಸದಸ್ಯರಿದ್ದು 8 ಕೋಟಿಗೂ ಅಧಿಕ ಸಾಲ ವಿತರಿಸಲಾಗಿದೆ. ಹೈನುಗಾರಿಕೆ ಉತ್ತೇಜನಕ್ಕೆ 81 ಲಕ್ಷದವರೆಗೆ ಸಾಲ ನೀಡಲಾಗಿದೆ. ಬೆಳೆ ಸಾಲ 4.50 ಕೋಟಿ, ಎಂಟಿಎಲ್ 52 ಲಕ್ಷ ಸಾಲ ನೀಡಲಾಗಿದೆ. ಪ್ರತಿ ರೈತರಿಗೆ ಗರಿಷ್ಠ 3 ಲಕ್ಷದವರೆಗೆ ಬಡ್ಡಿ ರಹಿತ ಸಾಲ ವಿತರಿಸಲಾಗುತ್ತಿದೆ. ಆದರೆ ಸಾಲ ಪಡೆದ ರೈತರು ಸಕಾಲದಲ್ಲಿ ಸಾಲ ಮರುಪಾವತಿ ಮಾಡದ ಕಾರಣ ಸುಸ್ತಿ ಸಾಲ ಹೆಚ್ಚಾಗಿದೆ. ಕಳೆದ ಬಾರಿ 4.94 ಲಕ್ಷ ಲಾಭವಾಗಿತ್ತು. 29 ಲಕ್ಷ ಸುಸ್ತಿ ಸಾಲ ಇತ್ತು. ಈ ಬಾರಿ ಸುಸ್ತಿ ಸಾಲ ಏರಿಕೆ ಆದ ಕಾರಣ 1 ಲಕ್ಷ ಲಾಭ ಕಡಿಮೆಯಾಗಿದೆ. ಮುಂದಿನ ಬಾರಿ 10 ಲಕ್ಷ ಲಾಭ ನಿರೀಕ್ಷಿಸಲಾಗಿದೆ. ಸದಸ್ಯರ ಸಹಕಾರದಿಂದ ಕಳೆದ 3 ವರ್ಷದಿಂದ ಸಂಘ ಲಾಭದಲ್ಲಿ ಮುನ್ನಡೆಯುತ್ತಿದೆ. ಸಂಘ ಪುನಶ್ಚೇತನಗೊಳ್ಳಲು ಹೊಸ ಸದಸ್ಯರನ್ನು ನೋಂದಾಯಿಸಿ ಅವರಿಗೆ ಸದಸ್ಯತ್ವ ಪಡೆದುಕೊಳ್ಳುವಂತೆ ಕ್ರಮ ವಹಿಸಬೇಕಿದೆ ಎಂದರು.

ಈ ವೇಳೆ ಸಂಘದ ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಕೆ.ವಿ.ಶಿವಬಸಪ್ಪ ಎಚ್.ಎಂ.ಮಲ್ಲೇಶ್, ವಿ.ಎಸ್.ಮಹದೇವಸ್ವಾಮಿ, ಬಸವಶೆಟ್ಟಿ, ಕಮಲಮ್ಮ ಚಿಕ್ಕನಿಂಗಯ್ಯ, ಹೆಚ್.ಎಸ್.ವೆಂಕಟೇಶ್, ನಾಗಮ್ಮ ನಿರಂಜನ್, ಸಿಇಓ ಎಚ್.ಎಸ್.ರವಿ, ಸಿಬ್ಬಂದಿ ಚಿಕ್ಕನಿಂಗಯ್ಯ, ಮಾಜಿ ಸದಸ್ಯ ಬಸವರಾಜು, ಗ್ರಾಪಂ ಸದಸ್ಯೆ ರೇವಮ್ಮ, ದೀಪು, ಸೇರಿದಂತೆ ಸಹಕಾರಿ ಬಂಧುಗಳು ಭಾಗವಹಿಸಿದ್ದರು.

ತಿ.ನರಸೀಪುರದಲ್ಲಿ ವಿಜೃಂಭಣೆಯ ಗಣೇಶೋತ್ಸವ



ಶ್ರೀವರಸಿದ್ಧಿ ವಿನಾಯಕ ಗೆಳೆಯರ ಬಳಗದಿಂದ ಗಣೇಶೋತ್ಸವ ಆಚರಿಸಲಾಯಿತು.

ತಿ.ನರಸೀಪುರ, ಸೆ.12– ಕಳೆದ ಬಾರಿಗಿಂತ ಈ ಬಾರಿ ಗಣೇಶ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದ್ದೇವೆ ಎಂದು ಪುರಸಭಾ ಸದಸ್ಯ ಎಸ್.ಕೆ.ಕಿರಣ್ ತಿಳಿಸಿದರು.

ಪಟ್ಟಣದ 23ನೇ ವಾರ್ಡ್‌ನ ದಾಸ ನಾಯಕರ ಬೀದಿಯಲ್ಲಿ ಶ್ರೀವರಸಿದ್ಧಿ ವಿನಾಯಕ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿರುವ ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ನಾಡಿನ ಜನರ ಆರಾಧ್ಯ ದೈವ ಶ್ರೀಗಣೇಶನ ಕೃಪೆಯಿಂದ ನಾಡಿನಲ್ಲಿ ಉತ್ತಮ ಮಳೆಯಾಗಿದ್ದು, ಉತ್ತಮ ಬೆಳೆಯಾಗಲಿ. ಅಲ್ಲದೇ ರೈತರ ಬೆಳೆಗೆ ಬೆಂಬಲ ಬೆಲೆ ಸಿಗಲಿ ಎಂದು ಪ್ರಾರ್ಥಿಸಲಾಗಿದೆ ಎಂದರು. ಇದೇ ವೇಳೆ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಮಾಡಿ, ಅದ್ಧೂರಿಯಾಗಿ ವಿಸರ್ಜನೆ ಮಾಡಲಾಯಿತು. ಈ ಸಂದರ್ಭ ವಿನಾಯಕ ಗೆಳೆಯರ ಬಳಗದ ಪುರುಷೋತ್ತಮ್, ರಂಗನಾಥ್, ಪುನೀತ್, ಮನು, ಭಾಸ್ಕರ್, ಭೈರವ, ಸ್ವಾಮಿ, ಶ್ರೇಯಸ್, ಬಸವ ಹಾಗೂ ಇನ್ನಿತರರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ



ಪ್ರತಿಭಾ ಕಾರಂಜಿ, ಕಲೋತ್ಸವವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಸೆ.12– ಪಟ್ಟಣದ ಆದರ್ಶ ವಿದ್ಯಾಲಯದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಪಂ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಚೇರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಯೋಗದಲ್ಲಿ ನಡೆದ ಕೋಟೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಕಾಂತರಾಜು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಲ್ಲಿ ಪ್ರತಿಭಾ ಕಾರಂಜಿ ಪ್ರಮುಖವಾದದು. ಪ್ರತಿಭಾ ಕಾರಂಜಿಯಲ್ಲಿ ಮಕ್ಕಳ ಪ್ರತಿಭೆ ಅನಾವರಣವಾಗಲಿದೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚು ಒತ್ತು ನೀಡಬೇಕು. ತಾಲೂಕು ಶಿಕ್ಷಣ ಕ್ಷೇತ್ರದಲ್ಲಿ ಮುಂದುವರೆಯಲು ಕ್ರೀಡೆ, ಪ್ರತಿಭಾ ಕಾರಂಜಿ ಮತ್ತು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಉನ್ನತ ಮಟ್ಟದ ಸಾಧನೆ ತೋರಬೇಕು ಎಂದರು.

ಪುರಸಭಾ ಸದಸ್ಯ ಐಡಿಯಾ ವೆಂಕಟೇಶ್ ಮಾತನಾಡಿ, ಶಿಕ್ಷಕರು ಮಕ್ಕಳಿಗೆ ಭೋದಿಸುವುದರ ಜೊತೆಗೆ ಪಠ್ಯೇತರ ಚಟುವಟಿಕೆಯತ್ತ ಗಮನ ಹರಿಸಬೇಕು. ಅಲ್ಲದೇ ಸಮಾಜದಲ್ಲಿ ಉತ್ತಮ ರೀತಿ ಬದುಕುವ ರಿವಾಜುಗಳನ್ನು ತಿಳಿ ಹೇಳಬೇಕು ಎಂದರು.

ಪ್ರತಿಭಾ ಕಾರಂಜಿಯಲ್ಲಿ 37 ವಿದ್ಯಾರ್ಥಿಗಳು ವಿವಿಧ ಪ್ರತಿಭೆಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಆದರ್ಶ ವಿದ್ಯಾಲಯದ ಎಸ್‌ಡಿಎಂಸಿ ಅಧ್ಯಕ್ಷ ದಿನೇಶ್, ಉಪಾಧ್ಯಕ್ಷೆ ದಾಕ್ಷಾಯಿಣಿ, ಬಿಆರ್‌ಸಿ ಕೃಷ್ಣಯ್ಯ, ಶಿಕ್ಷಣ ಸಂಯೋಜಕರಾದ ಕೃಷ್ಣಮೂರ್ತಿ, ಚಿಕ್ಕನಾಯಕ, ಜಯರಾಮು, ನಂಜರಾಜು, ಸಿಆರ್‌ಪಿ ಎಂ.ದೀಪ, ಪುರಸಭಾ ಸದಸ್ಯರಾದ ಮಧುಕುಮಾರ್, ರಾಜು, ಮಿಲ್ ನಾಗರಾಜು, ಆಸಿಫ್ ಇಕ್ಬಾಲ್, ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕ ನರೇಂದ್ರ ಬಾಬು, ಉರ್ದು ಶಾಲೆ ಮುಖ್ಯ ಶಿಕ್ಷಕ ಶೇಖರ್, ಕೆಂಪರಾಜು, ಬಿಆರ್‌ಪಿಗಳಾದ ಶಿವಶಂಕರ್, ಬಸವರಾಜು, ಜಯಶಂಕರ್, ಪ್ರಕಾಶ್, ಪ್ರಮೋದ್, ಪುರುಷೋತ್ತಮ್, ಪ್ರಭು, ರೂಪಾ, ಶಿಕ್ಷಣ ಸಂಯೋಜಕ ಜಯರಾಮ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಎಸ್.ಮಹದೇವು, ಶಿವಕುಮಾರ್, ವಿವಿಧ ಶಾಲೆ ಮುಖ್ಯ ಶಿಕ್ಷಕರಾದ ರಾಮಚಂದ್ರ, ಶೇಖರ್, ಅಂಥೋಣಿ ಪ್ರಭು, ಸಿದ್ದರಾಜು, ಚಂದ್ರಕುಮಾರ್, ಯಶವಂತ್, ನಂಜಯ್ಯ, ಮಂಜುನಾಥ್, ಅಶೋಕ್, ಗುರುಸ್ವಾಮಿ, ಚನ್ನನಾಯಕ, ಅಂಕೇಗೌಡ, ಸರಿತಾ, ಸರಸ್ವತಿ, ಇದ್ದರು.

ಷೇರುದಾರರಿಂದ ಹುನಗನಹಳ್ಳಿ ಡೈರಿ ಲಾಭದಾಯಕ

ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್

ತಿ.ನರಸೀಪುರ, ಸೆ.12– ಹಾಲು ಉತ್ಪಾದಕರ ಸಹಕಾರ ಸಂಘವು ಷೇರುದಾರರ ಸಹಕಾರದಿಂದ ಅತ್ಯಂತ ಯಶಸ್ವಿಯಾಗಿ ಲಾಭದಾಯಕವಾಗಿ ಮುನ್ನಡೆದಿದೆ ಎಂದು ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್ ತಿಳಿಸಿದರು.

ತಾಲೂಕಿನ ಹುನಗನಹಳ್ಳಿ ಡೈರಿ ಆವರಣದಲ್ಲಿ ಗುರುವಾರ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಕಳೆದ 22 ವರ್ಷಗಳಿಂದ ಸಂಘವು ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೇ ಯಶಸ್ವಿಯಾಗಿ ನಡೆದುಕೊಂಡು ಬಂದಿದ್ದು, ಸಂಘದ ಹೆಸರಿನಲ್ಲಿ ಕಟ್ಟಡ ನಿರ್ಮಾಣ ಮಾಡಲಾಗಿದೆ. ಪ್ರತಿವರ್ಷ ಉತ್ಪಾದಕರಿಗೆ ಬೋನಸ್ ವಿತರಿಸಲಾಗುತ್ತಿದ್ದು, ಸಂಘ ಖರೀದಿಸಿರುವ ಹಾಲು ಹಾಗೂ ಇಲ್ಲಿನ ವ್ಯವಹಾರ ಗಮನಿಸಿದಾಗ ಲಾಭಾಂಶ ಎಲ್ಲೂ ಸೋರಿಕೆಯಾಗದೇ ಸಂಪೂರ್ಣವಾಗಿ ಹೆಚ್ಚಿನ ನಿವ್ವಳ ಲಾಭ ಬಂದಿದೆ. ಬಂದಿರುವ ಬೋನಸ್ ಲಾಭಾಂಶದಲ್ಲಿ 3,02,062 ರೂ.ಗಳನ್ನು ಆಯುಧ ಪೂಜೆ ವೇಳೆಗೆ ಷೇರುದಾರರಿಗೆ ಹಂಚಿಕೆ ಮಾಡಲಾಗುತ್ತದೆ ಎಂದರು.



ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ವಿಸ್ತರಣಾಧಿಕಾರಿ ಆರ್.ಪ್ರಮೋದ್ ಮಾತನಾಡಿದರು.

ಹಾಲು ಉತ್ಪಾದಕರು ಡೈರಿಗೆ ಸರಬರಾಜು ಮಾಡುವ ಹಾಲಿನ ಪ್ರಮಾಣದ ಮೇಲೆ ಬೋನಸ್ ನಿರ್ಧಾರವಾಗುತ್ತದೆ. 100 ರೂ.ಗೆ 1.98 ರೂ, 1000 ರೂ.ಗಳಿಗೆ 20 ರೂ., 1 ಲಕ್ಷ ರೂ.ಗೆ 2 ಸಾವಿರ ಬೋನಸ್ ನೀಡಲಾಗುತ್ತದೆ. ಯಾರು ಹೆಚ್ಚು ಹಾಲನ್ನು ಸರಬರಾಜು ಮಾಡುತ್ತಾರೋ ಅವರಿಗೆ ಹೆಚ್ಚಿನ ಬೋನಸ್ ಸಿಗಲಿದ್ದು, ಇದರಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಈ ಬಾರಿ 5500 ರೂ. ಷೇರು ಡೆವಿಡೆಂಟ್ ಬಂದಿದ್ದು, ಪ್ರತಿ ಷೇರುದಾರರಿಗೆ 20 ರೂ. ಬರುವುದರಿಂದ ಸಂಘವು 3 ವರ್ಷಕ್ಕೊಮ್ಮೆ ಡೆವಿಡೆಂಟ್ ನೀಡಲು ನಿರ್ಧರಿಸಿದೆ ಎಂದರು. ಸಭೆಯಲ್ಲಿ ಹಾಲು ಉತ್ಪಾದಕರು ಗ್ರಾಮಕ್ಕೆ ಸಹಕಾರ ಸಂಘದಿಂದ ಶವ ಸಾಗಿಸುವ ವಾಹನ ಕೊಡಿಸುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಪ್ರಮೋದ್ 10 ರಿಂದ 12 ಲಕ್ಷ ರೂ. ಆಗುವುದರಿಂದ ಹಾಲು ಸರಬರಾಜುದಾರರ ಪೇಮೆಂಟ್‌ಗೆ ತೊಂದರೆಯಾಗುತ್ತದೆ. ಹೀಗಾಗಿ ಹಾಲು ಉತ್ಪಾದಕರು ಆಕಸ್ಮಿಕವಾಗಿ ಮರಣ ಹೊಂದಿದರೆ ಸಂಘದಿಂದ 15 ಸಾವಿರ ರೂ. ನೀಡುವ ಪದ್ಧತಿ ಮೊದಲಿನಿಂದ ಜಾರಿಯಲ್ಲಿದೆ ಎಂದರು.

ವಿಸ್ತರಣಾಧಿಕಾರಿ ಬಿ.ಎಸ್.ರಂಜಿತ ಸಂಘದ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, 2024–25ನೇ ಸಾಲಿನಲ್ಲಿ ಸಂಘದಲ್ಲಿ 1.75 ಕೋಟಿ ರೂ. ಹಾಲು ಖರೀದಿಯಾದರೇ ನಮ್ಮ ನಿರೀಕ್ಷಿತ ಲಾಭ 17 ಲಕ್ಷ ರೂ.ಗಳಾಗುತ್ತೆ. ಮುಂದಿನ ವರ್ಷ 8 ಲಕ್ಷ ರೂ. ಲಾಭ ನಿರೀಕ್ಷೆ ಮಾಡಲಾಗಿದ್ದು, ಹಾಲಿನ ಪ್ರಮಾಣ ಹೆಚ್ಚಳದ ಮೇಲೆ ಲಾಭಾಂಶ ನಿರ್ಧರಿಸಬಹುದಾಗಿದೆ ಎಂದರು. ಇದೇ ವೇಳೆ ಸಂಘಕ್ಕೆ 8036 ಲೀಟರ್ ಹಾಲು ಸರಬರಾಜು ಮಾಡಿದ ಮಂಜುಳಾ, 6364 ಲೀಟರ್ ಸರಬರಾಜು ಮಾಡಿದ ಕಮಲಾ ಹಾಗೂ 6133 ಲೀಟರ್ ಹಾಲು ಸರಬರಾಜು ಮಾಡಿದ ಗೌರಮ್ಮ ಅವರಿಗೆ ನೆನಪಿನ ಕಾಣಿಕೆ ಹಾಗೂ ಹಾಲಿನ ಕ್ಯಾನ್ ನೀಡಿ ಸನ್ಮಾನಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷೆ ರತ್ನಮ್ಮ, ನಿರ್ದೇಶಕರಾದ ಶಿವಣ್ಣ, ಸಿ.ರಾಜೇಶ್, ಗುಂಡಯ್ಯನ ಶಿವಣ್ಣ, ಜವರಪ್ಪನ ಶಿವಣ್ಣ, ಚಂದ್ರಶೇಖರ, ಕೃಷ್ಣೇಗೌಡ, ನಿಂಗೇಗೌಡ, ಮಂಜುಳಾ, ಗೌರಮ್ಮ, ಜ್ಯೋತಿ, ಸಂಘದ ಕಾರ್ಯದರ್ಶಿ ಕುಶಾಲ್‌ಗೌಡ, ಹಾಲು ಪರೀಕ್ಷಕ ನಾರಾಯಣ, ಸಹಾಯಕ ರವಿಚಂದ್ರ ಸೇರಿದಂತೆ ಷೇರುದಾರರು, ಗ್ರಾಮಸ್ಥರು ಹಾಜರಿದ್ದರು.

> 2023–24ನೇ ಸಾಲಿನಲ್ಲಿ ಸಂಘವು 7,13,677 ರೂ. ನಿವ್ವಳ ಲಾಭ ಗಳಿಸುವ ಮೂಲಕ ತಾಲೂಕಿನಲ್ಲಿ ಮಾದರಿ ಸಂಘವಾಗಿ ಕಾರ್ಯ ನಿರ್ವಹಿಸುತ್ತಿದೆ. ಹಾಗಾಗಿ ರೈತರು ಸಂಘಕ್ಕೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದಿಂದ ಸಿಗುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು.
> – ವೆಂಕಟರಾಮು, ಸಂಘದ ಅಧ್ಯಕ್ಷ.

ನಿಧನ



ಕೃಷ್ಣ

ಪಿರಿಯಾಪಟ್ಟಣ, ಸೆ.12– ತಾಲೂಕಿನ ಬೆಮ್ಮತ್ತಿ ಗ್ರಾಮದ ನಿವಾಸಿ, ಬಿಜೆಪಿ ಮುಖಂಡ ಕೃಷ್ಣ(61) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸ್ವಗ್ರಾಮದ ಮೃತರ ಜಮೀನಿನಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಶೆಟ್ಟಿ



ಹೆಚ್.ಡಿ.ಕೋಟೆ, ಸೆ.12– ತಾಲೂಕಿನ ಹೈರಿಗೆ ಗ್ರಾಮದ ನಿವಾಸಿ ರಾಮಶೆಟ್ಟಿ(60) ಗುರುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯುತ್‌ನೊಂದಿಗೆ ಹಣ ಉಳಿತಾಯಕ್ಕೆ ಪಿಎಂ ಸೂರ್ಯ ಘರ್ ಅನುಕೂಲಕಾರಿ

● ಚೆಸ್ಕಾಂ ತಾಂತ್ರಿಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು ಅಭಿಮತ ● ಗೃಹಬಳಕೆ ಸೋಲಾರ್ ಕಿಟ್ ಬಿಡುಗಡೆ

ಮೈಸೂರು, ಸೆ.12(ಎಂಕೆ)– ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆ(ಸೌರ ವಿದ್ಯುತ್)ಯಡಿ ಸಬ್ಸಿಡಿಯೊಂದಿಗೆ ವಿದ್ಯುತ್ ಉಳಿತಾಯ ಮಾಡಬಹುದಾಗಿದೆ ಎಂದು ಚೆಸ್ಕಾಂ ತಾಂತ್ರಿಕ ವಿಭಾಗದ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು ತಿಳಿಸಿದರು.


ನಗರದ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಸನ್–ಎಪಿ ಇಕೋಪವರ್ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿದ್ದ ಸರ್ಕಾರದ ಸಬ್ಸಿಡಿಯೊಂದಿಗೆ ದೊರೆಯುವ 'ಗೃಹಬಳಕೆ ಸೋಲಾರ್ ಕಿಟ್' ಲಾಂಚಿಂಗ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯುತ್ ಜೊತೆಗೆ ಹಣ ಉಳಿತಾಯ ಮಾಡಲು ಪಿಎಂ ಸೂರ್ಯ ಘರ್ ಯೋಜನೆ ಅನುಕೂಲಕರವಾಗಿದೆ ಎಂದು ತಿಳಿಸಿದರು.

ಮನೆಯ ಮೇಲೆ 1 ಕಿಲೋ ವ್ಯಾಟ್ ಸೋಲಾರ್ ಪ್ಯಾನಲ್ ಹಾಕಿಸಿಕೊಳ್ಳಲು ಸುಮಾರು 50–55 ಸಾವಿರ ರೂ. ಖರ್ಚಾಗಲಿದೆ. ಅದರಲ್ಲಿ ಸುಮಾರು 30 ಸಾವಿರ ರೂ. ಸಬ್ಸಿಡಿ ರೂಪದಲ್ಲಿ ವಾಪಸ್ ಬರಲಿದೆ. ಅಲ್ಲದೆ ವಿದ್ಯುತ್ ಬಿಲ್‌ನಲ್ಲಿ ಸಬ್ಸಿಡಿ ದೊರೆಯುವುದರಿಂದ ಹಣದ ಜೊತೆಗೆ ವಿದ್ಯುತ್ ಕೂಡ ಉಳಿತಾಯವಾಗಲಿದೆ. ಹಾಕಿದ ಬಂಡವಾಳ ವಾಪಸ್ಸಾಗಲಿದೆ ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ನಂಬರ್ 9480837543 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದರು.

ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆ ಜಾರಿಯಲ್ಲಿದ್ದು, ಸರಾಸರಿ 200 ಯೂನಿಟ್ ವಿದ್ಯುತ್ ಫ್ರೀ ಇದೆ. ಯಾರು 200 ಯೂನಿಟ್‌ಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡುತ್ತಾರೋ ಅವರಿಗೆ ಪಿಎಂ ಸೂರ್ಯ ಘರ್ ಯೋಜನೆ ಅನುಕೂಲಕರವಾಗಲಿದೆ. 2 ಕಿಲೋ ವ್ಯಾಟ್ ಸೋಲಾರ್ ಪ್ಯಾನಲ್ ಹಾಕಿಸಿಕೊಂಡರೆ 60 ಸಾವಿರ ಸಬ್ಸಿಡಿ ದೊರೆಯಲಿದ್ದು, ಪ್ರತೀ ತಿಂಗಳು 2,500 ರೂ ಉಳಿತಾಯವಾಗಲಿದೆ. ಈ ಯೋಜನೆ ಗೃಹ ಬಳಕೆಗೆ ಮಾತ್ರವಾಗಿದ್ದು, ಕಮರ್ಷಿಯಲ್ ಬಳಕೆದಾರರಿಗೆ ಸಬ್ಸಿಡಿ ದೊರೆಯುವುದಿಲ್ಲ ಎಂದು ಮಾಹಿತಿ ನೀಡಿದರು.

ಎಲೆಕ್ಟ್ರಿಕಲ್ ಸಿಸ್ಟಂನಿಂದ 500 ಮೀಟರ್ ದೂರದಲ್ಲಿರುವ ಪಂಪ್‌ಸೆಟ್‌ಗಳಿಗೆ ರೈತರು, ಕುಸುಮ್ ಬಿ ಯೋಜನೆಯಡಿ ಶೇ.80 ರಷ್ಟು ಸಬ್ಸಿಡಿಯೊಂದಿಗೆ ಸೋಲಾರ್ ಮೋಟಾರ್ ಅಳವಡಿಸಿಕೊಳ್ಳಬಹುದಾಗಿದೆ. 200–300 ಅಡಿ ಆಳದಲ್ಲಿರುವ ನೀರನ್ನು ಮೇಲೆತ್ತಲು ಸೋಲಾರ್ ಮೋಟಾರ್ ಅನುಕೂಲಕರವಾಗಿದೆ. ಕೇಂದ್ರ ಸರ್ಕಾರ ಶೇ.30 ರಷ್ಟು, ರಾಜ್ಯ ಸರ್ಕಾರ ಶೇ.50 ರಷ್ಟು ಸಬ್ಸಿಡಿ ನೀಡಲಿದೆ. ಆದ್ದರಿಂದ ಸಾರ್ವಜನಿಕರು ಸೌರ ವಿದ್ಯುತ್ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಚೆಸ್ಕಾಂನ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ಆರ್.ಪೂರ್ಣಚಂದ್ರ ತೇಜಸ್ವಿ, ಸನ್–ಎಪಿ ಇಕೋಪವರ್ ಎಂಡಿ ಶ್ರೀನಿವಾಸ್, ಸಿಓ ಹೃಷಿ, ಮಿಂಚು ಎನರ್ಜಿ ನಿರ್ದೇಶಕರಾದ ಪ್ರಣವ್, ಸಚಿನ್, ಅನುಷಾ, ಪಾನಸೋನಿಕ್‌ನ ಮಂಜುನಾಥ್, ಲಿವಾಹ್‌ನ ಪ್ರತೀಕ್, ಸರವಣನ್, ಮಾರ್ಕೆಟಿಂಗ್ ಇಂಜಿನಿಯರ್‌ಗಳಾದ ಎಸ್.ಪಿ.ಸೃಜನ್, ಹೆಚ್.ಶಿವಪನ್ ಮತ್ತಿತರರಿದ್ದರು.



ಸನ್–ಎಪಿ ಇಕೋಪವರ್ ಸಂಸ್ಥೆ ಸಹಯೋಗದೊಂದಿಗೆ ಮೈಸೂರಲ್ಲಿ 'ಗೃಹಬಳಕೆ ಸೋಲಾರ್ ಕಿಟ್' ಬಿಡುಗಡೆ ಮಾಡಲಾಯಿತು. ಚೆಸ್ಕಾಂ ತಾಂತ್ರಿಕ ವಿಭಾಗದ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು, ಸನ್–ಎಪಿ ಇಕೋಪವರ್ ಎಂಡಿ ಶ್ರೀನಿವಾಸ್ ಮತ್ತಿತರರಿದ್ದರು.

ಸರ್ಕಾರಿ ಜಾಹೀರಾತು ನೀಡುವಲ್ಲಿ ತಾರತಮ್ಯ

ಇಂದು ಮುಖ್ಯ ಕಾರ್ಯದರ್ಶಿ, ವಾರ್ತಾ ಇಲಾಖೆ ಕಮಿಷ್ನರ್‌ಗೆ ಶಾಸಕ ಶ್ರೀವತ್ಸ ಪತ್ರ

ಮೈಸೂರು, ಸೆ.12(ಆರ್‌ಕೆ)–ಸರ್ಕಾರಿ ಜಾಹೀರಾತು ನೀಡುವಲ್ಲಿ ತಾರತಮ್ಯ, ದ್ವೇಷ ಧೋರಣೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಶಾಸಕ ಟಿ.ಎಸ್.ಶ್ರೀವತ್ಸ ಅವರು, ಈ ಕುರಿತು ನಾಳೆ(ಸೆ.13) ರಾಜ್ಯದ ಮುಖ್ಯ ಕಾರ್ಯದರ್ಶಿ ಹಾಗೂ ವಾರ್ತಾ ಇಲಾಖೆ ಕಮಿಷ್ನರ್‌ಗೆ ತಾವೇ ಖುದ್ದು ಈ ಸಂಬಂಧ ಪತ್ರ ನೀಡುವುದಾಗಿ ತಿಳಿಸಿದ್ದಾರೆ.



ಪತ್ರಿಕೆಗಳು, ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಸರ್ಕಾರಿ ಜಾಹೀರಾತು ನೀಡುತ್ತಿರುವುದು ಸಾರ್ವಜನಿಕರ ತೆರಿಗೆ ಹಣದಿಂದ. ಆದರೆ, ನಿಯಮಾನುಸಾರ ರೊಟೇಷನ್ ಬೇಸ್ ಮೇಲೆ ಎಲ್ಲಾ ಸಂಸ್ಥೆಗಳಿಗೆ ಸಮಾನವಾಗಿ ಜಾಹೀರಾತು ನೀಡಬೇಕು. ಆದರೆ, ಅತೀ ಹೆಚ್ಚು ಪ್ರಸರಣ ಸಂಖ್ಯೆ ಹಾಗೂ ಓದುಗರ ವಿಶ್ವಾಸಾರ್ಹತೆ ಹೊಂದಿರುವ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳಿಗೆ ಜಾಹೀರಾತು ನೀಡದೇ ಸಿದ್ದರಾಮಯ್ಯ ಸರ್ಕಾರ ದ್ವೇಷ ಧೋರಣೆ ಅನುಸರಿಸುತ್ತಿರುವುದು ಖಂಡನೀಯ ಎಂದು ಅವರು ತಿಳಿಸಿದರು.

ಸರ್ಕಾರದ ಯೋಜನೆಗಳನ್ನು ಹೆಚ್ಚು ಜನರಿಗೆ ತಲುಪಿಸಬೇಕೆಂಬ ಉದ್ದೇಶದಿಂದ ಸಾರ್ವಜನಿಕರ ತೆರಿಗೆ ಹಣ ಖರ್ಚು ಮಾಡಿ ಮಾಧ್ಯಮಗಳಿಗೆ ವಾರ್ತಾ ಮತ್ತು ಪ್ರಸಾರ ಇಲಾಖೆ ಮೂಲಕ ಜಾಹೀರಾತು ನೀಡಲಾಗುತ್ತಿದೆ. ಆದರೆ, ಅತೀ ಹೆಚ್ಚು ಪ್ರಸರಣ ಸಂಖ್ಯೆ ಹೊಂದಿರುವ, ನಿತ್ಯವೂ ಲಕ್ಷಾಂತರ ಮಂದಿ ಓದುವ ಪತ್ರಿಕೆಗಳಿಗೇ ಜಾಹೀರಾತು ನೀಡದಿದ್ದರೆ, ಸರ್ಕಾರದ ಉದ್ದೇಶ ಈಡೇರುವುದಾದರೂ ಹೇಗೆ? ಎಂದು ಶ್ರೀವತ್ಸ ಅವರು ಪ್ರಶ್ನಿಸಿದ್ದಾರೆ.

ಈ ಹಿಂದಿನ ಬಿಜೆಪಿ ಸರ್ಕಾರ ಎಂದೂ ಜಾಹೀರಾತು ಬಿಡುಗಡೆ ವಿಚಾರದಲ್ಲಿ ತಾರತಮ್ಯ ತೋರಿರಲಿಲ್ಲ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ, ದ್ವೇಷ ಭಾವನೆಯಿಂದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳಿಗೆ ಜಾಹೀರಾತು ನೀಡದಂತೆ ನಿರ್ಬಂಧ ಹೇರಿರುವುದು ಖಂಡನೀಯ. ಈ ಕುರಿತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸರ್ಕಾರದ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಟ್ವೀಟ್ ಮಾಡಿರುವುದು ಶ್ಲಾಘನೀಯ ಎಂದು ಶಾಸಕರು ತಿಳಿಸಿದ್ದಾರೆ.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ದಸಂಸದಿಂದ ಅಂಬೇಡ್ಕರ್ ಪ್ರತಿಮೆ ಮುಂದೆ ತಮಟೆ ಚಳವಳಿ

ಮೈಸೂರು, ಸೆ.12(ಜಿಎ)– ಸುಪ್ರೀಂ ಕೋರ್ಟ್ ತೀರ್ಪಿನಂತೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪುರಭವನ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆ ಬಳಿ ತಮಟೆ ಚಳವಳಿ ನಡೆಸಲಾಯಿತು.


ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಪುರಭವನ ಮುಂಭಾಗವಿರುವ ಅಂಬೇಡ್ಕರ್ ಪ್ರತಿಮೆ ಬಳಿ ತಮಟೆ ಚಳವಳಿ ನಡೆಸಲಾಯಿತು.

ಪರಿಶಿಷ್ಟ ಜಾತಿಯೊಳಗಿನ ಉಪ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರಗಳಿಗೆ ಸಂವಿಧಾನ ಬದ್ಧವಾದ ಅಧಿಕಾರ ಇದೆ ಎಂದು ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಇದು ಕಳೆದ 30 ವರ್ಷಗಳ ಹೋರಾಟಕ್ಕೆ ಸಿಕ್ಕ ಜಯವಾಗಿದ್ದು, ಮೀಸಲಾತಿ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದ ಹೆಜ್ಜೆಯಾಗಿದೆ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಏಳು ನ್ಯಾಯಮೂರ್ತಿಗಳ ಸಂವಿಧಾನಿಕ ಪೀಠ ಈ ವಿಚಾರದಲ್ಲಿದ್ದ ಗೊಂದಲ ಪರಿಹರಿಸಿದೆ ಎಂದು ಚಳವಳಿ ವೇಳೆ ತಿಳಿಸಲಾಯಿತು.

ಒಳಮೀಸಲಾತಿ ಸಮಾನತೆ ಸಾಧಿಸಲು ಅಗತ್ಯ ಎಂದು ನ್ಯಾಯಾಲಯ ಹೇಳಿದೆ. ಈ ಜಾತಿಗಳ ಒಳಗೆ ಇರುವ ಕೆಲವು ಉಪ ಜಾತಿಗಳಿಗೆ ಮೀಸಲಾತಿಯ ಪ್ರಯೋಜನ ಪಡೆದುಕೊಳ್ಳಲು ಸಾಧ್ಯವಾಗಿಲ್ಲ. ಹೀಗಾಗಿ ಇಂತಹ ಉಪಜಾತಿಗಳು ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿವೆ. ಹಿಂದುಳಿದಿರುವಿಕೆಯ ಆಧಾರದಲ್ಲಿ ಒಳ ಮೀಸಲಾತಿ ನೀಡಿದರೆ ಈವರೆಗೆ ಮೀಸಲಾತಿಯ ಲಾಭ ಪಡೆದುಕೊಳ್ಳಲು ಸಾಧ್ಯವಾಗದ ಸಮುದಾಯಗಳಿಗೆ ಪ್ರಯೋಜನವಾಗಲಿದೆ. ಹೀಗಾಗಿ ಕೂಡಲೇ ಒಳಮೀಸಲಾತಿ ಜಾರಿಗೊಳಿಸಿ ಎಂದು ಆಗ್ರಹಿಸಿದರು.

ಪರಿಶಿಷ್ಟ ಜಾತಿಗಳಲ್ಲಿ ನೂರೊಂದು ಉಪಜಾತಿಗಳಿವೆ. ಸುಪ್ರೀಂಕೋರ್ಟ್ ಆದೇಶ ಬಂದು ಒಂದು ತಿಂಗಳು ಕಳೆದಿದ್ದರೂ ರಾಜ್ಯ ಸರ್ಕಾರ ಆದೇಶ ಅನುಷ್ಠಾನಗೊಳಿಸಿಲ್ಲ. ಕೂಡಲೇ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಆದೇಶ ಅನುಷ್ಠಾನಗೊಳಿಸಬೇಕು. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕ ಪ್ರೊ.ಬಿ.ಕೃಷ್ಣಪ್ಪನವರಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಬೇಕು. ಬಾಕಿ ಉಳಿದಿರುವ ಬ್ಯಾಕ್‌ಲಾಗ್ ಹುದ್ದೆ, ಹೊಸ ನೇಮಕಾತಿ ಪ್ರಕ್ರಿಯೆಗಳನ್ನು ಒಳ ಮೀಸಲಾತಿ ಜಾರಿಯಾಗುವವರೆಗೆ ತಡೆ ಹಿಡಿಯಬೇಕು. ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವಿಭಾಗೀಯ ಸಂಚಾಲಕ ಲೋಕೇಶ, ಜಿಲ್ಲಾ ಸಂಚಾಲಕ ಉಗ್ರಪ್ಪ, ಹೆಚ್.ಎಸ್.ಗೋಪಾಲಕೃಷ್ಣಸ್ವಾಮಿ, ಪುಟ್ಟರಸು, ಮಹೇಶ್.ಆರ್, ಅನಿಲ್‌ಕುಮಾರ್, ಕೆ.ಹೆಚ್. ವೆಂಕಟೇಶ್ ಮಾಸ್ಟರ್, ಮಹದೇವ್ ಹರವೆ, ವಿನಾಯಕ್, ಶಿವಣ್ಣ ಪಿಲ್ಲಳ್ಳಿ, ರಾಚಪ್ಪ ಜೆಟ್ಟಿಹುಂಡಿ, ಮಲ್ಲೇಶ್.ಎಂ, ಶಿವಪ್ಪ ವೆಂಕಟೇಶ್, ವಿಜಯಕುಮಾರ್, ಲೋಕೇಶ್, ಸುನೀಲ್, ಸಿದ್ದರಾಜು, ಸೃಜನ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಕರ್ನಾಟಕ ಸಂಗೀತ ಗಾಯನಕ್ಕೆ ಮಾರುಹೋದ ಸಂಗೀತಾಸಕ್ತರು


63ನೇ ಪಾರಂಪರಿಕ ಸಂಗೀತೋತ್ಸವದಲ್ಲಿ ವಿದ್ವಾನ್ ಕಲ್ಯಾಣಪುರಂ ಎಸ್.ಅರವಿಂದ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಿತು.

ಮೈಸೂರು, ಸೆ.12(ಎಂಕೆ)– ಕರ್ನಾಟಕ ಸಂಗೀತ ಗಾಯನಕ್ಕೆ ಮಾರುಹೋದ ಸಂಗೀತ ಸಹೃದಯರು, ರಾಗ–ತಾಳಗಳ ನಾದ–ನಿನಾದಕ್ಕೆ ಮೂಕವಿಸ್ಮಿತರಾದರು.

ಮೈಸೂರಿನ ವಿವಿ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಶ್ರೀಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟೆಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ)ನ 63ನೇ ಪಾರಂಪರಿಕ ಸಂಗೀತೋತ್ಸವದಲ್ಲಿ ಗುರುವಾರ ವಿದ್ವಾನ್ ಕಲ್ಯಾಣಪುರಂ ಎಸ್.ಅರವಿಂದ್ ಅವರ ಗಾಯನ ಮೋಡಿ ಮಾಡಿತು. ಕರೂರು ದೇವುಡು ಅಯ್ಯರ್ ಅವರ 'ಸ್ವಾಮಿ ನಿನ್ನೆ' ಹಾಡಿನ ಮೂಲಕ ಗಾಯನ ಆರಂಭಿಸಿದ ಅವರು, ಮುತ್ತುಸ್ವಾಮಿ ದೀಕ್ಷಿತರ 'ಮಹಾ ಗಣಪತಿಂ ಮನಸಾ ಸ್ಮರಾಮಿ' ಹಾಡಿ ಭಕ್ತಿ ಸುಧೆ ಹರಿಸಿದರು.

ಮುತ್ತಯ್ಯ ಭಾಗವತರ 'ಗಣಪತೆ ಸುಗುಣ ನಿಧೇ' ಕೃತಿ ಹಾಡುವಾಗ ಪ್ರೇಕ್ಷಕರು ತಲೆದೂಗಿದರು. ಮೈಸೂರು ವಾಸುದೇವಾಚಾರ್ಯರ 'ಭಜನ ಸೇಯಾ ರಾಧಾ ಓ ಮಾನಸ ಶ್ರೀರಮಣಿ', ಮುತ್ತುಸ್ವಾಮಿ ದೀಕ್ಷಿತರ 'ರಂಗನಾಯಕಂ ಭಾವಯೇ', ಪುರಂದರದಾಸರ 'ಯಾರೇ ರಂಗನ', ತ್ಯಾಗರಾಜರ 'ಓ ರಂಗ ಸಾಯಿ' ಕಡೆಗೆ ಸಿಂಧು ಭೈರವಿ ರಾಗದಲ್ಲಿ 'ತಿಲ್ಲಾನ' ಮೂಲಕ ಪ್ರೇಕ್ಷಕರಿಂದ ಚಪ್ಪಾಳೆಗಳ ಅಭಿಮಾನಕ್ಕೆ ಪಾತ್ರರಾದರು. ಮೃದಂಗ ವಾದನದಲ್ಲಿ ವಿದ್ವಾನ್ ಕೆ.ಯು.ಜಯಚಂದ್ರರಾವ್, ಖಂಜಿರಾದಲ್ಲಿ ಬಿ.ಎಸ್.ಪುರುಷೋತ್ತಮ್, ಪಿಟೀಲಿನ್ ವಾದನದಲ್ಲಿ ವಿದ್ವಾನ್ ಹೆಚ್.ಎನ್.ಭಾಸ್ಕರ್ ಉತ್ತಮ ಸಹಕಾರ ನೀಡಿದರು. ಇದಕ್ಕೂ ಮುನ್ನ ವಿದುಷಿ ವಸಂತ ವೆಂಕಟೇಶ್ ಅವರು ಶ್ರೀದತ್ತ ಭಾಗವತ ವಾಚಿಸಿದರೆ, ವಿದುಷಿ ಧರಿತ್ರಿ ಆನಂದರಾವ್ ವ್ಯಾಖ್ಯಾನ ಮಾಡಿದರು.

ತಂತ್ರಜ್ಞಾನದ ಮೂಲಕ ಆಹಾರ ಪದಾರ್ಥಗಳ ತಾಜಾತನ ಸಂರಕ್ಷಣೆ

ಡಿಎಫ್‌ಆರ್‌ಎಲ್ ನಿವೃತ್ತ ಪ್ರಧಾನ ವಿಜ್ಞಾನಿ ಎ.ರಾಮಕೃಷ್ಣ ಮಾಹಿತಿ

ಮೈಸೂರು, ಸೆ.12(ಎಂಕೆ)– ಪ್ರಿಜರ್ವೇಶನ್ ಟೆಕ್ನಾಲಜಿ(ಸಂರಕ್ಷಣೆ ತಂತ್ರಜ್ಞಾನ) ಮೂಲಕ ಆಹಾರ ಪದಾರ್ಥಗಳನ್ನು ನೈಸರ್ಗಿಕವಾಗಿ ತಾಜಾತನ ಇರುವಂತೆ ಸಂರಕ್ಷಣೆ ಮಾಡಬಹುದಾಗಿದೆ ಎಂದು ರಕ್ಷಣಾ ಸಚಿವಾಲಯ, ಡಿಆರ್‌ಡಿಓ, ಡಿಎಫ್‌ಆರ್‌ಎಲ್‌ನ ನಿವೃತ್ತ ಪ್ರಧಾನ ವಿಜ್ಞಾನಿ ಎ.ರಾಮಕೃಷ್ಣ ತಿಳಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ 57ನೇ ಇಂಜಿನಿಯರ್ ದಿನಾಚರಣೆ ಹಾಗೂ 163ನೇ ಸರ್‌ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಕೆ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ರೈತರು ತಾವು ಬೆಳೆದ ಬೆಳೆಗಳನ್ನು ದೀರ್ಘ ಕಾಲ ಇಟ್ಟುಕೊಳ್ಳಲಾಗದೆ ಬಿಸಾಡುತ್ತಾರೆ. ಇದರಿಂದ ಆಹಾರದ ಕೊರತೆ ಉಂಟಾಗಲಿದೆ. ಪ್ರಿಜರ್ವೇಶನ್ ಟೆಕ್ನಾಲಜಿ ಮೂಲಕ ಆಹಾರ ಪದಾರ್ಥಗಳು ವ್ಯರ್ಥವಾಗದಂತೆ ಸಂರಕ್ಷಣೆ ಮಾಡಿ, ಸದ್ಬಳಕೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು.



ಇಂಜಿನಿಯರ್ ಸಂಸ್ಥೆ ಸಭಾಂಗಣದಲ್ಲಿ ಡಿಎಫ್‌ಆರ್‌ಎಲ್ ನಿವೃತ್ತ ಪ್ರಧಾನ ವಿಜ್ಞಾನಿ ಎ.ರಾಮಕೃಷ್ಣ ವಿಶೇಷ ಉಪನ್ಯಾಸ ನೀಡಿದರು.

ಉಸಿರಾಡುವ ಚೀಲ, ಫ್ರೆಶ್ ಕರ್ಡ್(ಮೊಸರು) ತಯಾರಿಕೆ ಯಂತ್ರಗಳ ಬಳಕೆಯಿಂದ ಆಹಾರ ಪದಾರ್ಥಗಳು ನೈಸರ್ಗಿಕವಾಗಿ ತಾಜಾತನದಿಂದ ಕೂಡಿರುವಂತೆ ಬಳಕೆ ಮಾಡಬಹುದಾಗಿದೆ. ಗಡಿಯಲ್ಲಿ ಕಾಯುವ ಯೋಧರಿಗೆ ಪ್ರಿಜರ್ವೇಶನ್ ಟೆಕ್ನಾಲಜಿ ಮೂಲಕ ಆಹಾರ ಪದಾರ್ಥಗಳನ್ನು ಪೂರೈಕೆ ಮಾಡಲಾಗುತ್ತಿದೆ. ಸೈನಿಕರಿಗೆ ಬಂದೂಕಿಗಿಂತ ಮೊದಲು ಉತ್ತಮ ಪೌಷ್ಟಿಕ ಆಹಾರ ನೀಡಬೇಕು. ಈ ನಿಟ್ಟಿನಲ್ಲಿ ತಂತ್ರಜ್ಞಾನದ ಮೂಲಕ ಎಂತಹ ಚಳಿಯಲ್ಲಿದ್ದರೂ ತಕ್ಷಣವೇ ತಾಜಾತನದ ಆಹಾರ ತಯಾರಿಸಿಕೊಂಡು ಸೇವನೆ ಮಾಡಲು ಅವಕಾಶ ಮಾಡಿಕೊಡಲಾಗಿದೆ ಎಂದು ವಿವರಿಸಿದರು.

ಪೌಷ್ಟಿಕ ಆಹಾರ ಸೇವನೆ ಮನುಷ್ಯನ ಹಕ್ಕಾಗಿದೆ. ದೇವರು ಕೊಟ್ಟಿರುವ ಆಹಾರ ಪದಾರ್ಥಗಳನ್ನು ಎಂದಿಗೂ ವ್ಯರ್ಥ ಮಾಡಬಾರದು. ರೈತರು ತಮ್ಮ ತಮ್ಮ ಜಮೀನಿನಲ್ಲಿ ವ್ಯರ್ಥ ಮಾಡುವ ಆಹಾರ ಪದಾರ್ಥಗಳನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ಸಂರಕ್ಷಣೆ ಮಾಡಿ ಆಹಾರ ಪದಾರ್ಥದ ಮೌಲ್ಯ ವರ್ಧನೆ ಹೆಚ್ಚಿಸಬಹುದಾಗಿದೆ ಎಂದು ತಿಳಿಸಿದರು. ಇಂಜಿನಿಯರ್ಸ್ ಸಂಸ್ಥೆ ಮೈಸೂರು ಘಟಕದ ಅಧ್ಯಕ್ಷ ಡಾ.ಆರ್.ದೀಪು, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ ಸಂಚಾಲಕ ಎ.ಎಸ್.ಸತೀಶ್ ಮತ್ತಿತರರಿದ್ದರು.

ಹುಲಿ ಯೋಜನೆ ಸಿಎಫ್ ಡಾ. ಪಿ.ರಮೇಶ್ ಕುಮಾರ್‌ಗೆ ಇಕೋ ವಾರಿಯರ್ ಪ್ರಶಸ್ತಿ

ಮೈಸೂರು, ಸೆ.12(ಎಂಟಿವೈ)– ನವದೆಹಲಿಯಲ್ಲಿ ಐಎಫ್‌ಎಸ್ ಅಸೋಸಿಯೇಷನ್ ಹಾಗೂ ಇಂಡಿಯನ್ ಮಾಸ್ಟರ್ ಮೈಂಡ್ ಸಂಸ್ಥೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಹುಲಿ ಯೋಜನೆಯ ಸಿಎಫ್ ಡಾ.ಪಿ.ರಮೇಶ್‌ಕುಮಾರ್ ಅವರಿಗೆ ವನ್ಯಜೀವಿ ಸಂರಕ್ಷಣೆ ವಿಭಾಗದಲ್ಲಿ 'ಇಕೋ ವಾರಿಯರ್ ಅವಾರ್ಡ್' ಲಭಿಸಿದೆ.

ನವದೆಹಲಿಯ ಜನಪಥ್‌ನ ಡಾ.ಅಂಬೇಡ್ಕರ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅರಣ್ಯ ಮಹಾನಿರ್ದೇಶಕ (ಡೈರೆಕ್ಟರ್ ಜನರಲ್ ಆಫ್ ಫಾರೆಸ್ಟ್) ಮತ್ತು ಪರಿಸರ ಸಚಿವಾಲಯದ ವಿಶೇಷ ಕಾರ್ಯದರ್ಶಿ ಜಿತೇಂದ್ರ ಕುಮಾರ್ ಅವರು ಡಾ.ಪಿ.ರಮೇಶ್ ಕುಮಾರ್ ಅವರಿಗೆ 2024ನೇ ಸಾಲಿನ ಇಕೋ ವಾರಿಯರ್ ಅವಾರ್ಡ್ ಪ್ರದಾನ ಮಾಡಿದ್ದಾರೆ.

ಪ್ರತಿ ವರ್ಷ ಅರಣ್ಯದ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ, ವನ್ಯಜೀವಿ ರಕ್ಷಣೆ, ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆಗೆ ತಂತ್ರಜ್ಞಾನ ಬಳಕೆ ಹಾಗೂ ಸಮುದಾಯದ ಸಂಪರ್ಕ ಸೇರಿ ಐದು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಭಾರತದ ಐಎಫ್‌ಎಸ್ ಅಧಿಕಾರಿಗಳಿಗೆ ನೀಡಲಾಗುತ್ತದೆ. ಇದರಲ್ಲಿ ವನ್ಯಜೀವಿ ಸಂರಕ್ಷಣೆ ವಿಭಾಗದಲ್ಲಿ ಡಾ. ರಮೇಶ್ ಕುಮಾರ್ ಅವರಿಗೆ ಈ ಪ್ರಶಸ್ತಿ ಲಭಿಸಿದೆ.


ನವದೆಹಲಿಯಲ್ಲಿ ಐಎಫ್‌ಎಸ್ ಅಸೋಸಿಯೇಷನ್ ಹಾಗೂ ಇಂಡಿಯನ್ ಮಾಸ್ಟರ್ ಮೈಂಡ್ ಸಂಸ್ಥೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಅರಣ್ಯ ಮಹಾನಿರ್ದೇಶಕ(ಡೈರೆಕ್ಟರ್ ಜನರಲ್ ಆಫ್ ಫಾರೆಸ್ಟ್) ಮತ್ತು ಪರಿಸರ ಸಚಿವಾಲಯದ ವಿಶೇಷ ಕಾರ್ಯದರ್ಶಿ ಜಿತೇಂದ್ರ ಕುಮಾರ್ ಅವರು ಹುಲಿ ಯೋಜನೆಯ ಸಿಎಫ್ ಡಾ.ಪಿ.ರಮೇಶ್ ಕುಮಾರ್ ಅವರಿಗೆ ಇಕೋ ವಾರಿಯರ್ ಅವಾರ್ಡ್ ಪ್ರದಾನ ಮಾಡಿದರು.

ನಾಗರಹೊಳೆ, ಕುದುರೆಮುಖ, ಕಾವೇರಿ ವನ್ಯಜೀವಿಧಾಮ, ಬಳ್ಳಾರಿ ವಿಭಾಗದಲ್ಲಿ ಕೆಲಸ ಮಾಡಿರುವ ಡಾ.ರಮೇಶ್ ಕುಮಾರ್ ಅವರು ಎರಡು ವರ್ಷಗಳ ಕಾಲ ಬಂಡೀಪುರ ರಾಷ್ಟ್ರೀಯ ಉದ್ಯಾನದ ಹುಲಿ ಯೋಜನೆ ನಿರ್ದೇಶಕರಾಗಿದ್ದರು. ಈ ವೇಳೆ ವನ್ಯಜೀವಿಗಳ ಸಂರಕ್ಷಣೆ ವಿಭಾಗದಲ್ಲಿನ ಕಾರ್ಯಕ್ಷಮತೆ ಹಾಗೂ ಕಾರ್ಯಚಟುವಟಿಕೆ ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಎರಡು ವರ್ಷದ ಅವಧಿಯಲ್ಲಿ ಆನೆ, ಹುಲಿ ಸೇರಿದಂತೆ ಹಲವಾರು ಪ್ರಾಣಿಗಳ ರಕ್ಷಣೆಗೆ ಡಾ.ರಮೇಶ್ ಕುಮಾರ್ ನೇತೃತ್ವದಲ್ಲಿ ಬಂಡೀಪುರದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ತಂಡ ಕೆಲಸ ಮಾಡಿತ್ತು. ಇವರ ಅವಧಿಯಲ್ಲಿಯೇ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಭೂಪೇಂದರ್ ಯಾದವ್ ಬಂಡೀಪುರಕ್ಕೆ ಭೇಟಿ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಈ ಕುರಿತು ಹುಲಿ ಯೋಜನೆಯ ಸಿಎಫ್ ಡಾ.ಪಿ. ರಮೇಶ್ ಕುಮಾರ್ ಪತ್ರಕರ್ತರೊಂದಿಗೆ ಮಾತನಾಡಿ, ಹದಿನಾರು ವರ್ಷಗಳಿಂದ ಕರ್ನಾಟಕದಲ್ಲಿ ಐಎಫ್‌ಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ರಾಜ್ಯದ ವಿವಿಧ ಜಿಲ್ಲೆಗಳ ಬೇರೆ ಬೇರೆ ಅರಣ್ಯ ವಿಭಾಗದಲ್ಲಿ ಕೆಲಸ ಮಾಡಿದ್ದೇನೆ. ವನ್ಯಜೀವಿ, ರಾಷ್ಟ್ರೀಯ ಯೋಜನೆ. ಹುಲಿ ಯೋಜನೆಗಳಲ್ಲೂ ಕೆಲಸ ಮಾಡಿ ಸದ್ಯ ಕರ್ನಾಟಕ ಹುಲಿ ಯೋಜನೆ ನಿರ್ದೇಶಕರಾಗಿದ್ದೇನೆ. ದೇಶದ 28 ಐಎಫ್‌ಎಸ್ ಅಧಿಕಾರಿಗಳನ್ನು ಈ ಪ್ರಶಸ್ತಿಯ ಅಂತಿಮ ಹಂತಕ್ಕೆ ಆಯ್ಕೆ ಮಾಡಲಾಗಿತ್ತು. ಸಮಿತಿ ನನ್ನನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಖುಷಿ ತಂದಿದೆ. ಬಳ್ಳಾರಿ, ಕುದುರೆಮುಖ, ಕಾವೇರಿ ವನ್ಯಧಾಮ ಹಾಗೂ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಲ್ಲಿಸಿದ ಸೇವೆ, ಕಾಡ್ಗಿಚ್ಚು ನಿಯಂತ್ರಣ, ವಿದ್ಯುತ್ ಸ್ಪರ್ಶದಿಂದಾಗಿ ಒದ್ದಾಡುತ್ತಿದ್ದ ಆನೆ ರಕ್ಷಣೆ, ಸಿಂಗಳೀಕ ಸಂರಕ್ಷಣೆ ಹಾಗೂ ಇನ್ನಿತರ ವಿಚಾರವನ್ನು ಪರಿಗಣಿಸಿ ವನ್ಯಜೀವಿ ಸಂರಕ್ಷಣೆ ವಿಭಾಗದಲ್ಲಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದರು.

ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಇಂಟರ್‌ನ್ಯಾಷನಲ್ ಬಿಗ್ ಕ್ಯಾಟ್ ಅಲಾಯನ್ಸ್ ಡೈರೆಕ್ಟರ್ ಜನರಲ್ ಎಸ್.ಪಿ.ಯಾದವ್, ಸುಪ್ರೀಂಕೋರ್ಟ್‌ನ ಸೆಂಟ್ರಲ್ ಎಂಪವರ್ ಕಮಿಟಿ ಸದಸ್ಯ ಸಿ.ಪಿ.ಗೋಯಲ್, ನವದೆಹಲಿಯ ಐಎಫ್‌ಎಸ್ ಅಧಿಕಾರಿಗಳ ಅಸೋಸಿಯೇಷನ್ ಅಧ್ಯಕ್ಷರಾದ ಅಶ್ವಥಿ, ನಟ ರಂದೀಪ್ ಹೂಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಕಾಲಾಪತ್ಥರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಡಬ್ಬಲ್ ಇಸ್ಮಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಭೀಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಎಆರ್‌ಎಂ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ವಿಕಾಸಪರ್ವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ಬೆ.10.45ಕ್ಕೆ, ಶಾಲಿವಾಹನ ಶಕೆ (ಕ): ಮ.1.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಸಂ.4ಕ್ಕೆ, ಎಆರ್‌ಎಂ (3ಡಿ) (ಮ): ರಾ.7.05ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ರಾ.9.55ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.11.10ಕ್ಕೆ, ಸ್ತ್ರೀ 2 (ಹಿಂ): ಮ.1.35ಕ್ಕೆ, ಕಲ್ಜಿಗ (ಕ): ಸಂ.4.35ಕ್ಕೆ, ದಿ ಬಕಿಂಗ್ಹ್ಯಾಮ್ ಮರ್ಡರ್ಸ್ (ಹಿಂ): ರಾ.7.05ಕ್ಕೆ, ಕೊಂಡಲ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ರಾನಿ (ಕ): ಬೆ.10.45ಕ್ಕೆ, ಮ.1.45ಕ್ಕೆ, ಅನ್ನ (ಕ): ಸಂ.4.45ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10ಕ್ಕೆ.
ಸ್ಕ್ರೀನ್ 4	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ, ವಿಕಾಸಪರ್ವ (ಕ): ಮ.1.40ಕ್ಕೆ, ಉತ್ಸವಂ (ತೆ): ಸಂ.4ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಬೆ.10.25ಕ್ಕೆ, ರಾ.9.30ಕ್ಕೆ, ರಾನಿ (ಕ): ಮ.1.45ಕ್ಕೆ, ಕಾಲಾಪತ್ಥರ್ (ಕ): ಸಂ.4.35ಕ್ಕೆ, ಮಾತು ವದಲಾರ 2 (ತೆ): ಸಂ.6.50ಕ್ಕೆ.
ಸ್ಕ್ರೀನ್ 2	ಕಾಲಾಪತ್ಥರ್ (ಕ): ಬೆ.10.20ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.12.35ಕ್ಕೆ, ಸಂ.6.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.40ಕ್ಕೆ, ಎಆರ್‌ಎಂ (3ಡಿ) (ಮ): ರಾ.9.50ಕ್ಕೆ.
ಸ್ಕ್ರೀನ್ 3	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.45ಕ್ಕೆ, ಎಆರ್‌ಎಂ (3ಡಿ) (ಮ): ಮ.3.20ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕಳಿಂಗ (ತೆ): ರಾ.9.35ಕ್ಕೆ.
ಸ್ಕ್ರೀನ್ 4	ಶಾಲಿವಾಹನ ಶಕೆ (ಕ): ಬೆ.10.40ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1.20ಕ್ಕೆ, ಕಲ್ಜಿಗ (ಕ): ಸಂ.4.25ಕ್ಕೆ, ರಾನಿ (ಕ): ಸಂ.6.40ಕ್ಕೆ, ಉತ್ಸವಂ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

4ನೇ ದಿನ, ಶುಕ್ರವಾರ, 13–9–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಪ್ಯಾಡಕ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 2.00ಕ್ಕೆ
1. ವರದಾನ್ 2. ಪೋಲಾರ್ ವಿಂಡ್ 3. ಅಗೇನೆಸ್ಟ್ ಆಲ್ ಆಡ್ಸ್

II. ತಲಕಾಡು ಪ್ಲೇಟ್ –1400 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಓಮಂಚಾಲಿ 2. ನ್ಯಾಚುರಲ್ ಒನ್ 3. ನ್ಯಾಚುರಲ್ ಗೋಲ್ಡ್

III. ಜೋಗ್‌ಫಾಲ್ಸ್ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 3.00ಕ್ಕೆ
1. ಅವರ್ಲಿ 2. ಕಾನ್‌ಫಿಡೆಂಟ್ ಗೇಮ್ 3. ಫಿರೋನಿಯಾ

IV. ಪೊಲೀಸ್ ಟ್ರೋಫಿ –1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಜರ್ಸಿ ಕಿಂಗ್ 2. ಇಂಡಿಯನ್ ಬ್ಲೂಸ್ 3. ವರೋನಿಕ್

V. ಎಫ್.ಕೆ.ಇರಾನಿ ಮೆಮೋರಿಯಲ್ ಮಿಲಿಯನ್–1200 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಫಿನೋಮಿನನ್ 2. ಡಿವೈನ್ ಆರ್ಟ್ 3. ಎನ್.ಆರ್.ಐ. ಏಸ್

VI. M.W.ಚಿನ್ನಪ್ಪ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಜ಼ಾರ್ 2. ಟಾಮ್ ಕ್ರೂಸರ್ 3. ಸಗೇರಾ

VII. ಯಲಹಂಕ ಪ್ಲೇಟ್–1100 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ಸಿಲ್ವರ್ ಸ್ಪ್ರಿಂಗ್ 2. ಗೋಲ್ಡ್ ಕ್ರೆಸ್ಟ್ 3. ಬಯೋಮೆಟ್ರಿಕ್

ದಿನದ ಅತ್ಯುತ್ತಮ	ಜ಼ಾರ್
ಡಬ್ಬಲ್	ಜರ್ಸಿ ಕಿಂಗ್, ಸಿಲ್ವರ್ ಸ್ಪ್ರಿಂಗ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

Aquaguard & Kent Sales and Service
Service charge :300/-
9901200444

Required Immediately for Prime Properties
Marketing Manager 4 nos (Male/Female)
Marketing Executive 16 nos (Male/Female), Receptionist (female)
Fixed salary with excellent incentives.
Walk in interview from 13/09/24 to 14/09/24 between 10am to 5pm.
Carry CV with 2 passport size pics.
Prime Properties
#3, 2nd Floor, Above Canara Bank, T Narsipura Main Road, Siddarthanagar, Mysuru.
8762216999,7026228896

2.5 BHK HOME INTERIORS @ ₹ 2.5 Lakh*
Home Space Mart
✆91089 23123

340 seater's Plug and Play Office/Call Center AVAILABLE
near LIC Circle.
For more details contact :
9380972229

Neem BOND PLATINUM PLYWOOD & DOORS
@ FACTORY DEPOT RATES
10 YEARS WARRANTY
97315-91267 / 99012-91267

HOUSE PROPERTY FOR SALE
26.6' x 77'
BANK LOAN APPROVED
FOR IMMEDIATE REGISTRATION
Location : V.V. Nagar, Kallahalli, Mandya City, Near Bellada Mandi.
CALL : 8147391484 9538859117

MUDA APPROVED SITES FOR SALE
30X40
last 3 East Facing Available
Location:
Adjacent J P Nagar, Mysuru
Price @ Rs 71 lakhs onwards
Call: 96200 99122

K.L.A School of Law
Tiptur - 572201 (Karnataka)
FINAL CALL FOR SPOT ADMISSION
L L.B
3 Years Course
(Qualification any Degree)
Approved by the BAR COUNCIL OF INDIA
NO AGE LIMIT
For Details: 8088858884

ವಿಲ್ಲಾ ಸೈಟ್–ಹುಣಸೂರು
Suraksha Enclave
20x30, 20x40, 30x40, 30x50
4 Kms ಬಸ್‌ಸ್ಟಾಂಡ್ ನಿಂದ
Entrance Arch, DC Approved, Huda Approved, Water Tank, 4 Outdoor sports facility
40 ಅಡಿ ರಸ್ತೆ, 75% ಬ್ಯಾಂಕ್ ಲೋನ್. ಮನೆಗಳು ಲಭ್ಯವಿದೆ Rs. 675/sft.
Call: 9900201234

WANTED TECHNICIANS & HELPER BOYS
Freshers preferred
Age 18-25 years
Two Wheeler is must
Saraswathipuram, Mysuru
98808 28999

OFFICE SPACE FOR RENT
Great location at Hootagalli Industrial Area, Mysore.
Private workspace, flexible term, fixed cost.
* Ample space for parking
* 24/7 RO Water
* Elevator Access
* Security Services
* 500 KVA power supply
* 250 KVA Diesel Generator
12000 sq.ft. each floor.
Total 4 floors. First 3 floors are 12,000 sq ft. Top floor is 1,500 sq. ft. Ground floor is fully furnished for office.
100% Vaastu Compliance
'Fully furnished canteen facility'
For more information call **9900110043**
Scan for Video

FLAT FOR SALE
At TRENDZ APARTMENT,
Bogadi, Mysore
3BHK, East Face,
1534 Sqft, Premium Interior,
Ready to occupy
9901776177

4ನೇ ವರ್ಷದ ಪುಣ್ಯಸ್ಮರಣೆ



ಜನನ 17/10/1947

ಶಿವೈಕ್ಯ 13/09/2020

ಶ್ರೀ ಕೆ.ಎಸ್. ಬಸವರಾಜಪ್ಪರವರು


ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು, ಕಲ್ಮಹಳ್ಳಿ, ನಂಜನಗೂಡು ತಾ||.

ನೀವು ನಮ್ಮನ್ನಗಲಿ ನಾಲ್ಕು ವರ್ಷಗಳು ಕಳೆಯಿತು.
ನಿಮ್ಮ ಗುಣ, ನಡತೆ, ಸರಳತೆ, ಜನಸೇವೆ ಮತ್ತು ಆತಿಥ್ಯಗಳಿಂದ ಜನ ಮನಗೆದ್ದು,
ಖ್ಯಾತರಾದ ನೀವು ನಮಗೆಲ್ಲಾ ಆದರ್ಶ. ಸದಾ ನಿಮ್ಮ ನೆನಪಿನಲ್ಲಿರುವ.


ದಿ|| ನಾಗಮ್ಮ ಮತ್ತು ದಿ|| ಸಾಹುಕಾರ್ ಶಿವಲಿಂಗಪ್ಪರವರ ಕುಟುಂಬ
ಶ್ರೀಮತಿ ರತ್ನಮ್ಮ ಬಸವರಾಜಪ್ಪ
ಶ್ರೀ ಕೆ.ಬಿ. ವಿಜಯ್‌ಕುಮಾರ್, ಕಲ್ಮಹಳ್ಳಿ, ಮಾಜಿ ಅಧ್ಯಕ್ಷರು,
ಭಾರತೀಯ ಜನತಾ ಪಾರ್ಟಿ, ವರುಣ ವಿಧಾನಸಭಾ ಕ್ಷೇತ್ರ, ಮೈಸೂರು ಜಿಲ್ಲೆ
ಶ್ರೀಮತಿ ಮಾಯಾದೇವಿ ಗಲಗಲಿ, ಕ.ಸಾ.ಸೇ., ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ
ಶ್ರೀಮತಿ ಶಿಲ್ಪ ಮತ್ತು ಕೆ.ಬಿ. ನಿರಂಜನಕುಮಾರ್, ಶ್ರೀ ಶಂಭುಲಿಂಗೇಶ್ವರ ರೈಸ್ ಮಿಲ್, ಕಲ್ಮಹಳ್ಳಿ
ಶ್ರೀಮತಿ ಡಾ|| ಕೆ.ಬಿ. ರಶ್ಮಿ ಮತ್ತು ಶ್ರೀ ಡಾ|| ಸಂತೋಷ್ ಕೆ. ಪಾಟೀಲ್,
ನಿರ್ದೇಶಕರು, ಇಂಡಿಯನ್ ಪಬ್ಲಿಕ್ ಸ್ಕೂಲ್ಸ್, ಜೀವನ್‌ಭೀಮಾ ನಗರ ಮತ್ತು ವಿಜ್ಞಾನ ನಗರ, ಬೆಂಗಳೂರು.
(ಡಾ||) ಶ್ರೇಯಸ್ ಕೆ.ವಿ. ಮತ್ತು ಪನ್ನಗಭೂಷಣ್ ಕೆ.ವಿ.
ಚಿ|| ಅಥರ್ವ ಎಸ್. ಪಾಟೀಲ್

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿ.,

ಗಾಂಧಿಚೌಕ, ಮೈಸೂರು - 570001



ಶ್ರೀ ಶ್ರೀ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು
ಬ್ಯಾಂಕಿನ ಸಂಸ್ಥಾಪಕರು



ಶ್ರೀ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ ರವರು
ಸಹಕಾರಿ ಪಿತಾಮಹ

119 ವರ್ಷಗಳ

2023-2024ನೇ ಸಾಲಿನ 118ನೇ ವರ್ಷದ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ



ಪಿ. ರಾಜೇಶ್ವರಿ
ಅಧ್ಯಕ್ಷರು
9980532363

ಸನ್ಮಾನ್ಯ ಸದಸ್ಯರುಗಳಲ್ಲಿ ವಿನಂತಿ,

ಈ ಬ್ಯಾಂಕಿನ 2023-2024 ಸಾಲಿನ 118ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 15.09.2024ರ ಭಾನುವಾರದಂದು ಬೆಳಿಗ್ಗೆ 10:00 ಗಂಟೆಗೆ ಮೈಸೂರು ನಗರದ ದೊಡ್ಡಕೆರೆ ಮೈದಾನದಲ್ಲಿರುವ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ "ಗಾನಕೋಗಿಲೆ ಪಿ.ಕಾಳಿಂಗರಾವ್ ಗಾನ ಮಂಟಪ'ದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ.ಪಿ.ರಾಜೇಶ್ವರಿ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ.ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಆಹ್ವಾನ ಪತ್ರದ ವರದಿ ಪುಸ್ತಕಗಳನ್ನು ಕಳುಹಿಸಲಾಗಿದೆ. ಆಹ್ವಾನ ಪತ್ರದ ವರದಿ ಪುಸ್ತಕ ತಲುಪದಿದ್ದರೆ,ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಆಗಮಿಸಿ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.



ಪಿ. ಸವಿತಾ (B.Sc.)
ಉಪಾಧ್ಯಕ್ಷರು
7259898822



ಆರ್. ರವಿಕುಮಾರ್	ನಿರ್ದೇಶಕರು	973156007
ಎಸ್.ಬಿ.ಎಂ.ಮಂಜು M.A.	ನಿರ್ದೇಶಕರು	9886249004
ಜೆ.ಯೋಗೇಶ್	ನಿರ್ದೇಶಕರು	9900501066
ಹೆಚ್.ಹರೀಶ್‌ಕುಮಾರ್	ನಿರ್ದೇಶಕರು	9845517191
ಕೆ.ಉಮಾಶಂಕರ್ B.Com.	ನಿರ್ದೇಶಕರು	9448222389
ಎಸ್.ಅರವಿಂದ (B.Sc.)	ನಿರ್ದೇಶಕರು	7353137359
ಎ.ಮಂಚಪ್ಪ	ನಿರ್ದೇಶಕರು	9845667887
ಎಂ.ರಾಮಕೃಷ್ಣ	ನಿರ್ದೇಶಕರು	9740093202
ಸಿ.ರೇವಣ್ಣ	ನಿರ್ದೇಶಕರು	9845509941
ಆರ್.ರವಿಕುಮಾರ್ B.Com	ನಿರ್ದೇಶಕರು	9449133138
ಎಸ್.ಶಿಲ್ಪಾ	ನಿರ್ದೇಶಕರು	6360813272
ಎಂ.ವೈ.ರಮೇಶ್‌ಗೌಡ	ವೃತ್ತಿಪರ ನಿರ್ದೇಶಕರು	9448054717
ಸಿ.ಎಸ್.ರಾಮಕೃಷ್ಣಯ್ಯ M.Sc.	ವೃತ್ತಿಪರ ನಿರ್ದೇಶಕರು	9448291289
ಕೆ.ಹರ್ಷಿತ್ ಗೌಡ M.B.A.	ಮುಖ್ಯ ಕಾರ್ಯನಿರ್ವಹಣಾಧಿಕಾರಿ	9148037007

* ಸನ್ಮಾನ್ಯ ಸದಸ್ಯರುಗಳು ತಪ್ಪದೇ ಸಭೆಗೆ ತಮ್ಮ ಸದಸ್ಯತ್ವದ ಷೇರು ಪಾಸ್ ಪುಸ್ತಕದೊಂದಿಗೆ ಖುದ್ದು ಹಾಜರಾಗಿ ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕೆಂದು ಕೋರುತ್ತೇವೆ.
* ವಾರ್ಷಿಕ ಮಹಾಸಭೆಯ ದಿನದಂದು ಸದಸ್ಯತ್ವದ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತರತಕ್ಕದ್ದು. * ಬ್ಯಾಂಕಿನ ಸದಸ್ಯರ ಅನುಕೂಲಕ್ಕಾಗಿ ಮಹಾಸಭೆಯ ದಿನದಂದೆ ಉಳಿತಾಯ ಖಾತೆಯನ್ನು ತೆರೆಯುವ ಅಭಿಯಾನ ಹಾಗೂ ಮರಣನಿಧಿ ವಂತಿಗೆಯನ್ನು ಸ್ವೀಕರಿಸಲಾಗುವುದು ದಯಮಾಡಿ ಇದರ ಸದುಪಯೋಗವನ್ನು ಪಡೆಯಬೇಕೆಂದು ಕೋರುತ್ತೇವೆ.

ಪ್ರಕಟಣೆ : **ಚಿನ್ನಾಭರಣ ಸಾಲ** ಒಂದು ಗ್ರಾಂ ಶುದ್ಧ ಚಿನ್ನಕ್ಕೆ ರೂ.4600/-ಗಳಂತೆ ವಾರ್ಷಿಕ ಬಡ್ಡಿ ಶೇ.9.5% ರಂತೆ (ಪ್ರತಿ ತಿಂಗಳು ರೂ.100/- ಕ್ಕೆ ರೂ.0.78 ಪೈಸೆ ಬಡ್ಡಿ ದರದಲ್ಲಿ) ಸಾಲ ನೀಡಲಾಗುತ್ತದೆ.

ಪ್ರಕಟಣೆ : * **"ಖಾಯಂ ಠೇವಣಿಗಳ ಮೇಲೆ ಅತ್ಯಾಕರ್ಷಕ ಬಡ್ಡಿದರ** (ಒಂದು ವರ್ಷದ ಅವಧಿಗೆ).
* ಹಿರಿಯ ನಾಗರಿಕರಿಗೆ ಶೇ.8.5%ರಷ್ಟು ಮತ್ತು ಸಾಮಾನ್ಯ ನಾಗರೀಕರಿಗೆ ಶೇ.8%ರಷ್ಟು ಬಡ್ಡಿ ನೀಡಲಾಗುವುದು

ಆಡಳಿತ ಮಂಡಲಿ ಅಪ್ಪಣೆ ಮೇರೆಗೆ
ಸಹಿ/-
ಮುಖ್ಯಕಾರ್ಯನಿರ್ವಹಣಾಧಿಕಾರಿ